ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 19 ಮಂಗಳವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 94 | ಪುಟಗಳು: 10

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಉಪ ರಾಷ್ಟ್ರಪತಿ ಚುನಾವಣೆ

ಜಗದೀಪ್ ಧಂಕರ್ ನಾಮಪತ್ರ ಸಲ್ಲಿಕೆ

ಪ್ರಧಾನಿ ಮೋದಿ ಸೇರಿ ಹಲವು ಗಣ್ಯರ ಉಪಸ್ಥಿತಿ



ನವದೆಹಲಿ: ಉಪರಾಷ್ಟ್ರಪತಿ ಸ್ಥಾನಕ್ಕೆ ಬಿಜೆಪಿ ನೇತೃತ್ವದ ಎನ್‌ಡಿಎ ಅಭ್ಯರ್ಥಿ ಜಗದೀಪ್ ಧಂಖರ್ ಅವರು ಸೋಮವಾರ ನಾಮಪತ್ರ ಸಲ್ಲಿಸಿದ್ದು, ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಹಾಲಿ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ಸೇವೆ ಸಲ್ಲಿಸುತ್ತಿರುವ ಜಗದೀಪ್ ಧಂಖರ್ ಅವರನ್ನು ಈ ಹಿಂದೆ ನಡೆದ ಬಿಜೆಪಿ ಸಂಸದೀಯ ಸಭೆಯಲ್ಲಿ ಉಪ ರಾಷ್ಟ್ರಪತಿ ಚುನಾವಣೆಯ ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಗಿತ್ತು. ಈ ಬಗ್ಗೆ ಸ್ವತಃ ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ ಮಾಧ್ಯಮಗಳಿಗೆ ಮಾಹಿತಿ ನೀಡಿದ್ದರು.

ಇದೀಗ ಜಗದೀಪ್ ಧಂಖರ್ ಅವರು ಉಪ ರಾಷ್ಟ್ರಪತಿ ಚುನಾವಣೆಗೆ ಅಧಿಕೃತವಾಗಿ ತಮ್ಮ ಉಮೇದುವಾರಿಕೆ ಸಲ್ಲಿಕೆ ಮಾಡಿದ್ದಾರೆ. ಈ ವೇಳೆ ಪ್ರಧಾನಿ ಮೋದಿ ಅವರ ಜೊತೆಗೆ ಸಚಿವರಾದ ರಾಜನಾಥ್ ಸಿಂಗ್, ಅಮಿತ್ ಶಾ, ಜೆಪಿ ನಡ್ಡಾ ಅವರಿಗೆ ಸಾಥ್ ನೀಡಿದ್ದರು. ರಾಜಸ್ಥಾನದಲ್ಲಿ ಬಿಜೆಪಿಯೊಂದಿಗೆ ಸುದೀರ್ಘ ರಾಜಕೀಯ ಇತಿಹಾಸ ಹೊಂದಿದ್ದ ಧಂಕರ್‌ರನ್ನು ಈ ಹಿಂದೆ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ನೇಮಕ ಮಾಡಲಾಗಿತ್ತು. ಇದೀಗ ಅವರು ಉಪ ರಾಷ್ಟ್ರಪತಿ ಚುನಾವಣೆಯ ಎನ್‌ಡಿಎ ಅಭ್ಯರ್ಥಿಯಾಗಿದ್ದು, ಆ.6ರಂದು ನಡೆಯಲಿರುವ ಚುನಾವಣೆಯಲ್ಲಿ ಅವರು ಪ್ರತಿಪಕ್ಷಗಳು ಕಣಕ್ಕಿಳಿಸಿರುವ ಹಿರಿಯ ಕಾಂಗ್ರೆಸ್ ನಾಯಕಿ ಮಾರ್ಗರೆಟ್ ಆಳ್ವಾ ಅವರನ್ನು ಚುನಾವಣೆಯಲ್ಲಿ ಎದುರಿಸಲಿದ್ದಾರೆ. ನಿನ್ನೆಯಷ್ಟೇ ಧಂಖರ್ ಅವರು ವಿವಿಧ ಪಕ್ಷಗಳ ಸಂಸದರನ್ನು ಭೇಟಿಯಾಗಿ ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದ್ದರು.

ರಾಷ್ಟ್ರಪತಿ ಚುನಾವಣೆ

ರಾಜ್ಯದಲ್ಲಿ 226 ಮತ ಚಲಾವಣೆ

ದ್ರೌಪದಿ ಮುರ್ಮು ಪರ ಅತ್ಯಧಿಕ ಮತ ಸಾಧ್ಯತೆ; ಇವರಿಗೆ ಬಿಜೆಪಿ, ಜೆಡಿಎಸ್, ಪಕ್ಷೇತರ ಸದಸ್ಯರಿಂದ ಮತದಾನ

ಬೆಂಗಳೂರು, ಜು.18(ಕೆಎಂಶಿ)–ಎನ್‌ಡಿಎ ಬೆಂಬಲಿತ ರಾಷ್ಟ್ರಪತಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ದ್ರೌಪದಿ ಮುರ್ಮು ಅವರಿಗೆ ರಾಜ್ಯದಲ್ಲಿ ಹೆಚ್ಚು ಮತಗಳು ಚಲಾವಣೆ ಆಗಿವೆ. ಆಡಳಿತಾರೂಢ ಬಿಜೆಪಿಯ ಸದಸ್ಯರಲ್ಲದೆ, ಜೆಡಿಎಸ್ ಹಾಗೂ ಪಕ್ಷೇತರ ಸದಸ್ಯರು ಮುರ್ಮು ಅವರಿಗೆ ಮತ ನೀಡಿದ್ದಾರೆ.

ಬೆಳಗ್ಗೆ 10 ಗಂಟೆಗೆ ಮತದಾನ ಆರಂಭವಾಗುತ್ತಿದ್ದಂತೆ ಬಿಜೆಪಿಯ ಸದಸ್ಯರು ತಮ್ಮ ಹಕ್ಕು ಚಲಾಯಿಸಿದರು. ರಾಷ್ಟ್ರಪತಿ ಚುನಾವಣೆಯಲ್ಲಿ ರಾಜ್ಯದಿಂದ 224 ಶಾಸಕರು ಹಾಗೂ ಒಬ್ಬರು ರಾಜ್ಯಸಭಾ ಸದಸ್ಯರು ಮತ್ತು ಒಬ್ಬರು ಲೋಕಸಭಾ ಸದಸ್ಯರು ಸೇರಿ ಒಟ್ಟು 226 ಮತದಾರರು ಮತದಾನ ಮಾಡಿದರು. ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಖುದ್ದು ತಮ್ಮ ಪಕ್ಷದ ಮತದಾನದ ಹಕ್ಕು ಚಲಾಯಿಸುವ ಉಸ್ತುವಾರಿ ನಿರ್ವಹಣೆ ಮಾಡಿದರು. ಜೆಡಿಎಸ್ ಸದಸ್ಯರು ಒಟ್ಟಾಗಿ ಬಂದು ಮುರ್ಮು ಪರ ಮತ ಚಲಾಯಿಸಿದರು. ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಸದಸ್ಯ ವಿ.ಶ್ರೀನಿವಾಸ್ ಪ್ರಸಾದ್ ಅವರು ಚುನಾವಣಾ ಆಯೋಗದ ಅನುಮತಿ ಪಡೆದು ಇಲ್ಲೇ ಮತ ಚಲಾಯಿಸಿದರು.

ರಾಷ್ಟ್ರಪತಿ ಅಭ್ಯರ್ಥಿ ಚುನಾವಣೆಯಲ್ಲೂ ಕೆಲವು ಸದಸ್ಯರ ಅಡ್ಡಮತದಾನ ನಡೆದಿರುವ ಬಗ್ಗೆ ಗುಸು ಗುಸು ಕೇಳಿಬಂದಿದೆ. ಮುರ್ಮು ಪ್ರತಿಸ್ಪರ್ಧಿಯಾದ ಪ್ರತಿಪಕ್ಷಗಳ ಅಭ್ಯರ್ಥಿ ಯಶವಂತ ಸಿನ್ಹಾ ಅವರಿಗೆ ಕಾಂಗ್ರೆಸ್ ಸದಸ್ಯರು ಮತ ಚಲಾಯಿಸಿದರು. ಮುಖ್ಯಮಂತ್ರಿ ಅವರು ಈ ಚುನಾವಣೆ ಪ್ರತಿಷ್ಠೆಯಾಗಿ ಪರಿಗಣಿಸಿ ತಮ್ಮದಲ್ಲದ ಮತ ಪಡೆಯಲು ತೆರೆಮರೆಯ ಕಸರತ್ತು ನಡೆಸಿದರು.

ಜಯಚಾಮರಾಜೇಂದ್ರ ಒಡೆಯರ್ ಜನ್ಮ ದಿನಾಚರಣೆ



ಜಯಚಾಮರಾಜ ಒಡೆಯರ್ ಅವರ ಹುಟ್ಟುಹಬ್ಬವನ್ನು ಚಾಮುಂಡಿ ಬೆಟ್ಟದ ಗೆಳೆಯರ ಬಳಗದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಮುಖ್ಯ ಆಗಮಿಕ ಡಾ.ಶಶಿಶೇಖರ ದೀಕ್ಷಿತ್, ಎಂ.ಡಿ.ಸೋಮಣ್ಣ, ಚಾಮುಂಡಿಬೆಟ್ಟದ ಗ್ರಾಮ ಪಂಚಾಯಿತಿ ಅಧ್ಯಕ್ಷ ಭರತ್ ಕೆ., ಗ್ರಾಮ ಪಂಚಾಯಿತಿ ಸದಸ್ಯ ಮಂಜುನಾಥ್, ಬಿಎಸ್‌ಎನ್‌ಎಲ್ ನಿವೃತ್ತ ಅಧಿಕಾರಿ ಮಹದೇವ್, ಪೊಲೀಸ್ ನಿವೃತ್ತ ಅಧಿಕಾರಿ ರಾಜಣ್ಣ, ನಾಯಕರ ಸಂಘದ ಉಪಾಧ್ಯಕ್ಷ ಶಿವರಾಮ್ ನಾಯಕ್, ಚೇತನ್, ಪ್ರಕಾಶ್, ಮಹಾಬಲೇಶ್ವರ ಸೊಸೈಟಿ ನಿರ್ದೇಶಕ ಮುದ್ದಪ್ಪ ದಿನೇಶ್, ಪಿಡಿಓ ರೂಪೇಶ್, ರವಿ, ನಾಯಕ ಸಂಘದ ಯುವ ಮುಖಂಡ ಮಂಜುನಾಯಕ ಹಾಗೂ ಚಾಮುಂಡಿ ಬೆಟ್ಟದ ಗ್ರಾಮಸ್ಥರು ಉಪಸ್ಥಿತರಿದ್ದರು.




ಮೈಸೂರಿನ ಪಡುವಾರಹಳ್ಳಿಯಲ್ಲಿ ಸಸಿ ನೆಡುವ ಮೂಲಕ ಜಯಚಾಮರಾಜ ಒಡೆಯರ್ ಅವರ 103ನೇ ಜಯಂತಿ ಆಚರಿಸಲಾಯಿತು. ಈ ವೇಳೆ ನಗರಪಾಲಿಕೆ ಸದಸ್ಯರೂ ಆದ ಪರಿಸರ ಪ್ರೇಮಿ ಕೆ.ವಿ.ಶ್ರೀಧರ್, ಎಂ. ಚಿಕ್ಕವೆಂಕಟು, ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್ ಕುಮಾರ್, ಸಿ.ಡಿ.ಕುಮಾರ್, ಬಿ.ಕುಮಾರ್, ಬಿ.ಕುಮಾರ್,ಕೇಬಲ್ ಕಿಟ್ಟಿ, ಸುರೇಂದ್ರ, ಮಂಜುನಾಥಪುರ ಎಂ. ಮಹೇಶ್ ಇದ್ದರು.

ಎಇಇ ಪರೀಕ್ಷೆಯಲ್ಲಿ ನಗರದ ವಿದ್ಯಾರ್ಥಿಗಳ ಸಾಧನೆ

ಮೈಸೂರು, ಜು. 18– ಎಇಇ ಪರೀಕ್ಷೆಯಲ್ಲಿ ಮೈಸೂರಿನ ಆಕಾಶ್ ಸಂಸ್ಥೆಯ 3 ವಿದ್ಯಾರ್ಥಿಗಳು ಮೊದಲ ಅಧಿವೇಶನದಲ್ಲಿ ಶೇ.99 ಮತ್ತು ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸುವ ಮೂಲಕ ಸಾಧನೆ ಮಾಡಿದ್ದಾರೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಫಲಿತಾಂಶ ಪ್ರಕಟಿಸಿದ್ದು, ಸಯಾನ್ ಶೇ.99.70, ಧ್ಯಾನ್ ಶೇ.99.45 ಮತ್ತು ಪಿ.ವರುಣ್ ರಾಜ್ ಶೇ.99.21 ಅಂಕಗಳೊಂದಿಗೆ ಅಗ್ರ ಅಂಕ ಪಡೆದವರಾಗಿದ್ದಾರೆ. ಅವರು ಉನ್ನತ ಶೇಕಡಾವಾರುಗಳ ಗಣ್ಯರ ಪಟ್ಟಿಗೆ ತಮ್ಮ ಪ್ರವೇಶವನ್ನು ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಅವರ ಪ್ರಯತ್ನಗಳು ಮತ್ತು ಅವರ ಕಲಿಕೆಯ ವೇಳಾಪಟ್ಟಿಗೆ ಕಟ್ಟುನಿಟ್ಟಾದ ಅನುಸರಣೆಗೆ ಕಾರಣರಾಗಿದ್ದಾರೆ ಎಂದು ನಿರ್ದೇಶಕ ಆಕಾಶ್ ಚೌಧರಿ ತಿಳಿಸಿದರು.



ಸಯಾನ್



ಧ್ಯಾನ್



ಪಿ.ವರುಣ್‌ರಾಜ್

ರಾಜರಾಜೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ



ಮೈಸೂರು ನಗರದ ಗನ್‌ಹೌಸ್ ಬಳಿ ಇರುವ ಶಂಕರ ಮಠದ ಆವರಣದಲ್ಲಿ ಶ್ರೀ ರಾಜರಾಜೇಶ್ವರಿ ಸೇವಾ ಟ್ರಸ್ಟ್ ವತಿಯಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮಹಾರಾಜ ಸಂಸ್ಕೃತ ಪಾಠಶಾಲೆಯ ಪ್ರಾಧ್ಯಾಪಕ ವಿದ್ವಾನ್ ಸತ್ಯನಾರಾಯಣ, ಟ್ರಸ್ಟ್‌ನ ಗೌರವ ಕಾರ್ಯದರ್ಶಿ ನಾಗೇಂದ್ರನ್ ಆರ್.ತುಪ್ಪೂರ್, ಟ್ರಸ್ಟ್ ಅಧ್ಯಕ್ಷ ಹಾಗೂ ಮುಖ್ಯ ಶಿಕ್ಷಕ ಸುರೇಶ್, ಖಜಾಂಚಿ ಸತೀಶ್, ಪದಾಧಿಕಾರಿಗಳಾದ ಕೃಷ್ಣಪ್ರಸಾದ್, ನವೀನ್‌ಕುಮಾರ್, ವೆಂಕಟೇಶ್ ಕಿಕ್ಕೇರಿ, ಮಹಾರಾಜ ಕಾಲೇಜಿನ ಪ್ರಾಧ್ಯಾಪಕ ಡಾ.ಬಿ.ಆರ್.ಸತ್ಯನಾರಾಯಣ, ಉಪನ್ಯಾಸಕರಾದ ಪ್ರಭಾಕರ್, ಶ್ರೀಕಂಠಶರ್ಮ, ಕೋಟೆ ನಾಗೇಂದ್ರ, ಶಿವಪ್ರಸಾದ್ ಮತ್ತಿತರರು ಉಪಸ್ಥಿತರಿದ್ದರು.

ಆಹಾರ ವಿಜ್ಞಾನಿಗಳು ಮತ್ತು ತಂತ್ರಜ್ಞರ ಸಂಘ (ಭಾರತ) ಆಯೋಜಿಸಿದ್ದ ವಿಚಾರ ಸಂಕಿರಣ

ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿ

'ಪೋಷಕಾಂಶ ಸುರಕ್ಷತೆಗಾಗಿ ಸುಸ್ಥಿರ ಆಹಾರ ಸರಬರಾಜು' ವಿಚಾರ ಸಂಕಿರಣದಲ್ಲಿ ಕುಲಪತಿ ಪ್ರೊ.ಎಸ್.ಅಯ್ಯಪ್ಪನ್ ಸಲಹೆ

ಮೈಸೂರು, ಜು.18 (ಆರ್‌ಕೆಬಿ)–ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅತ್ಯಾಧುನಿಕ ತಂತ್ರಜ್ಞಾನ ಮತ್ತು ನ್ಯಾನೊ–ಗೊಬ್ಬರಗಳ ಬಳಕೆಯನ್ನು ಕಾಪಾಡಿಕೊಳ್ಳುವುದು ಪ್ರಮುಖವಾಗಿದೆ ಎಂದು ಇಂಫಾಲ್‌ನ ಕೇಂದ್ರ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷರೂ ಆಗಿರುವ ಪ್ರೊ.ಎಸ್.ಅಯ್ಯಪ್ಪನ್ ತಿಳಿಸಿದರು.

ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಅಸೋಸಿಯೇಷನ್ ಆಫ್ ಫುಡ್ ಸೈಂಟಿಸ್ಟ್ಸ್ ಮತ್ತು ಟೆಕ್ನಾಲಜಿಸ್ಟ್ಸ್–ಇಂಡಿಯಾ (ಎಎಫ್‌ಎಸ್‌ಟಿ–ಐ) ಮೈಸೂರಿನ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು, 'ಪೋಷಕಾಂಶ ಸುರಕ್ಷತೆಗಾಗಿ ಸುಸ್ಥಿರ ಆಹಾರ ಸರಬರಾಜು' ಕುರಿತು ಮಾತನಾಡಿದರು.

ಬದಲಾದ ಕಾಲಮಾನದಲ್ಲಿ ಪೋಷಕಾಂಶಯುಕ್ತ ಆಹಾರಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಹೀಗಾಗಿ ಆಹಾರ ಸಂಸ್ಕರಣೆಗೆ ಹೆಚ್ಚು ಮಹತ್ವ ಬರಲಿದೆ. ಮುಂದಿನ ದಿನಗಳಲ್ಲಿ ಸಿರಿಧಾನ್ಯಗಳು ಸೇರಿದಂತೆ ಇನ್ನಿತರ ಪೋಷಕಾಂಶಯುಕ್ತ ಆಹಾರಕ್ಕೆ ಹೆಚ್ಚು ಮಹತ್ವ ಬರಲಿದೆ. ಆದರೆ ಸೃಷ್ಟಿಯಾಗುವ ಈ ಬೇಡಿಕೆಗೆ ತಕ್ಕಂತೆ ಉತ್ಪಾದನೆಯಾಗುತ್ತಿಲ್ಲ. ಈ ಸಂದರ್ಭವನ್ನು ರೈತರು ಬಳಕೆ ಮಾಡಿಕೊಳ್ಳಬೇಕು. ಮಾತ್ರವಲ್ಲದೇ ಈ ಮಾದರಿಯ ಆಹಾರ ಬಳಕೆ ಸಂದರ್ಭದಲ್ಲಿ ಆಹಾರ ಸಂಸ್ಕರಣೆ ತಂತ್ರಜ್ಞಾನಕ್ಕೆ ಹೆಚ್ಚು ಮಹತ್ವ ಬರಲಿದೆ. ಹೀಗಾಗಿ ಹೆಚ್ಚು ಮಂದಿ ಈ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಆಹಾರ ಸಂಸ್ಕರಣೆ ವಿಚಾರ ಹೆಚ್ಚು ಮಹತ್ವ ಪಡೆಯುತ್ತಿದ್ದಂತೆ ದೇಹಕ್ಕೆ ಅತ್ಯುಪಯುಕ್ತವಾದ ತರಕಾರಿಗಳನ್ನು ಹೆಚ್ಚು ದಿನಗಳವರೆಗೆ ಇಟ್ಟು ಬಳಕೆ ಮಾಡಿಕೊಳ್ಳುವ ಸಂಸ್ಕರಣೆ ಮತ್ತಷ್ಟು ಮಹತ್ವ ಪಡೆದುಕೊಳ್ಳಲಿದೆ. ತರಕಾರಿ ಬೆಳೆ ಬೆಳೆಯುವ ರೈತರು ಸಂಸ್ಕರಣೆಗೂ ಹೆಚ್ಚು ಒತ್ತು ನೀಡಬೇಕು. ಇದಕ್ಕಾಗಿ ಇರುವ ಹೊಸ ತಂತ್ರಜ್ಞಾನಗಳನ್ನು ಬಳಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ಬ್ರೆಜಿಲ್‌ನಲ್ಲಿ ಸುಮಾರು 250 ಎಕರೆ ಪ್ರದೇಶದಲ್ಲಿ ಜಮೀನಿನ ಮಾಲೀಕರೊಬ್ಬರು ನಿಯಂತ್ರಣ ಹೊಂದಿದ್ದು, ಭಾರತದಲ್ಲಿ 4 ಎಕರೆ ಜಮೀನು ಹೊಂದಿರುವ ರೈತರನ್ನು 'ಭೂಮಾಲೀಕರು' ಎಂದು ಕರೆಯುವುದು ಇದಕ್ಕೆ ತದ್ವಿರುದ್ಧವಾಗಿದೆ ಎಂದು ಪ್ರೊ.ಅಯ್ಯಪ್ಪನ್ ಹೇಳಿದರು.

ಆಗ್ರೋ ಮತ್ತು ಮ್ಯಾರಿನ್ ಆಹಾರ ಸಂಸ್ಕರಣೆಗೆ ನವೀನ, ಸ್ಮಾರ್ಟ್ ಮತ್ತು ಸುರಕ್ಷಿತ ಪರಿಹಾರಗಳನ್ನು ಕಂಡುಹಿಡಿಯುವ ಅಗತ್ಯವನ್ನು ಒತ್ತಿಹೇಳುವ ಮತ್ತು ಸುಸ್ಥಿರ ಪೌಷ್ಟಿಕ ಭದ್ರತೆಯನ್ನು ಸಾಧಿಸುವ ಅಗತ್ಯವನ್ನು ಒತ್ತಿ ಹೇಳಿದರು. ಆಹಾರ ಮತ್ತು ಕೃಷಿಯಲ್ಲಿ ಆಚರಣೆಯಲ್ಲಿರುವ ಮಾನದಂಡಗಳು ಮತ್ತು ಅಭ್ಯಾಸಗಳನ್ನು ನಾವು ಅಳವಡಿಸಿಕೊಳ್ಳಬೇಕು ಎಂದರು.

ಇಂದು ಹೆಚ್ಚು ವಾಣಿಜ್ಯೀಕರಣಗೊಳ್ಳುತ್ತಿದೆ. ಆಹಾರ ಧಾನ್ಯ ಉತ್ಪಾದನೆಯನ್ನು ಹೆಚ್ಚಿಸಲು ಹೊಸ ತಂತ್ರಜ್ಞಾನಗಳ ಬಳಕೆಯು ಪೌಷ್ಟಿಕಾಂಶದ ಭದ್ರತೆಯನ್ನು ಸಾಧಿಸಲು ಪ್ರಮುಖವಾಗಿದೆ. ರಾಗಿ ಮತ್ತು ಇನ್ನಿತರೆ ಬೆಳೆಗಳನ್ನು ಸಹ ತೋಟಗಾರಿಕಾ ಬೆಳೆಗಳ ಅಡಿಯಲ್ಲಿ ತರಬೇಕು ಎಂದು ಹೇಳಿದರು. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವ ಅಗತ್ಯತೆ ಮತ್ತು ಅಲ್ಪಾವಧಿಯ ಪ್ರೋತ್ಸಾಹ ಯೋಜನೆ ಮತ್ತು ರಾಷ್ಟ್ರೀಯ ಕೃಷಿ ಶಿಕ್ಷಣ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕೆ ಒತ್ತು ನೀಡುವಂತೆ ಸಲಹೆ ನೀಡಿದ ಪ್ರೊ.ಅಯ್ಯಪ್ಪನ್, ಭಾರತೀಯ ಕೃಷಿ ಕುರಿತು ಪವರ್ ಪಾಯಿಂಟ್ ಪ್ರಾತ್ಯಕ್ಷಿಕೆ ನೀಡಿ, ಇಂದು ಪೌಷ್ಟಿಕ ಆಹಾರ ಉತ್ಪಾದನೆ ಕಡಿಮೆಯಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಗೌರವ ಅತಿಥಿಯಾಗಿದ್ದ ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್ ಅವರು ಕಾರ್ಯಕ್ರಮದಲ್ಲಿ ವೆಬಿನಾರ್ ಮೂಲಕ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಐಸಿಎಆರ್–ಸಿಐಎಫ್‌ಇ ನಿರ್ದೇಶಕ ಮತ್ತು ಕುಲಪತಿ ಡಾ.ಸಿ.ಎನ್.ರವಿಶಂಕರ್, ಎಎಫ್‌ಎಸ್‌ಟಿ–ಐ ರಾಷ್ಟ್ರೀಯ ಅಧ್ಯಕ್ಷ ಡಾ.ಅಲೋಕ್ ಕುಮಾರ್ ಶ್ರೀವಾಸ್ತವ, ಕಾರ್ಯದರ್ಶಿ ಡಾ.ನಂದಿನಿ ಪಿ.ಶೆಟ್ಟಿ, ಸಲಹೆಗಾರ ಡಾ.ಎನ್.ಭಾಸ್ಕರ್, ಮೈಸೂರು ಡಿಎಫ್‌ಆರ್‌ಎಲ್ ಮಾಜಿ ನಿರ್ದೇಶಕ ಡಾ.ಎ.ಎಸ್.ಬಾವ ಇನ್ನಿತರರು ಉಪಸ್ಥಿತರಿದ್ದರು.



ಆಜಾದಿ ಕಾ ಅಮೃತ್ ಮಹೋತ್ಸವ ಅಂಗವಾಗಿ ಮೈಸೂರಿನ ಸಿಎಫ್‌ಟಿಆರ್‌ಐ ಆವರಣದಲ್ಲಿ ಎಎಫ್‌ಎಸ್‌ಟಿ–ಐ ಆಯೋಜಿಸಿದ್ದ 'ಪೋಷಕಾಂಶ ಸುರಕ್ಷತೆಗಾಗಿ ಸುಸ್ಥಿರ ಆಹಾರ ಸುಬರಾಜು' ವಿಚಾರ ಸಂಕಿರಣವನ್ನು ಇಂಫಾಲ್ ಕೇಂದ್ರ ಕೃಷಿ ವಿಶ್ವವಿದ್ಯಾಲಯದ ಕುಲಪತಿಯೂ ಆಗಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎಸ್.ಅಯ್ಯಪ್ಪನ್ ಉದ್ಘಾಟಿಸಿದರು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಮೈಸೂರು ಡಿಎಫ್‌ಆರ್‌ಎಲ್ ಮಾಜಿ ನಿರ್ದೇಶಕ ಡಾ.ಎ.ಎಸ್.ಬಾವ, ಎಎಫ್‌ಎಸ್‌ಟಿ–ಐ ರಾಷ್ಟ್ರೀಯ ಅಧ್ಯಕ್ಷ ಡಾ.ಅಲೋಕ್‌ಕುಮಾರ್ ಶ್ರೀವಾಸ್ತವ, ಐಸಿಎಆರ್–ಸಿಐಎಫ್‌ಇ ನಿರ್ದೇಶಕ ಮತ್ತು ಕುಲಪತಿ ಡಾ.ಸಿ.ಎನ್. ರವಿಶಂಕರ್, ಎಎಫ್‌ಎಸ್‌ಟಿ–ಐ ಕಾರ್ಯದರ್ಶಿ ನಂದಿನಿ ಪಿ.ಶೆಟ್ಟಿ, ಸಲಹೆಗಾರ ಡಾ.ಎನ್.ಭಾಸ್ಕರ್ ಅವರನ್ನು ಕಾಣಬಹುದು.

ಚಾಮುಂಡಿಬೆಟ್ಟ ಅಭಿವೃದ್ಧಿಗೆ 'ಪ್ರಸಾದ್' ಯೋಜನೆ ಹೊಸ ಪ್ರಸ್ತಾವನೆಗೆ ಅಂಗೀಕಾರ ನೀಡುವಂತೆ

ಕೇಂದ್ರ ಪ್ರವಾಸೋದ್ಯಮ ಸಚಿವರಲ್ಲಿ ಸಂಸದ ಪ್ರತಾಪ್‌ಸಿಂಹ ಮನವಿ

ಮೈಸೂರು, ಜು.18(ಆರ್‌ಕೆಬಿ)–ಮೈಸೂರಿನ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಸಾದ್ ಯೋಜನೆಯ ಪ್ರಸ್ತಾವನೆಗೆ ಅಂಗೀಕಾರ ನೀಡುವಂತೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಸೋಮವಾರ ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವ ಕಿಶನ್ ರೆಡ್ಡಿ ಅವರಲ್ಲಿ ಮನವಿ ಮಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಧಾರ್ಮಿಕ ಶ್ರದ್ಧಾ ಕೇಂದ್ರಗಳ ಅಭಿವೃದ್ಧಿಗಾಗಿ ಜಾರಿಗೆ ತಂದಿರುವ 'ಪ್ರಸಾದ್' ಯೋಜನೆಯಡಿ ಮೈಸೂರಿನ ಚಾಮುಂಡಿ ಬೆಟ್ಟದ ಅಭಿವೃದ್ಧಿಗೆ ಆಯ್ಕೆ ಮಾಡಿ ನಾಲ್ಕು ವರ್ಷಗಳಾಗಿವೆ. ಆದರೆ ಸರಿಯಾದ ಪ್ರಸ್ತಾವನೆ ಕಳುಹಿಸದೆ ಅಂತಿಮ ಒಪ್ಪಿಗೆ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಹೊಸ ಪ್ರಸ್ತಾವನೆಯನ್ನು ಕೇಂದ್ರ ಪ್ರವಾಸೋದ್ಯಮ ಇಲಾಖೆಗೆ ಸಲ್ಲಿಸಲಾಗಿದೆ. ಇದಕ್ಕೆ ತಕ್ಷಣ ಅಂಗೀಕಾರ ನೀಡಬೇಕೆಂದು ಸಂಸದ ಪ್ರತಾಪ್‌ಸಿಂಹ ಅವರು ಕೇಂದ್ರ ಪ್ರವಾಸೋದ್ಯಮ ಖಾತೆ ಸಚಿವ ಕಿಶನ್ ರೆಡ್ಡಿ, ಇಲಾಖೆಯ ಜಂಟಿ ನಿರ್ದೇಶಕಿ ರೂಪಿಂದರ್ ಬ್ರಾರ್ ಮತ್ತು ಅಧೀನ ಕಾರ್ಯದರ್ಶಿ ಎಸ್.ಎಸ್.ವರ್ಮ ಅವರೊಂದಿಗೆ ಚರ್ಚಿಸಿ, ಯೋಜನೆಯ ಪ್ರಸ್ತಾವನೆಗೆ ಅಂಗೀಕಾರ ನೀಡುವಂತೆ ಮನವಿ ಮಾಡಿದರು.



ವಾಣಿಜ್ಯ ಪರೀಕ್ಷೆಗಳ ಹಿನ್ನೆಲೆ ನಿಷೇಧಾಜ್ಞೆ ಜಾರಿ

ಮೈಸೂರು, ಜು.18–ಮೈಸೂರು ಎನ್.ಆರ್.ಮೊಹಲ್ಲಾದ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (ಹೆಣ್ಣು ಮಕ್ಕಳ)ಯಲ್ಲಿ ಜು.18ರಿಂದ 30ರವರೆಗೆ ವಾಣಿಜ್ಯ ಪರೀಕ್ಷೆಗಳು ನಡೆಯ ಲಿದ್ದು, ಪರೀಕ್ಷೆಗಳು ನಡೆಯಲಿರುವ ಕೇಂದ್ರದ 200 ಮೀ. ವ್ಯಾಪ್ತಿ ಸುತ್ತಲೂ ಬೆಳಗ್ಗೆ 6ರಿಂದ ಸಂಜೆ 6ರವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಈ ಪ್ರದೇಶಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಹಾಗೂ ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಎಂದು ಆದೇಶಿಸಿ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಣ್ಣಿನ ಉಚಿತ ತಪಾಸಣೆ ಶಿಬಿರ

ಮೈಸೂರು, ಜು. 18 – ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆ ವತಿಯಿಂದ ಪ್ರತಿ ಬುಧವಾರದಂದು ಮೈಸೂರಿನ ಹಿರಿಯ ನಾಗರಿಕರಿಗೆ ಉಚಿತ ಕಣ್ಣಿನ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರ ಮತ್ತು ಸಂಯ್ಯಾಜಿರಾವ್ ರಸ್ತೆಯ ಆಸ್ಪತ್ರೆಯ ಶಾಖೆಗಳಿಗೆ ಭೇಟಿ ನೀಡಿ ಇದರ ಸದುಪಯೋಗಪಡೆದುಕೊಳ್ಳಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8884477956 ಸಂಪರ್ಕಿಸಬಹುದು.

ಅಗ್ನಿಪಥ್ ತರಬೇತಿಗೆ ದೈಹಿಕ, ಶೈಕ್ಷಣಿಕ ತರಗತಿ

ಮೈಸೂರು, ಜು.18 –ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಕೃಷಿಕ್ ಸರ್ವೋದಯ ಫೌಂಡೇಷನ್ ಸಂಸ್ಥೆಯು ಅಗ್ನಿಪಥ್ ತರಬೇತಿಗೆ ದೈಹಿಕ ಮತ್ತು ಶೈಕ್ಷಣಿಕ ತರಗತಿಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತರು ಕಚೇರಿಯಲ್ಲಿ ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ದೂ.0821–2301564, ಮೊ. 9945752592.



ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಪದಗ್ರಹಣ ಸಮಾರಂಭದಲ್ಲಿ ರೋಟರಿ ವಲಯ–8ರ ವಲಯ ಸೇನಾನಿ ರಾಜಶೇಖರ ಕದಂಬ ಅವರನ್ನು ಸನ್ಮಾನಿಸಲಾಯಿತು. ಪಿಡಿಜಿ ಸುರೇಶ್ ಚೆಂಗಪ್ಪ, ಅಬಕಾರಿ ಜಂಟಿ ಆಯುಕ್ತ ಎ.ಎಸ್.ನಾಗೇಶ್, ಸಹಾಯಕ ಜಿಲ್ಲಾ ಗವರ್ನರ್ ಕೆ.ಮಂಜುನಾಥ್,ಹೆರಿಟೇಜ್ ಕ್ಲಬ್ ಅಧ್ಯಕ್ಷ ಜಿ.ಎಂ.ಸುರೇಶ, ಕಾರ್ಯದರ್ಶಿ ಎಂ.ಪಿ.ಪ್ರಭಾಕರ್, ನಿಕಟಪೂರ್ವ ಅಧ್ಯಕ್ಷ ವೆಂಕಟೇಶ್,ಕಾರ್ಯದರ್ಶಿ ಕೇಶವ್ ಬೆದ್ರೆ,ನಿಯೋಜಿತ ಅಧ್ಯಕ್ಷ ಜಗದೀಶ್ ಇದ್ದಾರೆ.

ಡಾ.ಸಿ.ಎನ್.ಮಂಜುನಾಥ್ ಸೇವಾವಧಿ ವಿಸ್ತರಣೆಗೆ ಆಗ್ರಹಿಸಿ ಪ್ರತಿಭಟನೆ


ಮೈಸೂರು, ಜು.18(ಆರ್‌ಕೆಬಿ)– ಜಯದೇವ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರ ಸೇವಾವಧಿಯನ್ನು ಮತ್ತೊಂದು ಬಾರಿಗೆ ವಿಸ್ತರಿಸಲು ಒತ್ತಾಯಿಸಿ ಮೈಸೂರು ಸಮಾನಮನಸ್ಕ ಬಳಗದ ವತಿಯಿಂದ ಮೌನ ಪ್ರತಿಭಟನೆ ನಡೆಸಲಾಯಿತು.

ನ್ಯಾಷನಲ್ ಮೆಡಿಕಲ್ ಕೌನ್ಸಿಲ್ ಪ್ರಕಾರ ಯಾವುದೇ ಸಂಸ್ಥೆಯ ಮುಖ್ಯಸ್ಥರಾಗಿ 70 ವರ್ಷದವರೆಗೆ ಸೇವೆಯಲ್ಲಿ ಮುಂದುವರೆಯಲು ಅವಕಾಶವಿದೆ. ಅದರಂತೆಯೇ ಮಂಜುನಾಥ್ ಅವರನ್ನು ಮತ್ತೊಂದು ಅವಧಿಗೆ ವಿಸ್ತರಿಸಲು ಪ್ರತಿಭಟನಾಕಾರರು ಆಗ್ರಹಿಸಿದರು. ಈಗಾಗಲೇ ಅವರ ಅವಧಿಯಲ್ಲಿ ಬೆಂಗಳೂರು, ಮೈಸೂರಿನಲ್ಲಿ ಆಸ್ಪತ್ರೆಯು ಬಡಜನರ ಸೇವೆ ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಅಲ್ಲದೇ ರಾಜ್ಯ ಸರ್ಕಾರವು ಗುಲ್ಬರ್ಗಾ ಹಾಗೂ ಹುಬ್ಬಳ್ಳಿಯಲ್ಲಿಯೂ ಆಸ್ಪತ್ರೆಯನ್ನು ಆರಂಭಿಸುತ್ತಿದೆ. ಈ ಹಂತದಲ್ಲಿ ಇವರ ಸೇವೆ ಅಗತ್ಯವಿದೆ ಎಂದು ಅಲ್ಲಿನ ಸಿಬ್ಬಂದಿಯ ಜೊತೆಗೆ ರಾಜ್ಯದ ಜನರೂ ಆಗ್ರಹಿಸಿದ್ದಾರೆ. ಹೀಗಾಗಿ ರಾಜ್ಯದ ಜನರ ಬೇಡಿಕೆಗೆ ಸರ್ಕಾರ ಮನ್ನಣೆ ನೀಡಿ ಅವರ ಸೇವೆಯನ್ನು ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕೊಳ್ಳೇಗಾಲದ ಮಾಜಿ ಶಾಸಕ ಎಸ್.ಬಾಲರಾಜು, ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಮುಖಂಡರಾದ ಸಿ.ಡಿ.ಕುಮಾರ್, ಬಿ.ಕುಮಾರ್, ಕೇಬಲ್ ಕಿಟ್ಟಿ, ಸುರೇಂದ್ರ, ಚಾಮ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.07.2022 ಮಂಗಳವಾರ, ಮಳೆ ನಕ್ಷತ್ರ : ಪುನರ್ವಸು, 06.07.2022 ರಿಂದ 19.07.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ
ತಿಥಿ:ಷಷ್ಠೀ, ನಕ್ಷತ್ರ : ಉಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಭಾವಸಾರ ಕ್ಷತ್ರಿಯ ಸೇವಾ ಸಮಿತಿ ಕೃಷ್ಣರಾಜ ಕ್ಷೇತ್ರ :** ಆಷಾಢ ಮಾಸದ 3ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ವಿಶೇಷ ಆಹ್ವಾನಿತರು : ಆಲ್ ಇಂಡಿಯಾ ಭಾವಸಾರ ಕ್ಷತ್ರಿಯ ಮಹಾಸಭಾ ರಾಜ್ಯಾಧ್ಯಕ್ಷ ಎನ್.ವಿ. ಶ್ರೀನಿವಾಸರಾವ್ ಪಿಸ್ಸೆ, ಭಾವಸಾರ ಕ್ಷತ್ರಿಯ ಮಂಡಳಿ ಅಧ್ಯಕ್ಷ ಶಿವಾಜಿರಾವ್ ರಂಪೊರೆ, ಸ್ಥಳ: ಬಿ.ಬಿ. ಲಾಯ ರಸ್ತೆ, ಕೆ.ಆರ್. ಮೊಹಲ್ಲಾ.

■ **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಯುವಕರ ಸೇವಾ ಸಮಿತಿ :** 24ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಮುಖ್ಯ ಅತಿಥಿಗಳು : ಶಾಸಕರಾದ ಜಿ.ಟಿ.ದೇವೇಗೌಡ, ಎಸ್.ಎ. ರಾಮದಾಸ್, ಎಲ್. ನಾಗೇಂದ್ರ, ಸಂಸದ ಪ್ರತಾಪ್ ಸಿಂಹ, ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಬೆಳಗ್ಗೆ 9.30ಕ್ಕೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಮೂರ್ತಿ ಮೆರವಣಿಗೆ, ಮಧ್ಯಾಹ್ನ 12.30ಕ್ಕೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪ್ರತಿಷ್ಠಾಪನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 7ರಿಂದ ವಿದುಷಿ ಲಕ್ಷ್ಮಿನಾಜರೆ ಅವರ ಶಿಷ್ಯ ವೃಂದದವರಿಂದ ಭರತನಾಟ್ಯ ಕಾರ್ಯಕ್ರಮ, ರಾತ್ರಿ 8ರಿಂದ ಅರುಣ್ ಮೆಲೋಡಿಯಸ್ ತಂಡದವರಿಂದ ರಸಮಂಜರಿ ಕಾರ್ಯಕ್ರಮ, ಸ್ಥಳ: ಶಾರದಾದೇವಿನಗರ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರಿಂದ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವಗಳು, ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ಯೋಗ ವಾಸಿಷ್ಠ ಕುರಿತು ಪ್ರವಚನ, ವಿಶೇಷ ಕಾರ್ಯಕ್ರಮ, ಮಧ್ಯಾಹ್ನ 12ಕ್ಕೆ ತೈಲಾಭಿಷೇಕ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ :** ಗ್ರೆಗರ್ ಜಾನ್ ಮೆಂಡಲ್ 200ನೇ ಜನ್ಮ ಶತಮಾನೋತ್ಸವ ಸಮಾರಂಭ ಅಂಗವಾಗಿ ವಿಶೇಷ ಉಪನ್ಯಾಸ ಕಾರ್ಯಕ್ರಮ, ಬೆಳಗ್ಗೆ 10 ರಿಂದ ಪ್ರೊ. ಎಸ್.ಆರ್. ರಮೇಶ್ ಅವರಿಂದ ಸೊಮ್ಯಾಟಿಕ್ ರಿಕಾಂಬಿನೇಷನ್, ಜೆನೆ ಎಕ್ಸ್‌ಪ್ರೆಸ್ಸನ್ ಅಂಡ್ ಇಮ್ಯುನಿಟಿ ಕುರಿತು ಉಪನ್ಯಾಸ, ಮಧ್ಯಾಹ್ನ 12 ರಿಂದ ಪ್ರೊ. ಎಸ್.ಎನ್. ಹೆಗ್ಡೆ ಅವರಿಂದ ಜೆನೆಟಿಕ್ಸ್ ಆಫ್ ಆಲ್ಕೋಹಾಲಿಸಂ ಇನ್ ಮೈಸ್ ಕುರಿತು ಉಪನ್ಯಾಸ, ಮ. 2 ರಿಂದ ಪ್ರೊ. ಎನ್.ಬಿ. ರಾಮಚಂದ್ರ ಅವರಿಂದ ಹ್ಯೂಮನ್ ಕಾಂಪ್ಲೆಕ್ಸ್ ಜೆನೆಟಿಕ್ ಡಿಸೀಸ್ : ಅವರ್ ಸ್ಟಡಿ ಇನ್ 2 ಡಿಕೇಡ್ಸ್ ಕುರಿತು ಉಪನ್ಯಾಸ, ಮ. 3.30 ರಿಂದ ಡಾ. ಟಿ. ಶಿವಾನಂದಪ್ಪ ಅವರಿಂದ ಆರ್ಗ್ಯಾನಿಸ್‌ಮಿಕ್ ಬಯೋಲಜಿ ಟು ಬಯೋ ಆಕ್ಟಿವ್ ಮಾಲೆಕ್ಯೂಲ್ಸ್ ಕುರಿತು ಉಪನ್ಯಾಸ, ಪ್ರೊ. ಎಂ.ಆರ್. ರಾಜಶೇಖರ ಶೆಟ್ಟಿ ಮೆಮೋರಿಯಲ್ ಹಾಲ್.

■ **ಇಂಡಿಯನ್ ಆರ್ಟ್ ಅಂಡ್ ಕ್ರಾಫ್ಟ್–ಹೌಸ್ ಅಂಡ್ ಫೆಸ್ಟಿ ವರ್ಲ್ಡ್ :** ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಅಪೋಲೋ ಆಸ್ಪತ್ರೆ ಬಳಿಯಿರುವ ಮೈದಾನದಲ್ಲಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಬೆಳಗ್ಗೆ 10 ಗಂಟೆಯಿಂದ ರಾತ್ರಿ 9.30 ಗಂಟೆವರೆಗೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ಸಮರ್ಪಣಾ ಸಮಾರಂಭ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಮುಖ್ಯ ಅತಿಥಿಗಳು : ಕೇರಳದ ಬೇಬಿ ಮೆಮೋರಿಯಲ್ ಆಸ್ಪತ್ರೆಯ ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಗ್ರೇಸಿ ಮಥ್ಯೆ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶನ ಆರ್. ಮಹೇಶ್, ಜೆಎಸ್‌ಎಸ್ ಆಸ್ಪತ್ರೆ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ಸಿ.ಪಿ. ಮಧು, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.30 ವೃತ್ತಿ ಮಾರ್ಗದರ್ಶನ–ಫ್ಯಾಷನ್ ಡಿಸೈನಿಂಗ್ ಮತ್ತ್ ಇಂಟೀರಿಯರ್ ಡೆಕೋರೇಷನ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ವೇದಶ್ರೀ ಕೆ. ಅವರೊಂದಿಗೆ ಮಾತುಕತೆ, 10.00 ಗಾನ ರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನಾಧರಿಸಿದ ಕಾರ್ಯಕ್ರಮ, 10.30 ನಮ್ಮ ಆರೋಗ್ಯ–ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ

ಮಧ್ಯಾಹ್ನ: 12.30 ದೇವರನಾಮ–ನರಸಿಂಹನಾಯಕ್, ಬಿ.ಆರ್. ಛಾಯಾ, ವೃಂದಗಾನ, 12.45 ವನವಾಸಿಗಳ ಶಿಕ್ಷಣ, ಉದ್ಯೋಗ–ಸಾಮಾಜಿಕ ಕಾಯಕರ್ತೆ ಪುಟ್ಟಮ್ಮ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆ–ಅಪರ್ಣ ಎನ್., 3.00 ಎಂ. ರಾಘವೇಂದ್ರ – ಹಾಡುಗಾರಿಕೆ, 4.00ಕಥಾ ಕಾಲಕ್ಷೇಪ "ಭಕ್ತ ಕನಕದಾಸ", ಪ್ರಸ್ತುತಿ– ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ–ಕಿಸಾನ್‌ವಾಣಿ, ಹೈನುರಾಸುಗಳಲ್ಲಿ ಆಹಾರ ನಿರ್ವಹಣೆ ಕುರಿತು ಡಾ.ಕೆ.ಎ. ದರ್ಶನ್ ಅವರೊಂದಿಗೆ ಸಂದರ್ಶನ, 9.30 ಹೆಚ್.ಕೆ. ನರಸಿಂಹಮೂರ್ತಿ–ವಯೋಲಿನ್ ವಾದನ, 10.00 ಕಾವ್ಯವಾಚನ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 19 ಮಂಗಳವಾರ 2022

ಸಂಪುಟ: 43 | ಸಂಚಿಕೆ: 94 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ರಾಜ್ಯದಲ್ಲಿ ಭಿಕ್ಷಾಟನೆ ನಿಷಿದ್ಧ

● ಶೀಘ್ರದಲ್ಲೇ ಕಾಯ್ದೆ ಸಂಪೂರ್ಣ ಜಾರಿ
● ಇವರಿಗೆ ಪುನರ್ವಸತಿ ಕಲ್ಪಿಸಲು ನಿರ್ಧಾರ



ಬೆಂಗಳೂರು, ಜು.18(ಕೆಎಂಶಿ)– ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಸಂಪೂರ್ಣವಾಗಿ ಜಾರಿಗೆ ತರಲಾಗುವುದು ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಭಿಕ್ಷಾಟನೆ ನಿರ್ಮೂಲನೆ ಸಂಬಂಧ ಗೃಹ ಸಚಿವರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರು, ಕಾರ್ಮಿಕ ಇಲಾಖೆ ಸಚಿವರು, ಕಾನೂನು ಸೇವಾ ಪ್ರಾಧಿಕಾರ ಸೇರಿದಂತೆ ವಿವಿಧ ಹಿರಿಯ



ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಭಿಕ್ಷಾಟನೆ ಹೆಸರಿನಲ್ಲಿ ವಿವಿಧ ಕಾನೂನು ಬಾಹಿರ ಕೃತ್ಯಗಳು ನಡೆಯುವುದನ್ನು ಇಲಾಖೆ ಗುರುತಿಸಿದೆ ವಿಶೇಷವಾಗಿ ಮಕ್ಕಳಿಗೆ ನಿಷೇಧಿತ ಮತ್ತು ಬರುವ ಮದ್ದು ನೀಡಿ ಭಿಕ್ಷಾಟನೆಗೆ ಬಳಸಿಕೊಳ್ಳುವುದು, ಅಂಗವಿಕಲರನ್ನಾಗಿ ಮಾಡಿ ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವುದು ಕಂಡು ಬಂದಿದ್ದು, ಇದನ್ನು ಸಂಪೂರ್ಣವಾಗಿ ನಿಯಂತ್ರಿಸಲು ▶ 8ನೇ ಪುಟಕ್ಕೆ



ಇಂದು ದಸರಾ ಉನ್ನತ ಸಮಿತಿ ಸಭೆ




ಮೈಸೂರು, ಜು.18(ಎಸ್‌ಬಿಡಿ)–ಮೈಸೂರು ದಸರಾ ಮಹೋತ್ಸವ ಸಂಬಂಧ ನಾಳೆ(ಜು.19) ಬೆಂಗಳೂರಿನಲ್ಲಿ ಉನ್ನತ ಮಟ್ಟದ ಸಮಿತಿ ಸಭೆ ನಡೆಯಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದ 3ನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿ ಸಂಜೆ 4 ಗಂಟೆಗೆ ಸಭೆ ನಿಗದಿಯಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸೇರಿದಂತೆ ಮೈಸೂರಿನ ಮೇಯರ್, ಎಲ್ಲಾ ಶಾಸಕರು, ಸಂಸದರು, ಜಿಲ್ಲಾಧಿಕಾರಿಗಳು, ಪೊಲೀಸ್, ಅರಣ್ಯಾಧಿಕಾರಿಗಳು ಮತ್ತಿತರರು ಭಾಗವಹಿಸಲಿದ್ದಾರೆ. ಕೊರೊನಾ ಪರಿಣಾಮ 2 ವರ್ಷ ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು ಸರಳ ಹಾಗೂ ಸಾಂಪ್ರದಾಯಿಕವಾಗಿ ಆಚರಿಸಲಾಗಿತ್ತು. ಆದರೆ ಈ ಬಾರಿ ವಿಜೃಂಭಣೆಯಿಂದ ದಸರಾ ಆಚರಿಸುವ ಚಿಂತನೆಯಿದ್ದು ಸಭೆಯಲ್ಲಿ ▶ 8ನೇ ಪುಟಕ್ಕೆ

ನಾಳೆ ಕೆಆರ್‌ಎಸ್, ಕಬಿನಿಗೆ ಸಿಎಂ ಬಾಗಿನ

ಚಾಮುಂಡೇಶ್ವರಿಗೂ ವಿಶೇಷ ಪೂಜೆ








ಮೈಸೂರು, ಜು.18(ಆರ್‌ಕೆ)–ಮೈದುಂಬಿದ ಕೃಷ್ಣರಾಜ ಸಾಗರ (ಕೆಆರ್‌ಎಸ್) ಮತ್ತು ಕಬಿನಿ ಜಲಾಶಯಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜುಲೈ 20 ರಂದು ಬಾಗಿನ ಸಮರ್ಪಿಸುವರು. ಅಂದು (ಬುಧವಾರ) ಬೆಳಗ್ಗೆ 8.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಪ್ರಯಾಣ ಬೆಳೆಸುವ ಮುಖ್ಯಮಂತ್ರಿಗಳು, ▶ 8ನೇ ಪುಟಕ್ಕೆ


ರಾಷ್ಟ್ರಪತಿ ಚುನಾವಣೆ: ಶೇ.99.18 ಮತದಾನ

● ದ್ರೌಪದಿ ಮುರ್ಮು ಆಯ್ಕೆ ಬಹುತೇಕ ಖಚಿತ ● ಜು.21ಕ್ಕೆ ಮತ ಎಣಿಕೆ; 25ರಂದು ನೂತನ ರಾಷ್ಟ್ರಪತಿ ಪ್ರಮಾಣವಚನ





ದ್ರೌಪದಿ ಮುರ್ಮು



ಯಶವಂತ ಸಿನ್ಹಾ

ನವದೆಹಲಿ, ಜು.18– ದೇಶದ 15ನೇ ರಾಷ್ಟ್ರಪತಿ ಆಯ್ಕೆಗಾಗಿ ಸೋಮವಾರ ನಡೆದ ಚುನಾವಣೆಯಲ್ಲಿ ಶೇ.99.18ರಷ್ಟು ಮತದಾನವಾಗಿದೆ ಎಂದು ರಾಜ್ಯಸಭೆ ಪ್ರಧಾನ ಕಾರ್ಯದರ್ಶಿ ಪಿ.ಸಿ.ಮೋದಿ ತಿಳಿಸಿದ್ದಾರೆ.

ಇಂದು ಬೆಳಗ್ಗೆ 10 ಗಂಟೆಗೆ ಆರಂಭವಾದ ಚುನಾವಣೆ ಸಂಜೆ 5 ಗಂಟೆವರೆಗೆ ನಡೆದಿದ್ದು, ಸಂಸತ್ ಭವನದಲ್ಲಿ ಒಟ್ಟು 736 ಸಂಸದರ ಪೈಕಿ 727 ಮಂದಿ ಹಾಗೂ 9 ಶಾಸಕರು ಮತ ಚಲಾಯಿಸಿದರು. ದೆಹಲಿಯ ಸಂಸತ್ ಭವನ ಹಾಗೂ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ರಾಜಧಾನಿಗಳಲ್ಲಿ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಕರ್ನಾಟಕ, ತಮಿಳುನಾಡು, ಕೇರಳ, ಪುದುಚೇರಿ, ಛತ್ತೀಸ್‌ಘಡ, ಗೋವಾ, ಗುಜರಾತ್, ಹಿಮಾಚಲ ಪ್ರದೇಶ, ಮಧ್ಯ ಪ್ರದೇಶ, ಮಣಿಪುರ, ▶ 8ನೇ ಪುಟಕ್ಕೆ

ನಂದಿನಿ ಉತ್ಪನ್ನಗಳ ದರ ಅಲ್ಪ ಇಳಿಕೆ



ಬೆಂಗಳೂರು, ಜು.18– ಆಹಾರ ಉತ್ಪನ್ನಗಳಿಗೆ ಕೇಂದ್ರ ಸರಕಾರ ಜಿಎಸ್‌ಟಿ ವಿಧಿಸಿದ ವಿವಾದದ ನಡುವೆ ನಂದಿನಿ ಮೊಸರು, ಲಸ್ಸಿ ಮತ್ತು ಮಜ್ಜಿಗೆ ದರಗಳನ್ನು ಸೋಮವಾರ ಮತ್ತೆ ಪರಿಷ್ಕರಿಸಿ ಬೆಲೆಯನ್ನು ತುಸು ಇಳಿಕೆ ಮಾಡಲಾಗಿದೆ. ಈ ಎಲ್ಲ ಹಾಲಿನ ಉತ್ಪನ್ನಗಳ ದರವನ್ನು 50 ಪೈಸೆಯಿಂದ 1.50ರಷ್ಟು ಕಡಿಮೆ ಮಾಡಲಾಗಿದೆ. ಪರಿಷ್ಕರಿಸಿದ ದರಗಳ ಅನ್ವಯ 200 ಗ್ರಾಂ ಮೊಸರಿಗೆ 10.50 ರೂ., ನಿಗದಿಪಡಿಸಲಾಗಿದೆ. ▶ 8ನೇ ಪುಟಕ್ಕೆ

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ.ಮಂಜುನಾಥ್ ಸೇವಾವಧಿ ಒಂದು ವರ್ಷ ವಿಸ್ತರಣೆ



ಬೆಂಗಳೂರು, ಜು.18– ನಾಳೆ (ಮಂಗಳವಾರ) ನಿವೃತ್ತರಾಗಬೇಕಾಗಿದ್ದ ಶ್ರೀಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ಅವರ ಸೇವಾವಧಿಯನ್ನು ಒಂದು ವರ್ಷ ವಿಸ್ತರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಸೇವಾ ಅವಧಿ ವಿಸ್ತರಣೆ ಬಗ್ಗೆ ಸ್ವತಃ ಮುಖ್ಯಮಂತ್ರಿ ▶ 8ನೇ ಪುಟಕ್ಕೆ







ನಕ್ಕರೆ ಅದೇ ಸ್ವರ್ಗ

ಗಿರಾಕಿ : ನಿಮ್ಮ ಹೋಟೆಲ್ ಎಲ್ಲಾ ರೀತಿ ಅನುಕೂಲಕರವಾಗಿದೆಯೆ?
ಪ್ರೊಪ್ರೈಟರ್ : ಖಂಡಿತವಾಗಿ ಸಾರ್, ನೀವು ಇಲ್ಲಿದ್ದರೆ ನಿಮ್ಮ ಮನೇಲಿ ಇರೋ ಹಾಗಿರುತ್ತೆ."
ಗಿರಾಕಿ : ಛೆ! ಇಲ್ಲೂ ಅದೇ ಕಷ್ಟಗಳೇ. ಹಾಗಾದರೆ ನಾನು ಮನೆಗೇ ಹೋಗ್ತೀನಿ."

ಮೈಸೂರು ಮಿತ್ರ
ಮಂಗಳವಾರ, 19 ಜುಲೈ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ


ಚಿಂತನೆಯಿಂದ ಬುದ್ಧಿವಂತನಾಗಬಹುದು. ಆದರೆ ತಿಳಿವು ಓದಿನಿಂದಲೇ ಬರಬೇಕು –ಎಡ್ವರ್ಡ್ ನ್ಯೂಟನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ದೂರದ ಮದ್ದು ಖಾಯಿಲೆಗಾಗೊಲ್ಲ

ನಿಮ್ಮ ಪತ್ರಗಳು

ಚಾ.ನಗರದ ರುದ್ರಭೂಮಿಯ ಅವ್ಯವಸ್ಥೆ



ಮಾನ್ಯರೆ,

ಚಾಮರಾಜನಗರದ ಟೌನ್ ಗುಂಡ್ಲುಪೇಟೆ ಲಿಂಕ್ ರೋಡ್‌ನಲ್ಲಿ ಒಂದು ರುದ್ರಭೂಮಿ ಇರುವುದು ಸರಿಯಷ್ಟೆ ಸದಾ ಗೇಟ್‌ಗೆ ಬೀಗ ಹಾಕಿರುತ್ತದೆ. ರುದ್ರಭೂಮಿ ಉಪಯೋಗಿಸ ಬೇಕಾದರೆ ಸಂಬಂಧಪಟ್ಟ ಕಚೇರಿಗೆ ಹೋಗಿ ಅಲ್ಲಿಂದ ಕೀ ತರಬೇಕು. ಕೆಲಸ ಮುಗಿದ ಮೇಲೆ ಕೀ ಹಿಂದಿರುಗಿಸಬೇಕು. ಕಾರಣ ಅಲ್ಲಿ ಸೆಕ್ಯೂರಿಟಿಯಾಗಲಿ, ವಾಚ್‌ಮನ್ ಆಗಲಿ ಇರುವುದಿಲ್ಲ. ಒಂದೆರಡು ದಿನದ ಹಿಂದೆ ಸಂಬಂಧಿಕರ ಅಂತಿಮ ಯಾತ್ರೆಯಲ್ಲಿ ಭಾಗವಹಿಸಲು ಹೋಗಿದ್ದಾಗ ಕಂಡುಬಂದ ಅವ್ಯವಸ್ಥೆಯನ್ನು ದಾಖಲಿಸುತ್ತಿದ್ದೇನೆ.

ಹಿರಿಯ ನಾಗರಿಕರಿಗಾಗಿ, ರೈಲ್ವೆಯಲ್ಲಿ, ಬಸ್ಸಿನಲ್ಲಿ, ಆಸ್ಪತ್ರೆಗಳಲ್ಲಿ ರಿಯಾಯಿತಿ ಇದೆ. ಬಸ್ಸಿನಲ್ಲಿ ಅವರಿಗಾಗಿ ಸ್ಥಳ ಕಾಯ್ದಿರಿಸಲಾಗಿದೆ. ಒಬ್ಬ ಮನುಷ್ಯ ತನ್ನ ಜೀವಿತಾವಧಿಯಲ್ಲಿ ದುಡಿತಾನೆ, ಸಮಾಜಸೇವೆ ಮಾಡಿರಬಹುದು. ಮಕ್ಕಳನ್ನು ಬೆಳೆಸಿರುತ್ತಾನೆ. ಸಂತೃಪ್ತಿ ಜೀವನ ನಡೆಸಿರುತ್ತಾನೆ. ಅಂತಹ ವ್ಯಕ್ತಿಯನ್ನು ಗೌರವಯುತವಾಗಿ ಬೀಳ್ಕೊಡುವುದು ನಮ್ಮ ಕರ್ತವ್ಯ. ಒಬ್ಬ ಮನುಷ್ಯ ಸ್ವರ್ಗಸ್ಥರಾದಾಗ ಸ್ನೇಹಿತರು ಕಳಿಸುವ ಸಂದೇಶ: ಆರ್‌ಐಪಿ. ಅಂದರೆ Rest in peace ಅಂತ ಅರ್ಥ. ಶಾಂತಿಯುತವಾಗಿ ವಿಶ್ರಮಿಸಲಿ ಎಂದು.

ಅಲ್ಲಿನ ಪರಿಸ್ಥಿತಿ ನೋಡಿದರೆ ಎಲ್ಲಿಯ ಶಾಂತಿ ಸಿಗುತ್ತೆ? ಅಲ್ಲಿನ ಅಂಗಳ ಪೂರ್ತಿ ನಿಂತಿರುವ ನೀರು, ಬೆಳೆದುನಿಂತ ಗಿಡಗಂಟಿಗಳು, ನೀರಿಲ್ಲದ ತೊಟ್ಟಿ, ಗುರುತಿಗಾಗಿ ಕಟ್ಟಿರುವ ಸ್ಮಾರಕ ಕಲ್ಲುಗಳು ಇತ್ಯಾದಿ.... ಮಳೆ ಬಂದರೆ ನಿಲ್ಲಲು ಆಶ್ರಯ ತಾಣವೇ ಇಲ್ಲ. ಹೂಳಲು ಗುಂಡಿ ತೆಗೆದರೆ ನೀರು. ಸಂಬಂಧಿಕರು ನಿಲ್ಲಲು ಪೂಜಿಸಲೂ ಆಗದ ಸ್ಥಳ. ಅಲ್ಲಿ ತಿಳಿದುಬಂದ ಮಾಹಿತಿಯೆಂದರೆ ಇತ್ತೀಚೆಗೆ ಹೂಳಲು ನಿರ್ಬಂಧಿಸಿದ್ದಾರಂತೆ. ಸುಡಲು ಮಾತ್ರ ಅವಕಾಶವಂತೆ. ಹೂಳುವ ಪದ್ಧತಿ ಇರುವವರು ಎಲ್ಲಿಗೆ ಹೋಗಬೇಕು? ಅಭಿವೃದ್ಧಿ ಎಂದರೆ ರಸ್ತೆ ನಿರ್ಮಿಸುವುದು. ಆಸ್ಪತ್ರೆ, ಶಾಲೆ, ಆಫೀಸ್ ಕಟ್ಟುವುದು ಮಾತ್ರವಲ್ಲ.

ಅಂತಿಮ ಘಟ್ಟಕ್ಕಾಗಿ ಸುಸಜ್ಜಿತ ಎತ್ತರವಾದ ಸ್ಥಳ, ನೀರು ನಿಲ್ಲದ ಸ್ಥಳ, ಸ್ವಚ್ಛ ವಾದ ಜಾಗ, ನೀರಿನ ವ್ಯವಸ್ಥೆ, ಕಳಿಸಲು ಹೋದವರಿಗೆ ಕೂರಲು ವ್ಯವಸ್ಥೆ, ಮಳೆ ಬಂದರೆ ಆಶ್ರಯತಾಣಗಳಿರುವ ರುದ್ರಭೂಮಿಯೂ ಇರಬೇಕು.

–ದೇವರಾಜಾಚಾರ್, ಮೈಸೂರು.

ಬೆಲೆ ಏರಿಕೆ ನಿಯಂತ್ರಿಸಿ

ಮಾನ್ಯರೆ,

ಪೆಟ್ರೋಲ್ ನೂರರ ಗಡಿ ದಾಟಿದರೆ, ಗ್ಯಾಸ್ ಸಾವಿರದ ಗಡಿ ದಾಟಿದೆ! ಮೊದಲೇ ಕೊರೊನಾದಿಂದ ಕಂಗೆಟ್ಟ ಜನಸಾಮಾನ್ಯರು ಈಗ ತಾನೆ ಸ್ವಲ್ಪ ಸುಧಾರಿಸಿಕೊಳ್ಳುತ್ತಿರುವ ಹೊತ್ತಲ್ಲಿ, ಅಗತ್ಯ ವಸ್ತುಗಳ ಬೆಲೆ ಏರಿಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಉಚಿತವಾಗಿ ಪಡಿತರ ನೀಡುವ ಸರ್ಕಾರ ಗ್ಯಾಸ್ ಸಿಲಿಂಡರಿನ ಬೆಲೆಯನ್ನು ಮನಸ್ಸೋ ಇಚ್ಛೆ ಏರಿಸಿದರೆ ಅದನ್ನು ಬೇಯಿಸಿ ತಿನ್ನುವುದಾದರೂ ಹೇಗೆ? ಯಾವುದೇ ಸರ್ಕಾರ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳುವ ಮೊದಲು ನೆಮ್ಮದಿ ಬದುಕಿಗೆ ಅಗತ್ಯವಾಗಿ ಬೇಕಾದ ಉತ್ತಮ ಆರೋಗ್ಯ, ಗುಣಮಟ್ಟದ ಶಿಕ್ಷಣ, ಪಠ್ಯಗಳಲ್ಲಿ ಮಾನವೀಯ ಮೌಲ್ಯ, ಅಗತ್ಯ ವಸ್ತುಗಳ ಬೆಲೆ ಇಳಿಕೆ, ಮೂಲಭೂತ ಸೌಕರ್ಯ, ಪ್ರಕೃತಿಯು ಸಮತೋಲನದಿಂದಿರಲು ರೂಪುರೇಷೆ, ರೈತರ ಸಮಸ್ಯೆ, ಯೋಧರಿಗೆ ಉತ್ತಮ ಸವಲತ್ತುಗಳು ಹೀಗೆ, ಬದುಕಿಗೆ ಆಸರೆಯಾಗಿರುವವರಿಗೆ ಅಗತ್ಯವಾಗಿಬೇಕಾಗಿರುವ ಕಾರ್ಯಕ್ರಮಗಳನ್ನು ಮೊದಲು ರೂಪಿಸಿ. ತದನಂತರ ವಷ್ಟೇ ಅಭಿವೃದ್ಧಿಯ ಕಡೆ ಗಮನ ಹರಿಸಬೇಕಿದೆ.

–ಬಿ.ಗಣೇಶ ಕೆ.ಜಿ.ಕೊಪ್ಪಲು, ಮೈಸೂರು.

ಗನ್‌ಮ್ಯಾನ್ ಇರಲಿಲ್ಲವೇಕೆ?

ಮಾನ್ಯರೇ,

ಸರಳ ವಾಸ್ತು ತಜ್ಞ ಚಂದ್ರಶೇಖರ ಗುರೂಜಿ ಅವರು ಹುಬ್ಬಳಿಯ ಹೋಟೆಲ್ ಒಂದರಲ್ಲಿ ಭೀಕರವಾಗಿ ಹತ್ಯೆಗೊಳಗಾಗಿದ್ದು ದುರದೃಷ್ಟಕರ, ಸಿ.ಸಿ.ಟಿವಿ ಕ್ಯಾಮರಾದಲ್ಲಿ ಹತ್ಯೆಯ ದೃಶ್ಯವನ್ನು ನೋಡಿದಾಗ ಹೋಟೆಲ್ ರಿಸೆಪ್ಶನ್ ಲಾಬಿಯಲ್ಲಿ ಕೆಲವರು ರಕ್ಷಿಸಲು ಮುಂದಾಗುತ್ತಾರಾದರೂ ಅಧೀರರಾಗಿಬಿಡುವುದು ತಿಳಿಯುತ್ತದೆ. ಆದರೆ ಇಂತಹ ಐಷಾರಾಮಿ ಹೋಟೆಲ್‌ನಲ್ಲಿ ಗನ್‌ಮ್ಯಾನ್ ಇರಲಿಲ್ಲ ಏಕೆ ಎಂಬ ಪ್ರಶ್ನೆ ಮೂಡುತ್ತದೆ. ಗಣ್ಯರು ಐಷಾರಾಮಿ ಹೋಟೆಲ್‌ನಲ್ಲಿ ಉಳಿಯುವುದಕ್ಕೆ ಭದ್ರತೆಯೂ ಒಂದು ಕಾರಣವಾಗಿರುತ್ತದೆ. ಘಟನಾ ಸ್ಥಳದಲ್ಲಿ ಗನ್‌ಮ್ಯಾನ್ ಇದ್ದಿದ್ದರೆ ಕಿಡಿಗೇಡಿಗಳಿಗೆ ಗುಂಡಿಕ್ಕಿ ಗುರೂಜಿಯನ್ನು ರಕ್ಷಿಸಬಹುದಿತ್ತು.

–ಲಾವಣ್ಯ, ಕಿತ್ತೂರು, ಪಿರಿಯಾಪಟ್ಟಣ ತಾ.

ನಾಮಫಲಕಗಳನ್ನು ಸರಿಪಡಿಸಿ

ಮಾನ್ಯರೆ,

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕಳೆದ ಐದು ವರ್ಷಗಳ ಹಿಂದೆ ನಗರ ಪಾಲಿಕೆಗೆ ಹಸ್ತಾಂತರಿಸಲ್ಪಟ್ಟ ಬಹುತೇಕ ಹೊಸ ಬಡಾವಣೆಗಳ ನಾಮಫಲಕದಲ್ಲಿ ಈ ಹಿಂದೆ ನಮೂದಿಸಿದ ಬಡಾವಣೆಗಳ ಹೆಸರು, ಅಡ್ಡ ರಸ್ತೆ, ಮುಖ್ಯ ರಸ್ತೆಗಳ ಹೆಸರು ಇತ್ಯಾದಿ ವಿವರಗಳು ಸಂಪೂರ್ಣವಾಗಿ ಅಳಿಸಿ ಹೋಗಿದ್ದು, ಪರಸ್ಥಳದಿಂದ ಬರುವ ಜನರಿಗೆ ವಿಳಾಸ ಪತ್ತೆ ಹಚ್ಚಲು ಕಷ್ಟವಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟವರು ನಾಮ ಫಲಕಗಳಲ್ಲಿ ಸ್ಪಷ್ಟವಾಗಿ ಬಡಾವಣೆ ಹೆಸರು ಮತ್ತು ಇತರ ವಿವರಗಳನ್ನು ಬರೆಸಿ ನಾಮಫಲಕವನ್ನು ಸರಿಪಡಿಸುವಂತೆ ಕೋರುತ್ತೇನೆ.

– ರಾಮಶೇಷ, ಕನಕದಾಸನಗರ, ಮೈಸೂರು.

ಬದಲಾವಣೆ

ಮಾನ್ಯರೆ,

ಸ್ವಾಮಿ ವಿವೇಕಾನಂದರ "ಏಳಿ, ಎಚ್ಚರಗೊಳ್ಳಿ; ಗುರಿ ಮುಟ್ಟುವವರೆಗೂ ನಿಲ್ಲದಿರಿ" (Arise, awake; stop not till the goal is reached) ಎಂಬ ಸುಪರಿಚಿತ ಕರೆ ಉಪನಿಷತ್ತಿನ "ಉತ್ತಿಷ್ಠತ, ಜಾಗ್ರತ; ಪ್ರಾಪ್ಯ ವರಾನ್ನಿಬೋಧತ" (ಏಳಿ, ಎಚ್ಚರಗೊಳ್ಳಿ; ಶ್ರೇಷ್ಠರನ್ನು ಆಶ್ರಯಿಸಿ, ಕಲಿಯಿರಿ) ಎಂಬ ಉಪನಿಷತ್ತಿನ ಸೂಕ್ತಿಯ ಅನುವಾದ.

ಪ್ರಶ್ನೆಯೇನೆಂದರೆ, ಅದರ ಉತ್ತರಾರ್ಧವನ್ನು ಸ್ವಾಮೀಜಿ ಬದಲಿಸಿದ್ದೇಕೆ? ಇದು ಬಹುಶಃ ಉತ್ತರ : ಬದಲಾವಣೆ ಕಾಲಾನುಗುಣವಾಗಿತ್ತು ಮತ್ತು ಇಂದಿಗೂ ಸಮುಚಿತ ಹಾಗೂ ಪ್ರಸ್ತುತವಾಗಿದೆ. ಅಲ್ಲದೆ, "Arise, awake; stop not till the goal is reached" ಎಷ್ಟು ಪರಿಣಾಮಕಾರಿಯಾಗಿದೆ! (ಹಿಂದಿನ ಮಾತುಗಳಿಗೆ ಹೊಂದಿಕೊಳ್ಳುತ್ತದೆ ಕೂಡ).

–ಸಿಪಿಕೆ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಜುಲೈ 20, ನಾಡದೇವಿ ತಾಯಿ ಶ್ರೀ ಚಾಮುಂಡೇಶ್ವರಿಯ ಜನ್ಮೋತ್ಸವ. ಅಂದು ದೇವಿಯ ನೆಲೆಬೀಡಾದ ಚಾಮುಂಡಿಬೆಟ್ಟದ ದೇಗುಲದಲ್ಲಿ ಸಂಭ್ರಮವೋ ಸಂಭ್ರಮ! ತನ್ನಿಮಿತ್ತ ಚಾಮುಂಡಿಬೆಟ್ಟದ ಮೇಲೊಂದು ಸುತ್ತು ಹೊಡೆದು ಪುರಾಣೇತಿಹಾಸವನ್ನು ಬಿಚ್ಚಿಟ್ಟು ವರ್ತಮಾನದ ಭಕ್ತ ಸಮೂಹದ ಸಂತಸ ಹೇಳುವ ಲೇಖನವಿದು.

ಚಾಮುಂಡಿ ವರ್ಧಂತಿ ವೈಭವ

ಈ ನಾಡಿನ ಅತ್ಯಂತ ಪ್ರಭಾವಿ ದೇವತೆ ತಾಯಿ ಚಾಮುಂಡೇಶ್ವರಿ. ಮೈಸೂರಿನಲ್ಲಿ ಚಾಮುಂಡೇಶ್ವರಿಗೇ ಅಗ್ರಸ್ಥಾನ. ಕಾರಣ ಮೈಸೂರಿನ ಚರಿತ್ರೆಯ ಆದಿ, ಮಧ್ಯ, ಅಂತ್ಯವೆಲ್ಲವೂ ಚಾಮುಂಡಿಯೇ. ಚಾಮುಂಡಿ ಹೆಸರಿನಲ್ಲಿ ನಾಡಿನಲ್ಲಿ ಅದರಲ್ಲೂ ವಿಶೇಷವಾಗಿ ಮೈಸೂರು ಭಾಗದಲ್ಲಿ ನಡೆಯುವಷ್ಟು ಹಬ್ಬ ಹರಿದಿನಗಳು ಬಹುಶಃ ಬೇರೆಲ್ಲೂ ನಡೆಯಲಾರವು. ಮೈಸೂರಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ಮೈಸೂರನ್ನಾಳಿದ ಯದುವಂಶದರಸರ ಕುಲದೇವತೆಯೂ ಹೌದು. ಮೈಸೂರು ತಾಯಿ ಚಾಮುಂಡೇಶ್ವರಿಯ ನೆಲೆಬೀಡು, ಅವಳ ಆವಾಸಸ್ಥಾನವೇ ಮೈಸೂರಿನ ವಿಶ್ವವಿಖ್ಯಾತ ಚಾಮುಂಡಿ ಬೆಟ್ಟ.

ಚೆಂದದೂರು ಮೈಸೂರು
ಚಾಮುಂಡಿ ಪೊರೆವ ಪುಣ್ಯದೂರು
ಚೆಂಬೆಳಕಿನ ರಾಜರೂರು
ಚೆಲುವಿನ ಚಾಮುಂಡಿ ಬೆಟ್ಟದೂರು

ಈ ಮೈಸೂರು ಪ್ರದೇಶ 'ಮಹಿಷಮಂಡಲ' ವೆಂದು ಪ್ರಸಿದ್ಧಿ. ತಾಯಿ ಚಾಮುಂಡಿ ಇಲ್ಲಿ ಅವತರಿಸಿ ನೆಲೆಗೊಂಡದ್ದೇ ಪೌರಾಣಿಕವಾಗಿ ಒಂದು ಅದ್ಭುತ ರೋಚಕ ಕಥೆ. ಬಹಳ ಹಿಂದೆ ಇಲ್ಲೊಬ್ಬ ಮಹಿಷಾಸುರನೆಂಬ ರಾಕ್ಷಸನಿದ್ದ. ಆಗ ಅವನದ್ದೇ ಇಲ್ಲಿ ಅಧಿಪತ್ಯ, ಅಟ್ಟಹಾಸ. ಯಾವ ಗಂಡಸಿಂದಾಗಲೀ, ಯಾವ ಪ್ರಾಣಿಯಿಂದಾಗಲೀ ತನಗೆ ಮರಣ ಬಾರದಂತೆ ಸಾಕ್ಷಾತ್ ಪರಶಿವನಿಂದಲೇ ವರಪಡೆದಿದ್ದ ಅವನು ಅತ್ಯಂತ ಕ್ರೂರಿಯೂ, ಜನ ಕಂಟಕನೂ, ದೈವ ಕಂಟಕನೂ, ಲೋಕಕಂಟಕನೂ ಆಗಿದ್ದ. ಇಂಥ ರಾಕ್ಷಸ ಮಹಿಷಾಸುರನ ಹಿಂಸೆಯನ್ನು ತಾಳಲಾರದೆ ಜನರೆಲ್ಲಾ ದೇವರನ್ನು ಪ್ರಾರ್ಥಿಸತೊಡಗಿದರೆ, ದೇವಾನುದೇವತೆಗಳೆಲ್ಲಾ ದೇವೇಂದ್ರನ ಸಾರಥ್ಯದಲ್ಲಿ ತಮ್ಮನ್ನು ಮಹಿಷಾಸುರನಿಂದ ಕಾಪಾಡುವಂತೆ ಮಹಿಷನಿಗೆ ವರ ನೀಡಿರುವ ಶಿವನ ಮೊರೆ ಹೋಗುತ್ತಾರೆ. ಆಗ ಶಿವ ತಾನು ವರ ಕೊಡಬಲ್ಲೆನೇ ಹೊರತು ಕೊಟ್ಟ ವರವನ್ನು ಹಿಂದಕ್ಕೆ ಪಡೆಯಲಾರೆನೆಂದು ಮಹಿಷನನ್ನು ತನ್ನಿಂದ ನಿಗ್ರಹಿಸಲಾಗದೆಂದು ಅಸಹಾಯಕತೆ ವ್ಯಕ್ತಪಡಿಸುತ್ತಾನೆ. ಆದರೂ ತುಸು ಸಮಯದ ನಂತರ ಯೋಚಿಸಿದ ಶಿವನು ತಾನು ಮಹಿಷಾಸುರನಿಗೆ ಕೊಟ್ಟಿರುವ ವರದ ಪ್ರಕಾರ ಅವನಿಗೆ ಸಾವು ಬಾರದೇ ಇರುವುದು ಗಂಡಸಿಂದ ಮತ್ತು ಪ್ರಾಣಿಯಿಂದ ಮಾತ್ರ. ಆದರೆ, ಹೆಣ್ಣಿನಿಂದ ಅವನಿಗೆ ಸಾವು ಬರುತ್ತದೆ. ಆದ್ದರಿಂದ ನೀವೆಲ್ಲರೂ ಶಕ್ತಿದೇವತೆಯಾದ ಪಾರ್ವತಿಯನ್ನು ಪ್ರಾರ್ಥಿಸಿ ಅವಳಿಗೆ ನಿಮ್ಮೆಲ್ಲರ ಶಕ್ತಿಯನ್ನೂ ಧಾರೆಯೆರೆಯಿರಿ ಎಂದು ಶಿವ ಎಲ್ಲಾ ದೇವತೆಗಳಿಗೂ ಸಲಹೆ ನೀಡುತ್ತಾನೆ. ಅದರಂತೆ ಸಮಸ್ತ ದೇವತೆಗಳೂ ಪಾರ್ವತಿಯ ಮೊರೆಹೋಗಿ ತಮ್ಮೆಲ್ಲಾ ಶಕ್ತಿಯನ್ನೂ ಅವಳಿಗೆ ನೀಡುತ್ತಾರೆ. ಆಗ ಬ್ರಹ್ಮ, ವಿಷ್ಣು, ಮಹೇಶ್ವರರಾದಿಯಾಗಿ ಸರ್ವದೇವತೆಗಳ ಶಕ್ತಿ ಸ್ವರೂಪಿಣಿಯಾಗಿ ಪಾರ್ವತಿಯು ಚಾಮುಂಡಿ ಅವತಾರವೆತ್ತುತ್ತಾಳೆ.

ಹೀಗೆ ಅವತಾರವಾದ ಚಾಮುಂಡೇಶ್ವರಿ ಮಹಾದೇವಿಯು ತನ್ನ ಹದಿನೆಂಟು ಕರಗಳಲ್ಲೂ ಎಲ್ಲಾ ದೇವತೆಗಳಿಂದ ಪಡೆದ ಹದಿನೆಂಟು ಆಯುಧಗಳನ್ನು ಹಿಡಿದು ಕಮಲ, ಅಕ್ಷರಮಾಲೆ, ಬಾಣ, ಖಡ್ಗ, ವಜ್ರ, ಗದೆ, ತ್ರಿಶೂಲ, ಚಕ್ರ, ಪರಶು, ಘಂಟೆ, ಪಾಶ, ಶಕ್ತಿ, ದಂಡ, ಚರ್ಮ, ಧನಸ್ಸು, ಪಾನಪಾತ್ರೆ, ಕಮಂಡಲಗಳೊಡನೆ ದಿವ್ಯಾಭರಣಗಳಿಂದ ಅಲಂಕೃತಳಾಗಿ ಹಿಮವಂತ ನೀಡಿದ ಸಿಂಹವನ್ನೇರಿ ಹೊರಟವಳೇ ಉಗ್ರಸ್ವರೂಪಿಣಿಯಾಗಿ ಲೋಕಕಂಟಕನಾಗಿದ್ದ ದುಷ್ಟ ಮಹಿಷಾಸುರವನ್ನು ಸಂಹಾರ ಮಾಡುತ್ತಾಳೆ. ಆ ಕ್ಷಣದಿಂದ ಮಹಿಷಾಸುರ ಮರ್ಧಿನಿಯಾದ ಶ್ರೀ ಚಾಮುಂಡೇಶ್ವರಿಯು ಮಹಿಷ ಮಂಡಲದ ಮಹಾಬಲಬೆಟ್ಟದಲ್ಲಿ ನೆಲೆಸುತ್ತಾಳೆ. ಅಲ್ಲಿಂದೀಚೆಗೆ ತಾಯಿ ಚಾಮುಂಡೇಶ್ವರಿ ನೆಲೆಯಿಂದಾಗಿ ಮಹಾಬಲಬೆಟ್ಟವು ಚಾಮುಂಡಿಬೆಟ್ಟವಾಗಿ ಪ್ರಸಿದ್ಧಿಗೆ ಬರುತ್ತದೆ. ಹಾಗೆಯೇ ಮಹಿಷಾಸುರನಿದ್ದ ಮಹಿಷಾಮಂಡಲವು ಮಹಿಷೂರಾಗಿ



ಕಾಲಕ್ರಮೇಣ ಮೈಸೂರಾಗುತ್ತದೆ. ಲೋಕವಿಖ್ಯಾತ ಮೈಸೂರು ಹಿರಿಮೆಯಲ್ಲಿ ಚಾಮುಂಡಿಬೆಟ್ಟ ಭೂಷಣಪ್ರಾಯವಾದುದು. ಅಷ್ಟೇ ಅಲ್ಲ, ಬೆಟ್ಟದ ಮೇಲ್ತುದಿಯಲ್ಲಿರುವ ಭವ್ಯವಾದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನ ಕರ್ನಾಟಕಕ್ಕೆ ಕಳಶಪ್ರಾಯವಾದುದು. ಯದುವಂಶಸ್ಥರಾದ ಮೈಸೂರು ಮಹಾರಾಜರು ತಮ್ಮ ಕುಲದೇವತೆಯಾಗಿ ಚಾಮುಂಡೇಶ್ವರಿಯನ್ನು ಸ್ವೀಕರಿಸಿದ ಕಾರಣದಿಂದಾಗಿ ಚಾಮುಂಡಿಬೆಟ್ಟ ಮತ್ತು ಅಮ್ಮನವರ ದೇಗುಲ ಬಹುಬೇಗ ಪ್ರವರ್ಧಮಾನಕ್ಕೆ ಬಂದು ಅತ್ಯಂತ ವೈಭವವನ್ನು ಪಡೆಯುವಂತಾಯಿತು.

ನೋಡಿದೊಡನೆ ಎಂತಹವರನ್ನೂ ಆಕರ್ಷಿಸಿಕೊಳ್ಳುವ ಬಹು ಭವ್ಯವೂ, ದಿವ್ಯವೂ ಆದ ಚಾಮುಂಡೇಶ್ವರಿ ದೇವಸ್ಥಾನ ಚೌಕಾಕೃತಿಯಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು ದೇಗುಲದ ಹೆಬ್ಬಾಗಿಲು, ಪ್ರವೇಶ ದ್ವಾರ, ನವರಂಗ, ಒಳಾಂಗಣ, ಗರ್ಭಗುಡಿ ಮತ್ತು ಪ್ರಾಕಾರಗಳನ್ನು ಹೊಂದಿದೆ. ಮಹಾದ್ವಾರದ ಮೇಲೆ ಸುಂದರವಾದ ಗಗನಚುಂಬಿ ಗೋಪುರ ಮತ್ತು ಗರ್ಭಗುಡಿಯ ಮೇಲೆ ವಿಮಾನ ಶಿಖರಗಳಿವೆ. ಇದು ಏಳು ಅಂತಸ್ತುಗಳುಳ್ಳ ಗೋಪುರವಾಗಿದ್ದು 19ನೇ ಶತಮಾನದಲ್ಲಿ ಪಿರಮಿಡ್ ಆಕಾರದಲ್ಲಿ ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು ಗೋಪುರದ ಮೇಲೆ ಏಳು ಚಿನ್ನದ ಕಳಶಗಳಿವೆ. 1827ರಲ್ಲಿ ಮೈಸೂರು ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಸಾವಿರ ವರ್ಷಕ್ಕೂ ಹಿಂದಿನ ಇತಿಹಾಸವುಳ್ಳ ಈ ದೇವಸ್ಥಾನವನ್ನು ಆಸಕ್ತಿಯಿಂದ ಜೀರ್ಣೋದ್ಧಾರ ಮಾಡಿ ಮಹಾದ್ವಾರದ ಮೇಲೆ ಈ ಬೃಹತ್ ಗೋಪುರಗಳನ್ನು ಕಟ್ಟಿಸಿದ್ದಾರೆ. ಅಲ್ಲದೆ ಸಿಂಹವಾಹಿನಿಯಾದ ಚಾಮುಂಡಿ ತಾಯಿಗೆ ಚೆಂದದ ಸಿಂಹವಾಹನವೊಂದನ್ನು ಮರದಲ್ಲಿ ನಿರ್ಮಿಸಿ ಕೊಡುಗೆಯಾಗಿ ನೀಡಿದ್ದಾರೆ. ಈ ಸಿಂಹವಾಹನವನ್ನು ಅಂದಿನಿಂದ ಇಂದಿನತನಕವೂ ಚಾಮುಂಡೇಶ್ವರಿ ರಥೋತ್ಸವ ಸಂದರ್ಭದಲ್ಲಿ ಬಳಸಲಾಗುತ್ತಿದ್ದು ಅದರ ಮೇಲೆ ದೇವಿ ಚಾಮುಂಡಿಯ ಉತ್ಸವಮೂರ್ತಿಯನ್ನಿಟ್ಟು ರಥೋತ್ಸವವನ್ನು ನಡೆಸಲಾಗುತ್ತಿದೆ. ಚಾಮುಂಡಿಬೆಟ್ಟವು ಸಮುದ್ರ ಮಟ್ಟಕ್ಕಿಂತ 3489 ಅಡಿ ಎತ್ತರದಲ್ಲಿದ್ದು ಇದನ್ನು ಹತ್ತಿಹೋಗಲು ದೊಡ್ಡದೇವರಾಜ ಒಡೆಯರ್ ಅವರು ಒಂದು ಸಾವಿರ ಮೆಟ್ಟಿಲುಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಹಾಗೆಯೇ 700 ಮೆಟ್ಟಿಲುಗಳ ಬಳಿಯಲ್ಲಿ ಕಲ್ಲಿನ ಬೃಹತ್ ನಂದಿಯನ್ನು ಸ್ಥಾಪಿಸಿದ್ದಾರೆ. 16 ಅಡಿ ಎತ್ತರ 26 ಅಡಿ ಉದ್ದದ ಈ ಶಿಲಾಮೂರ್ತಿ ನಂದಿ ಬಹು ಅಪರೂಪದ್ದಾಗಿದ್ದು ಇದನ್ನು ನೋಡುವುದೇ ಒಂದು ಸೊಗಸು. ಸಾಮಾನ್ಯವಾಗಿ ಚಾಮುಂಡಿಬೆಟ್ಟಕ್ಕೆ ಬಂದವರು ಈ ನಂದಿಯನ್ನು ದರ್ಶಿಸದೆ ಹೋಗುವುದಿಲ್ಲ. ತಾಯಿ ಚಾಮುಂಡಿಯಷ್ಟೇ ಮಹತ್ವ ಇದಕ್ಕೂ ಉಂಟು.

ಅದ್ಭುತ ಶಕ್ತಿ ಸ್ವರೂಪಿಣಿ, ಸರ್ವಮಂಗಳ ಪ್ರದಾಯಿಣಿ, ಶ್ರೀ ಗುಣಮಯಿ, ಸೌಭಾಗ್ಯದಾತೆ, ಬೇಡಿದ್ದು ಕರುಣಿಸುವ ವರದಾಯಿಣಿ, ಮಹಿಷಾಸುರ ಮರ್ಧಿನಿ ತಾಯಿ ಚಾಮುಂಡಿ ನೆಲೆಸಿರುವ ರಮ್ಯ ಮನೋಹರ ತಾಣವಾದ ಚಾಮುಂಡಿಬೆಟ್ಟಕ್ಕೆ ವಿಶೇಷ ಮಹತ್ವವುಂಟು. ಹಾಗಾಗಿ ಪ್ರತಿದಿನವೂ ದೇಶವಿದೇಶಗಳಿಂದ ಸಾಗರದೋಪಾದಿಯಲ್ಲಿ ಭಕ್ತಾದಿ ಪ್ರವಾಸಿಗರು ಇಲ್ಲಿಗೆ ಬರುವುದುಂಟು. ಬೆಟ್ಟದ ಸಾವಿರ ಮೆಟ್ಟಿಲುಗಳನ್ನೇರಿ ಚಾಮುಂಡಿ ದರ್ಶನಕ್ಕೆ ಬರುವವರೂ ಸಾಗರದೋಪಾದಿಯೇ! ಇಲ್ಲಿಗೆ ಹೇಗೇ ಬಂದಿರಲಿ, ಎಷ್ಟೇ ದೂರದಿಂದ ಬಂದಿರಲಿ, ಎಷ್ಟೇ ದಣಿದಿರಲಿ ಒಂದು ಕ್ಷಣದಲ್ಲಿ ಅದೆಲ್ಲವೂ ಮಾಯವಾಗಿ ಉಲ್ಲಾಸಗೊಳ್ಳುವ ಮಾಯಾಜಾಲ ಇಲ್ಲುಂಟು. ಅದೇ ಈ ಬೆಟ್ಟದ ಮಹಿಮೆ, ದೇವಿ ಚಾಮುಂಡಿಯ ಒಲುಮೆ. ಬೆಟ್ಟದಲ್ಲಿ ಚಾಮುಂಡಿದೇವಿ ಸನ್ನಿಧಿಯಿಂದ ಘಂಟಾಘೋಷವಾಗಿ ಅಲೆಅಲೆಯಾಗಿ ಕೇಳಿಬರುವ ....

"ಅಯಗಿರಿ ನಂದಿನಿ ನಂದಿತ ಮೇದಿನಿ
ವಿಶ್ವವಿನೋದಿನಿ ನಂದನುತೇ।
ಗಿರಿವರ ವಿಂಧ್ಯ ಶಿರೋಧಿನಿವಾಸಿನಿ
ವಿಷ್ಣುವಿಲಾಸಿನಿ ಜಿಷ್ಣುನುತೇ।
ಭಗವತಿ ಹೇ ಶಿತಿಕಂಟ ಕುಟುಂಬಿನಿ
ಭೂರಿ ಕುಟುಂಬಿನಿ ಭೂರಿಕೃತೇ।
ಜಯ ಜಯ ಹೇ ಮಹಿಷಾಸುರ ಮರ್ಧಿನಿ
ರಮ್ಯ ಕಪರ್ದಿನಿ ಶೈಲಸುತೇ।"

ಚಾಮುಂಡಿ ದೇವಿಯ ಈ ಸ್ತೋತ್ರವನ್ನು ತಾಯಿ ಸನ್ನಿಧಿಯಲ್ಲಿ ಆಲಿಸುತ್ತಿದ್ದರೆ ಮೈ-ಮನವೆಲ್ಲಾ ರೋಮಾಂಚನವಾಗುತ್ತದೆ. ಇಲ್ಲಿ ದಿನವೂ ಬೆಳಗ್ಗೆ ಮತ್ತು ಸಂಜೆ ದೇವಿಗೆ ಪೂಜೆ ಸಾಂಗವಾಗಿ ನಡೆಯುತ್ತಿದ್ದರೂ, ಮಂಗಳವಾರ ಮತ್ತು ಶುಕ್ರವಾರ ವಿಶೇಷ ಪೂಜಾದಿನಗಳಾಗಿರುತ್ತದೆ. ಆಷಾಡ ಮಾಸದಲ್ಲಿ ಬರುವ ಶುಕ್ರವಾರಗಳು ಚಾಮುಂಡಿದೇವಿಗೆ ಅತ್ಯಂತ ಪ್ರಿಯವಾಗಿದ್ದು ಈ ಸಂದರ್ಭದಲ್ಲೇ ಚಾಮುಂಡೇಶ್ವರಿಯ ವರ್ಧಂತಿಯೂ ಬರುವುದರಿಂದ ಆಗ ದೇವಿ ಚಾಮುಂಡಿಗೆ ವಿಶೇಷ ಪೂಜಾ ಕೈಂಕರ್ಯಗಳು ಬೆಟ್ಟದಲ್ಲಿ ಜರುಗುತ್ತವೆ. ಇಂಥ ವಿಶೇಷ ಪೂಜೆಗಳಲ್ಲಿ ಇಲ್ಲಿ ಕಾಲಿಡಲಿಕ್ಕೂ ಜಾಗವಿಲ್ಲದಷ್ಟು ಜನಜಾತ್ರೆ. ಹಾಗೆಯೇ ಜಗದ್ವಿಖ್ಯಾತ ಮೈಸೂರು ದಸರಾ ಮಹೋತ್ಸವದ ವೇಳೆಯಲ್ಲೂ ಬೆಟ್ಟದ ತಾಯಿ ಚಾಮುಂಡಿಯದೇ ದರ್ಬಾರು. ಮೈಸೂರು ದಸರಾ ಅಧಿಕೃತವಾಗಿ ಆರಂಭವಾಗುವುದೇ ಚಾಮುಂಡಿಬೆಟ್ಟದಲ್ಲಿ. ಅಂತೆಯೇ ಜಂಬೂ ಸವಾರಿಯಲ್ಲಿ ಆನೆಯ ಮೇಲೆ ಅಂಬಾರಿಯೊಳಗೆ ಕೂರುವವಳೂ ಬೆಟ್ಟದ ತಾಯಿ ಚಾಮುಂಡಿಯೇ. ಮೈಸೂರು ಮಹಾರಾಜರ ಆಳ್ವಿಕೆಯ ಕಾಲದಲ್ಲಿ ವಿಜಯದಶಮಿಯಂದು ಜಂಬೂಸವಾರಿಯ ಚಿನ್ನದ ಅಂಬಾರಿಯಲ್ಲಿ ಮಹಾರಾಜರು ಕೂರುತ್ತಿದ್ದರು. ಅವರ ಆಳ್ವಿಕೆ ಅಳಿದ ನಂತರ ಆ ಸ್ಥಾನವನ್ನು ನಾಡದೇವಿ ಶ್ರೀ ಚಾಮುಂಡೇಶ್ವರಿ ಅಲಂಕರಿಸುತ್ತಾ ಬಂದಿರುವುದು ಮೈಸೂರು ದಸರಾದ ವಿಶೇಷವೂ ಹೌದು. ದಸರಾದಲ್ಲಿ ತಾಯಿ ಚಾಮುಂಡೇಶ್ವರಿಯ ಜಂಬೂ ಸವಾರಿಯ ಈ ದೃಶ್ಯ ವೈಭವವನ್ನು ನೋಡಲು ನೂರು ಕಣ್ಣಿದ್ದರೂ ಸಾಲದು! ಹಾಗೆಯೇ ಇಲ್ಲಿ ಜರುಗುವ ಜಗನ್ಮಾತೆ ಚಾಮುಂಡೇಶ್ವರಿಯ ಜನ್ಮೋತ್ಸವದ ವಿಜೃಂಭಣೆಯಂತೂ ಅಬ್ಬಬ್ಬಾ ವರ್ಣಿಸಲಸದಳ!.

ಭಾರತದ ಉಪರಾಷ್ಟ್ರಪತಿ ಚುನಾವಣೆ


ಬರುವ ಆಗಸ್ಟ್ 6ರಂದು ದೇಶದ ಎರಡನೇ ಅತಿ ದೊಡ್ಡ ಸಾಂವಿಧಾನಿಕ ಹುದ್ದೆಯಾದ ಉಪರಾಷ್ಟ್ರಪತಿ ಹುದ್ದೆಗೆ ಚುನಾವಣೆ ನಡೆಯಲಿರುವ ಹಿನ್ನೆಲೆಯಲ್ಲಿ ಉಪರಾಷ್ಟ್ರಪತಿ ಸ್ಥಾನದ ಬಗ್ಗೆ ಕೆಲವೊಂದು ವಿಚಾರಗಳನ್ನು ತಿಳಿದುಕೊಳ್ಳುವುದು ಪ್ರಸ್ತುತವೆನಿಸುತ್ತದೆ. ಈ ಹುದ್ದೆಗೆ ಈಗಾಗಲೇ ಆಡಳಿತಾರೂಢ ಎನ್‌ಡಿಎ ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧಂಕರ್ ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಘೋಷಿಸಿದೆ. ಸಂಯುಕ್ತ ವಿರೋಧ ಪಕ್ಷಗಳ ಒಕ್ಕೂಟದ ಅಭ್ಯರ್ಥಿಯಾಗಿ ಮಾಜಿ ಕೇಂದ್ರ ಸಚಿವೆ ಹಾಗೂ ಹಿರಿಯ ಕಾಂಗ್ರೆಸ್ ನಾಯಕಿ ಶ್ರೀಮತಿ ಮಾರ್ಗರೇಟ್ ಆಳ್ವಾ ಸ್ಪರ್ಧೆಗಿಳಿದಿದ್ದಾರೆ.

ಭಾರತದಲ್ಲಿ ಉಪರಾಷ್ಟ್ರಪತಿ ಸ್ಥಾನದ ಬಗ್ಗೆ ಸಂವಿಧಾನದ 63ನೇ ವಿಧಿ ತಿಳಿಸುತ್ತದೆ. ಉಪರಾಷ್ಟ್ರಪತಿಗಳನ್ನು ಉಪರಾಷ್ಟ್ರಾಧ್ಯಕ್ಷರು ಎಂದು ಸಹ ಕರೆಯಲಾಗುತ್ತದೆ. ರಾಷ್ಟ್ರದ "ವಾರಂಟ್ ಆಫ್ ಪ್ರಿಸೀಡೆನ್ಸ್" (Warrant of Precedence)ನಲ್ಲಿ ಉಪರಾಷ್ಟ್ರಪತಿಗಳು 2ನೇ ಸ್ಥಾನ ಪಡೆದಿದ್ದು 3ನೇ ಮತ್ತು 4ನೇ ಸ್ಥಾನಗಳನ್ನು ಕ್ರಮವಾಗಿ ಪ್ರಧಾನ ಮಂತ್ರಿಗಳು ಹಾಗೂ ಲೋಕಸಭೆಯ ಸ್ಪೀಕರ್ ಪಡೆದಿದ್ದಾರೆ. ಉಪರಾಷ್ಟ್ರಪತಿಗಳ ಹುದ್ದೆ ರಾಷ್ಟ್ರಪತಿ ಹುದ್ದೆಯಷ್ಟು ಪ್ರಮುಖವಲ್ಲವಾದರೂ ಕೆಲವು ಸೀಮಿತ ಕಾರಣ ಮತ್ತು ಉದ್ದೇಶಗಳಿಗಾಗಿ ಈ ಹುದ್ದೆಯನ್ನು ನಮ್ಮ ಸಂವಿಧಾನದಲ್ಲಿ ಸೃಷ್ಟಿಸಲಾಗಿದೆ.

ಸಂವಿಧಾನದ 66(3) ನೇ ವಿಧಿಯ ಪ್ರಕಾರ ಈ ಹುದ್ದೆಗೆ ಸ್ಪರ್ಧಿಸಬಯಸುವ ಅಭ್ಯರ್ಥಿ ಈ ಅರ್ಹತೆಗಳನ್ನು ಹೊಂದಿರಬೇಕು.

1. ಭಾರತದ ಪ್ರಜೆಯಾಗಿರಬೇಕು
2. 35 ವರ್ಷ ತುಂಬಿರಬೇಕು
3. ರಾಜ್ಯಸಭೆಗೆ ಆಯ್ಕೆಯಾಗಲು ಬೇಕಾದ ಅರ್ಹತೆ ಹೊಂದಿರಬೇಕು. ಕೇಂದ್ರ ಅಥವಾ ರಾಜ್ಯ ಸರ್ಕಾರಗಳಲ್ಲಿ ಲಾಭದಾಯಕ ಹುದ್ದೆ ಹೊಂದಿರಬಾರದೆಂದು 66ನೇ ವಿಧಿಯ 4ನೇ ಉಪವಿಧಿ ತಿಳಿಸುತ್ತದೆ. ಇಷ್ಟೇ ಅಲ್ಲದೆ, ಅಭ್ಯರ್ಥಿಯ ಹೆಸರನ್ನು ಕನಿಷ್ಠ ಸಂಸತ್ತಿನ 5 ಸದಸ್ಯರು ಸೂಚಿಸಿ, 5 ಸದಸ್ಯರು ಅನುಮೋದಿಸಬೇಕು.

66ನೇ ವಿಧಿಯ ಪ್ರಕಾರ, ಉಪರಾಷ್ಟ್ರಪತಿಗಳನ್ನು ಸಂಸತ್ತಿನ ಎರಡು ಸದನಗಳ ಎಲ್ಲಾ ಸದಸ್ಯರು ರಹಸ್ಯ ಮತದಾನದ ಮೂಲಕ ಏಕಮತವನ್ನು ವರ್ಗಾಯಿಸುವ ಪ್ರಮಾಣಾನುಗುಣ ಪದ್ಧತಿಗೆ ಅನುಗುಣವಾಗಿ ಚುನಾಯಿಸಬೇಕು. ಉಪರಾಷ್ಟ್ರಪತಿ ಚುನಾವಣೆಯಲ್ಲಿ ರಾಜ್ಯಗಳ ಶಾಸಕಾಂಗಗಳ ಸದಸ್ಯರು ಭಾಗವಹಿಸುವಂತಿಲ್ಲ. 67ನೇ ವಿಧಿಯ ಪ್ರಕಾರ, ಅಧಿಕಾರವನ್ನು ವಹಿಸಿಕೊಂಡ ದಿನದಿಂದ 5 ವರ್ಷಗಳ ಕಾಲ ಉಪರಾಷ್ಟ್ರಪತಿಗಳು ಅಧಿಕಾರದಲ್ಲಿ ಇರುತ್ತಾರೆ. ಅವಧಿ ಮುಗಿದರೂ



ಜಗದೀಪ್ ಧಂಕರ್



ಮಾರ್ಗರೇಟ್ ಆಳ್ವಾ

ಉತ್ತರಾಧಿಕಾರಿ ಅಧಿಕಾರಕ್ಕೆ ಬರುವವರೆಗೂ, ಅಧಿಕಾರದಲ್ಲಿ ಮುಂದುವರೆಯಬಹುದೆಂದು ಸಂವಿಧಾನದ 67ನೇ ವಿಧಿಯ (ಸಿ) ಉಪ ವಿಧಿ ತಿಳಿಸುತ್ತದೆ.

ಉಪರಾಷ್ಟ್ರಪತಿಗಳ ಅಧಿಕಾರಗಳು ರಾಷ್ಟ್ರಪತಿಗಳ ಅಧಿಕಾರಗಳಷ್ಟು ವಿಸ್ತಾರವಾಗಿರದೇ ಸೀಮಿತವಾಗಿದೆ. ಬಹುಮುಖ್ಯವಾಗಿ ಉಪರಾಷ್ಟ್ರಪತಿಗಳು ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆಂದು ಸಂವಿಧಾನದ 64ನೇ ವಿಧಿ ತಿಳಿಸುತ್ತದೆ. ರಾಜ್ಯಸಭೆಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವುದರಿಂದ, ಅದರ ಕಾರ್ಯ ಕಲಾಪಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಉಪರಾಷ್ಟ್ರಪತಿಗಳಿಗೆ ಸೇರಿದೆ. ಸಂವಿಧಾನದ 65ನೇ ವಿಧಿಯ ಪ್ರಕಾರ ರಾಷ್ಟ್ರಪತಿಗಳು ನಿಧನಹೊಂದಿದಾಗ, ಅಥವಾ ರಾಜೀನಾಮೆ ನೀಡಿದಾಗ ಅಥವಾ ಪದಚ್ಯುತಗೊಂಡಾಗ ಉಪರಾಷ್ಟ್ರಪತಿಗಳು ಹಂಗಾಮಿ ರಾಷ್ಟ್ರಪತಿಗಳಾಗಿ ಕಾರ್ಯ ನಿರ್ವಹಿಸುತ್ತಾರೆ. ಇಂತಹ ಸಮಯದಲ್ಲಿ ಅವರಿಗೆ ರಾಷ್ಟ್ರಪತಿಗಳು ಚಲಾಯಿಸುವ ಎಲ್ಲಾ ಅಧಿಕಾರಗಳು ಪ್ರಾಪ್ತವಾಗುತ್ತದೆ. 1969ರಲ್ಲಿ ಅಂದಿನ ರಾಷ್ಟ್ರಪತಿ ಡಾ.ಜಾಕಿರ್ ಹುಸೇನ್ ನಿಧನ ಹೊಂದಿದಾಗ, ಉಪರಾಷ್ಟ್ರಪತಿ ವಿ.ವಿ.ಗಿರಿಯವರು ರಾಷ್ಟ್ರಪತಿಗಳ ಕಾರ್ಯಗಳನ್ನು ನೋಡಿಕೊಂಡರು. 1977ರಲ್ಲಿ ಅಂದಿನ ರಾಷ್ಟ್ರಪತಿ ಫಕ್ರುದ್ದಿನ್ ಅಲಿ ಅಹಮದ್ ನಿಧನ ಹೊಂದಿದಾಗ ಅಂದಿನ ಉಪರಾಷ್ಟ್ರಪತಿ ಬಿ.ಡಿ.ಜತ್ತಿ ಹಂಗಾಮಿ ರಾಷ್ಟ್ರಪತಿಯಾಗಿ ಕೆಲ ಕಾಲ ಕಾರ್ಯನಿರ್ವಹಿಸಿದರು.

ಕರ್ತವ್ಯಗಳ ನಿರ್ವಹಣೆ ದೃಷ್ಟಿಯಿಂದ ಭಾರತದ ಉಪರಾಷ್ಟ್ರಪತಿಗಳ ಕರ್ತವ್ಯಗಳು ಅಮೇರಿಕಾದ ಉಪರಾಷ್ಟ್ರಾಧ್ಯಕ್ಷರ ಕರ್ತವ್ಯಗಳನ್ನು ಹೋಲುತ್ತದೆ. ಅಮೇರಿಕಾದ ಉಪಾಧ್ಯಕ್ಷರು ಸಹ ಅಲ್ಲಿನ ಮೇಲ್ಮನೆಯಾದ ಸೆನೆಟ್‌ನ ಅಧ್ಯಕ್ಷರಾಗಿ ಕೆಲಸ ಮಾಡುತ್ತಾರೆ. ಆದರೆ ಅಮೇರಿಕಾದ ಅಧ್ಯಕ್ಷರು ನಿಧನರಾದರೆ ಅಥವಾ ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರೆ ಅಥವಾ ಪದಚ್ಯುತಗೊಂಡರೆ ಉಳಿದ ಅವಧಿಯವರೆಗೆ ಉಪರಾಷ್ಟ್ರಾಧ್ಯಕ್ಷರೇ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಾರೆ. ಉದಾಹರಣೆಗೆ 1963ರಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಜೆ.ಎಫ್.ಕೆನಡಿಯವರನ್ನು ದುಷ್ಕರ್ಮಿಗಳು ಹತ್ಯೆ ಮಾಡಿದಾಗ, ಅಂದಿನ ಉಪಾಧ್ಯಕ್ಷರಾಗಿದ್ದ ಲಿಂಡನ್ ಬಿ ಜಾನ್ಸನ್ ಉಳಿದ ಅವಧಿಗೆ ರಾಷ್ಟ್ರಪತಿಯಾಗಿ ನೇಮಕಗೊಂಡರು. ವಾಟರ್ ಗೇಟ್ ಹಗರಣಕ್ಕೆ ಸಂಬಂಧಿಸಿದಂತೆ, ರಿಚರ್ಡ್ ನಿಕ್ಸನ್ ರಾಜೀನಾಮೆ ನೀಡಿದಾಗ, ಆಗ ಉಪಾಧ್ಯಕ್ಷರಾಗಿದ್ದ ಜೆರಾಲ್ಡ್ ಫೋರ್ಡ್ ಉಳಿದ ಅವಧಿಗೆ ರಾಷ್ಟ್ರಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ಆದರೆ ಭಾರತದಲ್ಲಿ ಉಪರಾಷ್ಟ್ರಪತಿಗಳು 6 ತಿಂಗಳ ಕಾಲ ಮಾತ್ರ ಹಂಗಾಮಿ ರಾಷ್ಟ್ರಪತಿಯಾಗಿ ಮುಂದುವರೆಯಬಹುದು. ಅಷ್ಟರಲ್ಲಿ ನೂತನ ರಾಷ್ಟ್ರಪತಿಯ ಆಯ್ಕೆ ನಡೆಯಬೇಕು.


ಭಾರತದ ಉಪ ರಾಷ್ಟ್ರಪತಿಗಳಾಗಿ ಕಾರ್ಯನಿರ್ವಹಿಸಿದ ಮಹನೀಯರು

1. ಡಾ.ಎಸ್.ರಾಧಾಕೃಷ್ಣನ್ 1952ರಿಂದ 1962 ರವರೆಗೆ (ಎರಡು ಅವಧಿ)
2. ಡಾ.ಜಾಕೀರ್ ಹುಸೇನ್ 1962 ರಿಂದ 1967
3. ವಿ.ವಿ.ಗಿರಿ 1967 ರಿಂದ 1969 ರವರೆಗೆ
4 ಜಿ.ಎಸ್.ಪಾಠಕ್ 1969 ರಿಂದ 1974
5. ಬಿ.ಡಿ.ಜತ್ತಿ 1974 ರಿಂದ 1979
6. ಎಂ.ಹಿದಾಯತ್ತುಲ್ಲಾ 1979ಯಿಂದ ಆಗಸ್ಟ್ 30,1984
7. ಆರ್.ವೆಂಕಟರಾಮನ್ ಆಗಸ್ಟ್ 31 1984 ರಿಂದ 24.07.1987
8. ಶಂಕರ ದಯಾಳ ಶರ್ಮ 03.09.1987ರಿಂದ 24.7.92
9. ಕೆ.ಆರ್.ನಾರಾಯಣನ್ 21.8.1992ರಿಂದ 24.07.1997
10. ಕೃಷ್ಣಕಾಂತ್ 21.08.1997ರಿಂದ 27.07.2002
11. ಬಿ.ಎಸ್.ಶೇಖಾವತ್: 19.8.2002ರಿಂದ 21.7.2007
12. ಮೊಹಮದ್ ಹಮೀದ್ ಅನ್ಸಾರಿ 11.8.2007 ರಿಂದ 10.8.2017 (ಹತ್ತು ವರ್ಷಗಳ ಎರಡು ಅವಧಿ)
13. ಎಂ.ವೆಂಕಯ್ಯ ನಾಯ್ಡು 11.08.2017 ರಿಂದ...

ಸರ್ವಪಲ್ಲಿ ರಾಧಾಕೃಷ್ಣನ್ ಅವರು ದೇಶದ ಪ್ರಪ್ರಥಮ ಉಪರಾಷ್ಟ್ರಪತಿಗಳಾಗಿ ದಿನಾಂಕ 13.05.1952 ರಂದು ಪ್ರಮಾಣ ವಚನ ಸ್ವೀಕರಿಸಿದರು. ಇವರು ಉಪರಾಷ್ಟ್ರಪತಿಗಳಾಗಿ ಎರಡು ಅವಧಿ ಪೂರೈಸಿ ಮುಂದೆ ದೇಶದ ಎರಡನೆಯ ರಾಷ್ಟ್ರಪತಿಗಳಾಗಿ ಆಯ್ಕೆ ಹೊಂದಿದ್ದರು. ಉಪರಾಷ್ಟ್ರಪತಿಗಳಾಗಿ ಕೆಲಸ ಕಾರ್ಯನಿರ್ವಹಿಸಿದ್ದ ಡಾ.ಜಾಕೀರ್ ಹುಸೇನ್, ವಿ.ವಿ.ಗಿರಿ, ಬಿ.ಡಿ.ಜತ್ತಿ (ಹಂಗಾಮಿ), ಎಂ.ಹಿದಾಯತುಲ್ಲಾ (ಹಂಗಾಮಿ), ಆರ್.ವೆಂಕಟರಾಮನ್, ಶಂಕರ ದಯಾಳ ಶರ್ಮ ಮತ್ತು ಕೆ.ಆರ್.ನಾರಾಯಣನ್ ಮುಂದೆ ರಾಷ್ಟ್ರಪತಿಗಳಾಗಿ ಆಯ್ಕೆ ಹೊಂದಿದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಡಾ. ಎಸ್.ರಾಧಾಕೃಷ್ಣನ್ ಮತ್ತು ಹಮೀದ್ ಅನ್ಸಾರಿ ಎರಡು ಅವಧಿ ಪೂರೈಸಿದ ಉಪ ರಾಷ್ಟ್ರಪತಿಗಳಾಗಿದ್ದಾರೆ. ಉಪರಾಷ್ಟ್ರಪತಿಗಳಿಗೆ ರಾಷ್ಟ್ರಪತಿಯಾಗಿ ಬಡ್ತಿ ನೀಡುವ ಸಂಪ್ರದಾಯ ಕಾಂಗ್ರೆಸ್ ಪಕ್ಷದಲ್ಲಿತ್ತು.

ಉಪರಾಷ್ಟ್ರಪತಿಗಳ ನೈಜ ಸ್ಥಾನಮಾನ: ಭಾರತದ ರಾಷ್ಟ್ರಪತಿಗಳಿಗೆ ಇರುವಷ್ಟು ಪ್ರಾಧಾನ್ಯತೆ ಮತ್ತು ಮಹತ್ವ ಉಪರಾಷ್ಟ್ರಪತಿಗಳಿಗೆ ಇಲ್ಲ. ಹಿರಿಯರ ಮನೆ ಎಂದೇ ಹೆಸರಾದ ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರಾಗಿ ಆ ಸದನದ ಕಲಾಪವನ್ನು ಸುಗಮ ರೀತಿಯಲ್ಲಿ ನಡೆಸಲು ಅವರು ಬದ್ಧರಾಗಿರುತ್ತಾರೆ. ಎರಡನೆಯದಾಗಿ, ರಾಷ್ಟ್ರಪತಿ ಹುದ್ದೆ ತೆರವಾದಾಗ, ಹಂಗಾಮಿ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುತ್ತಾರೆ. ಇಷ್ಟನ್ನು ಹೊರತುಪಡಿಸಿ, ಉಪರಾಷ್ಟ್ರಪತಿಗಳಿಗೆ ಬೇರೇನೂ ಹೆಚ್ಚಿನ ಕಾರ್ಯಭಾರವಿಲ್ಲ. ಆದ್ದರಿಂದ ಅಷ್ಟೊಂದು ಮಹತ್ವವಲ್ಲದ ಈ ಹುದ್ದೆಯನ್ನು ರದ್ದುಪಡಿಸಬೇಕೆಂಬ ಕೂಗು ಆಗಾಗ ಕೇಳಿ ಬರುತ್ತಿದೆಯಾದರೂ, ಉಪರಾಷ್ಟ್ರಪತಿ ಹುದ್ದೆ ರದ್ದಾಗದೇ ಉಳಿದಿದೆ. ಹಿರಿಯರ ಮನೆಯಾದ ರಾಜ್ಯಸಭೆಯ ಕಲಾಪಗಳು ವೈಶಿಷ್ಟ್ಯಪೂರ್ಣವಾಗಿರುತ್ತದೆ. ಈ ಸಭೆಯನ್ನು ಸರಿಯಾದ ರೀತಿಯಲ್ಲಿ ಪ್ರಜಾಪ್ರಭುತ್ವದ ರೀತಿ ರಿವಾಜುಗಳಿಗೆ ಅನುಗುಣವಾಗಿ ನಡೆಸಲು ರಾಜಕೀಯ ನೈಪುಣ್ಯತೆ ಮತ್ತು ಸಂಸದೀಯ ಜ್ಞಾನ ತೀರಾ ಅವಶ್ಯಕ. ಅಷ್ಟರಮಟ್ಟಿಗೆ ಉಪರಾಷ್ಟ್ರಪತಿಗಳ ಹುದ್ದೆ ಮಹತ್ವವೇ ಸರಿ. ಅಮೇರಿಕಾದ ಸಂವಿಧಾನದಲ್ಲಿ ಇರುವಂತೆ, ರಾಷ್ಟ್ರಪತಿ ಹುದ್ದೆ ಅವರ ನಿಧನ, ರಾಜೀನಾಮೆ ಅಥವಾ ಬೇರ್ಯಾವುದೋ ಕಾರಣದಿಂದ ತೆರವಾದರೆ ಉಳಿದ ಅವಧಿಯವರೆಗೆ ಉಪರಾಷ್ಟ್ರಪತಿಗಳೇ ದೇಶದ ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುವ ಅವಕಾಶ ನೀಡಿದರೆ, ಈ ಹುದ್ದೆಗೆ ಮೆರಗು ಬರುತ್ತದೆ. ಈ ನಿಟ್ಟಿನಲ್ಲಿ ಸಂವಿಧಾನದ ತಿದ್ದುಪಡಿಗೆ ಆಡಳಿತ ಹಾಗೂ ವಿರೋಧ ಪಕ್ಷಗಳು ಒಟ್ಟಿಗೆ ಕುಳಿತು ಚರ್ಚಿಸಬೇಕಾಗಿದೆ.



–ಡಾ.ಕೆ.ವಿ.ವಾಸು
ವಕೀಲರು ಮತ್ತು ನೋಟರಿ, ಮೈಸೂರು.
ಮೊ: 9341731661

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಮಂಗಳವಾರ 19 ಜುಲೈ 2022

'ಆರ್‌ಎಸ್‌ಎಸ್ ಆಳ ಮತ್ತು ಅಗಲ'; ಪ್ರತಾಪ್ ಸಿಂಹ ಟೀಕೆಗೆ ಖಂಡನೆ
ಸಾಹಿತಿ ದೇವನೂರ ಮಹಾದೇವ ಸೃಷ್ಟಿಸಿ ಬರೆದಿಲ್ಲ

ಆರ್‌ಎಸ್‌ಎಸ್‌ನ ಗೋಳ್ವಾಲ್ಕರ್‌ರ 'ಚಿಂತನಾ ಗಂಗಾ' ಪುಸ್ತಕದಲ್ಲಿ ಇರುವುದನ್ನೇ ವಿವರಿಸಿದ್ದಾರೆ; ದಲಿತ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ದಲಿತ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು ಮಾತನಾಡಿದರು.

> "ದೇಶಭಕ್ತಿ ಎನ್ನುವುದು ಇದ್ದರೆ ಅದು ಶೂದ್ರ ಸಮಾಜದಲ್ಲಿ ಮಾತ್ರ. ಇವರದೇನಿದ್ದರೂ ಬೂಟಾಟಿಕೆಯಷ್ಟೇ. ಈಗ ಕೆಲ ರಾಜ್ಯಗಳಲ್ಲಿ ಮೀಸಲಾತಿ ತೆಗೆಯಲಾಗುತ್ತಿದೆ. ಈ ವಿಚಾರವನ್ನು ನಾವು ಹೇಳಿದಾಗ, ಬಿಜೆಪಿಯಲ್ಲಿರುವ ನಮ್ಮ ಸಮುದಾಯದ ನಾಯಕರೇ ಅದನ್ನು ಸಮರ್ಥಿಸಿಕೊಳ್ಳುತ್ತಾರೆ. ಪ್ರತಾಪ್ ಸಿಂಹ ಇಲ್ಲಿ ಗೆದ್ದಾಗಿನಿಂದಲೂ ದಲಿತ ವಿರೋಧಿ ನೀತಿ ಅನುಸರಿಸುತ್ತಿದ್ದಾರೆ.
> –ಶಾಂತರಾಜು

ಮೈಸೂರು,ಜು.18(ಪಿಎಂ)– ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಗೋಳ್ವಾಲ್ಕರ್ ಅವರ 'ಚಿಂತನಾ ಗಂಗಾ' ಪುಸ್ತಕದಲ್ಲಿ ಇರುವುದನ್ನೇ 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಕೃತಿಯಲ್ಲಿ ಹಿರಿಯ ಸಾಹಿತಿ ದೇವನೂರ ಮಹಾದೇವ ವಿವರಿಸಿದ್ದಾರೆ. ಅವರೇನು ಸೃಷ್ಟಿ ಮಾಡಿ ಬರೆದಿಲ್ಲ ಎಂದು ತಿಳಿಸಿದ ದಲಿತ ವೆಲ್ಫೇರ್ ಟ್ರಸ್ಟ್ ಅಧ್ಯಕ್ಷ ಶಾಂತರಾಜು, ಕೃತಿ ಸಂಬಂಧ ದೇವನೂರ ಮಹಾದೇವರನ್ನು ಸಂಸದ ಪ್ರತಾಪ್ ಸಿಂಹ ಟೀಕಿಸಿರುವುದನ್ನು ಟ್ರಸ್ಟ್ ಖಂಡಿಸುತ್ತದೆ ಎಂದು ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಸಿ–ಎಸ್‌ಟಿ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ಶೈಕ್ಷಣಿಕ ಮತ್ತು ಆರ್ಥಿಕವಾಗಿ ಬೆಳೆಯಲು ಅವಕಾಶ ಕಲ್ಪಿಸಬಾರದು ಎಂಬುದನ್ನು ಚಿಂತನಾ ಗಂಗಾ ಪುಸ್ತಕದಲ್ಲಿ ಹೇಳಲಾಗಿದೆ. ಇದರ ಅರ್ಥ ವೇನು? ಎಂದು ಪ್ರಶ್ನಿಸಿದರು. ನಾನು ಈ ಹಿಂದೆ ಆರ್‌ಎಸ್‌ಎಸ್‌ನಲ್ಲಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದೇನೆ. ರಾಜ್ಯ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದು, ಚುನಾವಣೆಗೂ ಸ್ಪರ್ಧಿಸಿ ಸೋತಿದ್ದೇನೆ. ಅದರ ಅನುಭವದಲ್ಲಿ ನಾನೂ ಒಂದು ಪುಸ್ತಕ ಬರೆಯುತ್ತಿದ್ದೇನೆ. 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಕೃತಿಯನ್ನು ದಲಿತ ವೆಲ್ಫೇರ್ ಟ್ರಸ್ಟ್‌ನಿಂದ ಮುದ್ರಿಸಿ, ಹಂಚಲಾಗುತ್ತಿದೆ ಎಂದು ಹೇಳಿದರು.

ಟ್ರಸ್ಟ್‌ನ ಕಾರ್ಯ ನಿರ್ವಾಹಕ ಸದಸ್ಯ ನಂಜುಂಡಸ್ವಾಮಿ ಮಾತನಾಡಿ, 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಕೃತಿಯನ್ನು ಮುಖ್ಯವಾಗಿ ಯುವ ಸಮುದಾಯ ಓದಬೇಕು. ಯುವಕರನ್ನು ಆರ್‌ಎಸ್‌ಎಸ್ ದಾರಿ ತಪ್ಪಿಸುತ್ತಿರುವ ರೀತಿಯನ್ನು ಈ ಕೃತಿಯಲ್ಲಿ ಆಳವಾದ ಅಧ್ಯಯನದ ಮೂಲಕ ದಾಖಲಿಸಲಾಗಿದೆ. ದೇವನೂರ ಮಹಾದೇವ ಅವರ ಸೃಜನಶೀಲತೆ ಬಗ್ಗೆ ಪ್ರತಾಪ್ ಸಿಂಹ ಹಗುರವಾಗಿ ಮಾತನಾಡಿದ್ದು, ಹೀಗೆ ಮಾತನಾಡುವ ಯಾವುದೇ ಅರ್ಹತೆಯನ್ನು ಪ್ರತಾಪ್ ಸಿಂಹ ಹೊಂದಿಲ್ಲ. ಇವರು ಈ ಹಿಂದೆ ಬೋಗಸ್ ಬರಹಗಾರರಾಗಿದ್ದರು ಎಂದು ಟೀಕಾಪ್ರಹಾರ ನಡೆಸಿದರು. ಲೇಖಕ ಸಿದ್ದಸ್ವಾಮಿ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಿಕ್ಕಅನ್ನದಾನಿ ಗೋಷ್ಠಿಯಲ್ಲಿದ್ದರು.



ಮೈಸೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ವತಿಯಿಂದ ನಡೆದ ಕಾರ್ಯಕಾರಿಣಿ ಸಭೆಯಲ್ಲಿ ಯುವಧ್ವನಿ ಹಾಗೂ ಯೂಥ್ ಜೋಡೋ ಬೂತ್ ಜೋಡೋ ಮತ್ತು 75ನೇ ಸ್ವಾತಂತ್ರ್ಯೋತ್ಸವದ ಕುರಿತಾದ ಕಾರ್ಯಕ್ರಮಗಳ ಬಗ್ಗೆ ಜಿಲ್ಲಾ ಹಾಗೂ ಬ್ಲಾಕ್ ಪದಾಧಿಕಾರಿಗಳೊಂದಿಗೆ ಚರ್ಚಿಸಲಾಯಿತು. ಈ ವೇಳೆ ಯೂಥ್ ಜೋಡೋ ಬೂತ್ ಜೋಡೋ ಕಾರ್ಯಕ್ರಮದ ರಾಷ್ಟ್ರೀಯ ಉಸ್ತುವಾರಿ ಮೊಹಮದ್ ಇಲ್ತಾಜ್, ಮೈಸೂರು ವಲಯ ಉಸ್ತುವಾರಿ, ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ವಿಶ್ವನಾಥ್, ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಹ್ಯಾರಿಸ್ ಮತ್ತು ಬ್ಲಾಕ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವೈಭವದ ಸಿದ್ದರಾಮೋತ್ಸವಕ್ಕೆ ಆಪ್ತರ ನಿರ್ಧಾರ

- ಇದಕ್ಕಾಗಿ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಲು ಆಪ್ತರ ತೀರ್ಮಾನ
- ಮತ್ತೆ ಸಿದ್ದರಾಮಯ್ಯ ಸಿಎಂ ಮಾಡಲು ಪಣ ತೊಟ್ಟಿರುವ ಅನುಯಾಯಿಗಳು

ಬೆಂಗಳೂರು, ಜು.18(ಕೆಎಂಶಿ)– ದಾವಣಗೆರೆಯಲ್ಲಿ ಆಗಸ್ಟ್ ಮೂರರಂದು ನಡೆಯುವ ಸಿದ್ದರಾಮೋತ್ಸವಕ್ಕೆ ಕೋಟ್ಯಾಂತರ ರೂಪಾಯಿ ಬಳಸಿ ಸಿದ್ದರಾಮಯ್ಯ ಅವರನ್ನು ವಿಜೃಂಭಿಸಲು ಅವರ ಬೆಂಬಲಿಗರು ಮುಂದಾಗಿದ್ದಾರೆ.

ಸಿದ್ದರಾಮಯ್ಯ ಅವರನ್ನು ಮತ್ತೆ ಕರ್ನಾಟಕದಲ್ಲಿ ಮುಖ್ಯಮಂತ್ರಿ ಮಾಡಬೇಕು ಎಂದು ಪಣ ತೊಟ್ಟಂತಿರುವ ಅವರ ಅನುಯಾಯಿಗಳು, ಕೇವಲ ರಾಜ್ಯ ಮಟ್ಟದಲ್ಲಿ ಅಷ್ಟೇ ಅಲ್ಲ ರಾಷ್ಟ್ರಮಟ್ಟದಲ್ಲೂ ಸಿದ್ದರಾಮೋತ್ಸವವನ್ನು ವೈಭವೀಕರಿಸಲು ಹೊರಟಿದ್ದಾರೆ. ಇದಕ್ಕಾಗಿ ರಾಜ್ಯ, ರಾಷ್ಟ್ರ ಹಾಗೂ ಆಯ್ದ ಕೆಲವು ಪ್ರಾದೇಶಿಕ ಪತ್ರಿಕೆಗಳಿಗೆ ನಾಲ್ಕು ಪುಟಗಳ ಪ್ರಾಯೋಜಿತ ಪುರವಣಿ ನೀಡಲು ಸಿದ್ದರಾಮಯ್ಯ ಅಮೃತ ಮಹೋತ್ಸವ ಸಮಿತಿ ನಿರ್ಧರಿಸಿದೆ.

ಅಷ್ಟೇ ಅಲ್ಲ, ಅಂದು ರಾಜ್ಯದ ಐದು ಪ್ರಮುಖ ಸುದ್ದಿ ವಾಹಿನಿಗಳ ಮೂಲಕ ಬೆಳಗ್ಗಿನಿಂದ ಕಾರ್ಯಕ್ರಮ ಮುಗಿಯುವವರೆಗೂ ನೇರ ಪ್ರಸಾರ ಮಾಡಲು ಅಂದಿನ ಸಮಯವನ್ನು ಈಗಾಗಲೇ ಕಾಯ್ದಿರಿಸಲಾಗಿದೆ. ಸಿದ್ದರಾಮಯ್ಯ ಅವರ 75ನೇ ವರ್ಷದ ಹುಟ್ಟುಹಬ್ಬದ ಆಚರಣೆಯನ್ನು ಯಾರೂ ಇದುವರೆಗೆ ನಡೆಸಿರಬಾರದು ಹಾಗೂ ಮುಂದೆ ಮಾಡಬಾರದು ಎಂಬ ರೀತಿ ಮಾಡಲು ಉದ್ದೇಶಿಸಿದೆ. ಕಾಂಗ್ರೆಸ್‌ನಲ್ಲಿ ಸಿದ್ದರಾಮಯ್ಯ ಅವರಿಗೆ ಬೇರೆ ನಾಯಕರು ಸರಿಸಾಟಿಯಲ್ಲ ಎಂದು ಬಿಂಬಿಸುವುದು ಇದರ ಮುಖ್ಯ ಉದ್ದೇಶವೂ ಆಗಿದೆ. ಅಂದಿನ



ಸಮಾವೇಶದಲ್ಲಿ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಸೇರಿದಂತೆ ದೆಹಲಿ ನಾಯಕರ ದಂಡೇ ಭಾಗವಹಿಸಲಿದೆ. ಇಂತಹ ಸಮಾವೇಶದಲ್ಲಿ ಸಿದ್ದರಾಮಯ್ಯ, ಪ್ರಭಾವಿ ನಾಯಕ. ಅವರ ನಾಯಕತ್ವದಲ್ಲಿ ಚುನಾವಣೆ ನಡೆದರೆ ಪಕ್ಷ ಅಧಿಕಾರಕ್ಕೆ ಬರಲಿದೆ ಎಂಬುದನ್ನು ವರಿಷ್ಠರ ಮುಂದೆ ಬಿಂಬಿಸಲು ಸಮಿತಿ ಸದಸ್ಯರು ಮುಂದಾಗಿದ್ದಾರೆ. ಇದಕ್ಕಾಗಿ ಚಾಮರಾಜನಗರದಿಂದ ಬೀದರ್‌ವರೆಗೆ ಸಿದ್ದರಾಮಯ್ಯ ಬೆಂಬಲಿಗರು ಮತ್ತು ಕಾರ್ಯಕರ್ತರನ್ನು 4–5 ಲಕ್ಷ ಮಂದಿ ಸೇರಿಸಲು ಸಮಿತಿ ಕಸರತ್ತು ನಡೆಸಿದೆ.

ಅಸಹಾಯಕ ಪಿಂಚಣಿದಾರರಿಗೆ ಡಿಜಿಟಲ್ ಲೈಫ್ ಸರ್ಟಿಫಿಕೇಟ್

ಮೈಸೂರು,ಜು.18–ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ ಮೈಸೂರು ಇಪಿಎಫ್‌ಓ ಪ್ರಾದೇಶಿಕ ಕಚೇರಿಯು ಅಂಗವಿಕಲರು, ಹಾಸಿಗೆ ಹಿಡಿದಿರುವವರು ಹಾಗೂ ಚಲನೆ ಸಾಧ್ಯವಾಗದೇ ಇರುವಂತಹ ಪಿಂಚಣಿದಾರರಿಗೆ 'ಡಿಜಿಟಲ್ ಲೈಫ್ ಸರ್ಟಿಫಿಕೇಟ್' ಅಭಿಯಾನದಂತಹ ಹೊಸ ಕ್ರಮವನ್ನು ಆರಂಭಿಸುತ್ತಿದೆ. ಇಂತಹ ಪಿಂಚಣಿದಾರರು ತಮ್ಮ ವಿವರವನ್ನು (ಪಿಪಿಓ ಸಂಖ್ಯೆ, ಪಿಂಚಣಿದಾರರ ಹೆಸರು, ವಸತಿ ವಿಳಾಸ) ವಾಟ್ಸಾಪ್ ಸಂಖ್ಯೆ 7892594813ಗೆ ಕಳುಹಿಸುವುದು. ಅರ್ಹರಾದರೆ ಅವರಿಗೆ ಡಿಜಿಟಲ್ ಲೈಫ್ ಸರ್ಟಿಫಿಕೇಟ್ ಪಡೆದುಕೊಳ್ಳಬಹುದು.

ಅರ್ಜಿ ಆಹ್ವಾನ

ಮೈಸೂರು,ಜು.18–ಮೈಸೂರು ಮಹಾನಗರ ಪಾಲಿಕೆ ವತಿಯಿಂದ 2021–22ನೇ ಸಾಲಿನ ಪರಿಷ್ಕೃತ ಮತ್ತು 2022–23ನೇ ಆಯವ್ಯಯದಲ್ಲಿ ಪಾಲಿಕೆ ಅನುದಾನದ ಸಾಮಾನ್ಯ ನಿಧಿಯಲ್ಲಿ 25 ಲಕ್ಷ ರೂ.ಗಳನ್ನು ಕಲಾವಿದರ ಪ್ರೋತ್ಸಾಹ ಸಹಾಯಧನಕ್ಕಾಗಿ ಮೀಸಲಿಟ್ಟಿದ್ದು ಅದರಂತೆ ಒಬ್ಬ ಕಲಾವಿದನಿಗೆ 10,000 ರೂಗಳಂತೆ ಸಹಾಯಧನ ನೀಡಲು ಅವಕಾಶವಿರುವುದರಿಂದ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವಂತಹ ಅರ್ಹ ಫಲಾನುಭವಿಗಳು ಆ.31ರೊಳಗಾಗಿ ನಿಗದಿತ ನಮೂನೆಯನ್ನು ಪಾಲಿಕೆಯ ಆಯಾ ವಲಯ ಕಚೇರಿಗಳಲ್ಲಿ ಅರ್ಜಿ ಪಡೆದು ಸಲ್ಲಿಸುವಂತೆ ನಗರ ಪಾಲಿಕೆಯ ಹೆಚ್ಚುವರಿ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಗಸ್ಟ್ ಅಂತ್ಯಕ್ಕೆ ಆಲನಹಳ್ಳಿ ಪೊಲೀಸ್ ಠಾಣೆ ಕಟ್ಟಡ ಕಾಮಗಾರಿ ಪೂರ್ಣ



ಮೈಸೂರು, ಜು. 18(ಆರ್‌ಕೆ)– ಮೈಸೂರಿನ ಆಲನಹಳ್ಳಿ ಪೊಲೀಸ್ ಠಾಣೆ ಕಟ್ಟಡ ಕಾಮಗಾರಿಯು ಆಗಸ್ಟ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ.

ಮೈಸೂರಿನ ದೇವೇಗೌಡ ಸರ್ಕಲ್ ಸಮೀಪ ಬನ್ನೂರು ರಸ್ತೆಯ ಪಾರ್ಕ್ ಹಿಂಭಾಗ 2.15 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ (KSPHIDC)ದವರು ನಿರ್ಮಿಸುತ್ತಿರುವ ಆಲನಹಳ್ಳಿ ಪೊಲೀಸ್ ಠಾಣಾ ಕಟ್ಟಡದ ಕಾಮಗಾರಿ ನವಂಬರ್ 2022ರೊಳಗೆ ಪೂರ್ಣಗೊಳಿಸುವಂತೆ ಕಾರ್ಯಾದೇಶದಲ್ಲಿ ತಿಳಿಸಲಾಗಿತ್ತಾದರೂ, ಈಗಾಗಲೇ ಕಟ್ಟಡದ ಸಿವಿಲ್ ಕೆಲಸ ಬಹುತೇಕ ಮುಗಿದಿದ್ದು, ಆಗಸ್ಟ್ ಕಡೇ ವಾರದೊಳಗಾಗಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ಗುತ್ತಿಗೆದಾರ ವಿನೋದ್ ಕುಮಾರ್ ತಿಳಿಸಿದ್ದಾರೆ.

ನೆಲ ಮತ್ತು ಮೊದಲ ಮಹಡಿ ಸೇರಿ 301 ಚದರ ಮೀಟರ್ (3,238 ಚದರ ಅಡಿ) ವಿಸ್ತೀರ್ಣ ಹೊಂದಿದ್ದು, ನೆಲ ಮಹಡಿಯಲ್ಲಿ ಸ್ಟೇಷನ್ ಹೌಸ್ ಆಫೀಸರ್ (SHO), ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳ ಕೊಠಡಿ, ಮಹಿಳೆ, ಪುರುಷರಿಗೆ ಪ್ರತ್ಯೇಕ ಲಾಕ್‌ಅಪ್‌ಗಳು, ಉಗ್ರಾಣ, ಶಸ್ತ್ರಾಸ್ತ್ರ ಕೊಠಡಿ, ರಿಸೆಪ್ಷನ್, ವರ್ಕ್ ಸ್ಟೇಷನ್‌ಗಳಿಗೆ ಅವಕಾಶ ಕಲ್ಪಿಸಲಾಗಿದೆ. ಮೊದಲ ಮಹಡಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಛೇಂಬರ್, ಮಹಿಳೆಯರು, ಪುರುಷರ ಪ್ರತ್ಯೇಕ ವಿಶ್ರಾಂತಿ ಕೊಠಡಿ, ಸ್ಟೋರ್ ರೂಂ, ಕಂಪ್ಯೂಟರ್ ಕೊಠಡಿಗಳನ್ನು ನಿರ್ಮಿಸಲಾಗುತ್ತಿದ್ದು, ಪೊಲೀಸ್ ಮ್ಯಾನ್ಯುಯಲ್ ಪ್ರಕಾರ ಸೌಲಭ್ಯಗಳಿರುವಂತೆ ಠಾಣೆ ಕಟ್ಟಡವನ್ನು ನಿರ್ಮಿಸಲಾಗುತ್ತಿದೆ ಎಂದು ಆಲನಹಳ್ಳಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಜಿ.ಎನ್.ಶ್ರೀಕಾಂತ್ ತಿಳಿಸಿದ್ದಾರೆ.

> "ಸ್ವಂತ ಕಟ್ಟಡವಿಲ್ಲದ ಮೈಸೂರಿನ ದೇವರಾಜ ಸಿವಿಲ್, ದೇವರಾಜ ಸಂಚಾರ, ಹೆಬ್ಬಾಳು ಮತ್ತು ಆಲನಹಳ್ಳಿ ಪೊಲೀಸ್ ಠಾಣೆಗಳಿಗೆ ಸೂಕ್ತ ಸ್ಥಳಗಳಲ್ಲಿ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ. ಈಗಾಗಲೇ ಹೆಬ್ಬಾಳು ಮತ್ತು ಆಲನಹಳ್ಳಿ ಠಾಣೆ ಕಟ್ಟಡಗಳ ಬಹುತೇಕ ಕೆಲಸ ಮುಗಿದಿದ್ದು, ಒಂದೂವರೆ ತಿಂಗಳೊಳಗಾಗಿ ಪೂರ್ಣಗೊಳ್ಳಲಿದೆ. ಸುಮಾರು 5.8 ಕೋಟಿ ರೂ. ಅನುದಾನದ ಪ್ಯಾಕೇಜ್‌ನಲ್ಲಿ ನಾಲ್ಕೂ ಠಾಣೆಗಳನ್ನು ನಿರ್ಮಿಸಲಾಗುತ್ತಿದ್ದು, ಪೊಲೀಸ್ ಕರ್ತವ್ಯ ಹಾಗೂ ಸಾರ್ವಜನಿಕರ ಅನುಕೂಲಕ್ಕೆ ಅಗತ್ಯ ಸೌಲಭ್ಯಗಳನ್ನು ಹಂತ ಹಂತವಾಗಿ ಒದಗಿಸಲಾಗುತ್ತಿದೆ.
> – ಡಾ.ಚಂದ್ರಗುಪ್ತ, ಮೈಸೂರು ನಗರ ಪೊಲೀಸ್ ಆಯುಕ್ತ.



ಮೈಸೂರಿನ ಪಶ್ಚಿಮ ಆರ್‌ಟಿಓ ಕಚೇರಿಯಲ್ಲಿ ಎಲ್‌ಎಲ್‌ಆರ್, ಡಿಎಲ್ ಪರೀಕ್ಷೆಗೆ ಶೀಘ್ರ ಕೃತಕ ಚಾಲನಾ ಸಾಧನ ಅಳವಡಿಕೆ

ಮೈಸೂರು,ಜು.18(ಆರ್‌ಕೆ)– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿ (ಪಶ್ಚಿಮ)ಯಲ್ಲಿ ಲಘು ಮೋಟಾರು ವಾಹನ ಚಾಲನಾ ಸಾಧನ ಅಳವಡಿಸಲಾಗುವುದು. ಮೈಸೂರಿನ ಪಶ್ಚಿಮ, ಹುಣಸೂರು ಹಾಗೂ ಮಡಿಕೇರಿ ಸೇರಿದಂತೆ ರಾಜ್ಯದ 25 ಪ್ರಾದೇಶಿಕ ಸಾರಿಗೆ ಕಚೇರಿ ಹಾಗೂ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಎಲ್‌ಎಂಪಿ ವಾಹನ ಚಾಲನಾ ಸಾಧನಗಳ ಅಳವಡಿಸಲು ಸರ್ಕಾರ 5 ಕೋಟಿ ರೂ. ಅನುದಾನ ಬಿಡುಗಡೆ ಮಾಡಿದೆ.

ಲಘು ವಾಹನ ಚಾಲನಾ ಪರವಾನಗಿ (ಡಿಎಲ್) ಅಗತ್ಯವುಳ್ಳವರಿಗೆ ಪರೀಕ್ಷೆ ನಡೆಸಲು ಅತ್ಯಾಧುನಿಕ ತಂತ್ರಜ್ಞಾನದ ಸಾಧನಗಳನ್ನು ಈಗಾಗಲೇ ಮೈಸೂರಿನ ನಾರಾಯಣ ಹೃದಯಾಲಯದ ಎದುರಿನ ರಿಂಗ್ ರಸ್ತೆಯಲ್ಲಿರುವ ಪೂರ್ವ ಪ್ರಾದೇಶಿಕ ಸಾರಿಗೆ ಕಚೇರಿ (ಕೆಎ 55) ಯಲ್ಲಿ ಅಳವಡಿಸಲಾಗಿದೆ. ಆದರೆ ಪಶ್ಚಿಮ ಆರ್‌ಟಿಓದಲ್ಲಿ ಹೊಸ ಯಂತ್ರ ಅಳವಡಿಸಲು ಸಾರಿಗೆ ಇಲಾಖೆ ಮುಂದಾಗಿದೆ ಎಂದು ಪ್ರಾದೇಶಿಕ ಸಾರಿಗೆ ಕಚೇರಿ (ಪಶ್ಚಿಮ) ಅಧಿಕಾರಿ ಭೀಮನಗೌಡ ಪಾಟೀಲ್ ತಿಳಿಸಿದ್ದಾರೆ.



ಮೈಸೂರು, ಹುಣಸೂರು ಹಾಗೂ ಮಡಿಕೇರಿ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಕೃತಕ ಚಾಲನಾ ಸಾಧನ ಅಳವಡಿಸಲು ಕರ್ನಾಟಕ ರಾಜ್ಯ ರಸ್ತೆ ಸುರಕ್ಷಾ ಪ್ರಾಧಿಕಾರವು ಟೆಂಡರ್ ಕರೆದಿದ್ದು, 3 ವರ್ಷಗಳ ಗುಣಮಟ್ಟ ಖಾತರಿಯೊಂದಿಗೆ ಯಂತ್ರಗಳ ಬಳಕೆಗೆ ತರಬೇತಿ ಹೊಂದಿದ ಸಿಬ್ಬಂದಿ ಒದಗಿಸುವ ಷರತ್ತಿನೊಂದಿಗೆ ಖರೀದಿಸಬೇಕೆಂದು ಆದೇಶಿಸಲಾಗಿದೆ. ಕಂಪ್ಯೂಟರ್ ಮಾನಿಟರ್ ಮೇಲೆ ರಸ್ತೆಯ ವಾಹನ ಸಂಚಾರ ದಟ್ಟಣೆ ಇರುವೆಡೆ ಅಡೆ–ತಡೆಗಳನ್ನು ದಾಟಿ ಸುರಕ್ಷಿತವಾಗಿ ವಾಹನ ಚಾಲನೆ ಮಾಡುವುದನ್ನು ಹೇಳಿಕೊಡಲು ಈ ಸಾಧನ ಸಹಕಾರಿಯಾಗಲಿದೆ.

ಹೆದ್ದಾರಿ, ಇಳಿಜಾರು ಪ್ರದೇಶ, ಸಣ್ಣ ರಸ್ತೆಗಳು, ಕಡಿದಾದ ತಿರುವುಗಳು, ಬೆಟ್ಟ–ಗುಡ್ಡ, ಎತ್ತರದ ಪ್ರದೇಶಗಳಲ್ಲಿ ಚಾಲನೆ ಬಗ್ಗೆ ಕಂಪ್ಯೂಟರ್‌ನಲ್ಲಿ ತರಬೇತಿ ನೀಡಲಾಗುವುದು. ಈಗಾಗಲೇ ಕೆಲ ಖಾಸಗಿ ಚಾಲನಾ ತರಬೇತಿ ಶಾಲೆಗಳಲ್ಲಿ ಈ ಸಾಧನಗಳ ಮೂಲಕ ತರಬೇತಿ ನೀಡಲಾಗುತ್ತಿದ್ದು, ಇದೀಗ ಸರ್ಕಾರಿ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲೂ ಈ ವ್ಯವಸ್ಥೆ ಅಳವಡಿಸಲು ಸಿದ್ಧತೆ ನಡೆಸಲಾಗಿದೆ. ಡಿಎಲ್‌ಗಾಗಿ ಅರ್ಜಿ ಸಲ್ಲಿಸಿದವರಿಗೆ ಎಲ್‌ಎಲ್‌ಆರ್ ನೀಡುವ ಮೊದಲು ಸಂಚಾರ ನಿಯಮ ಹಾಗೂ ಮೋಟಾರು ವಾಹನ ಕಾಯ್ದೆಯನ್ವಯ ವಾಹನ ಚಾಲನೆ ಮಾಡುವಾಗ ಅನುಸರಿಸಬೇಕಾದ ಸೂಚನೆಗಳನ್ನು ಹೇಳಿಕೊಟ್ಟು ಪರೀಕ್ಷೆ ನಡೆಸಿ ಅದರಲ್ಲಿ ಉತ್ತೀರ್ಣರಾದವರಿಗೆ ಪ್ರಾಯೋಗಿಕವಾಗಿ ವಾಹನ ಓಡಿಸುವ ಪರೀಕ್ಷೆ ನಡೆಸಿ ಸುರಕ್ಷಿತವಾಗಿ ಡ್ರೈವಿಂಗ್ ಮಾಡುವುದನ್ನು ಸಂಪೂರ್ಣವಾಗಿ ಕಲಿತಿದ್ದವರಿಗೆ ಮಾತ್ರ ಡಿಎಲ್ ನೀಡುವ ಪದ್ಧತಿ ಜಾರಿಯಲ್ಲಿದೆ.

ವಾಹನ ಚಾಲನಾ ತರಬೇತಿಯನ್ನು ತಂತ್ರಜ್ಞಾನದೊಂದಿಗೆ ಸಿದ್ಧಪಡಿಸಿದ ಸಾಧನದ ಮೂಲಕ ನೀಡಿದಲ್ಲಿ ಚಾಲನೆ ಬಗ್ಗೆ ಹೆಚ್ಚು ಕೌಶಲ್ಯ ಅಭಿವೃದ್ಧಿಯಾಗುತ್ತದೆ ಎಂಬ ಉದ್ದೇಶದಿಂದ ಈ ಯೋಜನೆಯನ್ನು ಸರ್ಕಾರ ಜಾರಿಗೆ ತರುತ್ತಿದೆ. ಇದರಿಂದಾಗಿ ಪರಿಣಾಮಕಾರಿಯಾಗಿ ಹೆಚ್ಚು ಸುರಕ್ಷತೆಯಿಂದ ವಾಹನ ಓಡಿಸಲು ಕ್ಷಮತೆ ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಿಸಲಾಗಿದೆ. ಅಪಘಾತ ತಡೆಗಟ್ಟುವುದು, ಪಾದಚಾರಿಗಳಿಗೆ ತೊಂದರೆಯಾಗದಂತೆ ಚಾಲನೆ, ವೇಗ ಮಿತಿ, ಅಂತರ ಕಾಯ್ದುಕೊಳ್ಳುವುದು, ಕಿರಿದಾದ ರಸ್ತೆ ವಾಹನ ಸಂಚಾರ ದಟ್ಟಣೆ ಇರುವೆಡೆಯೂ ಅಪಘಾತ ಮಾಡದಂತೆ ಸುರಕ್ಷತೆಯಿಂದ ವಾಹನ ಚಾಲನೆ ಮಾಡಲು ಅತ್ಯಾಧುನಿಕ ತರಬೇತಿಯು ಸಹಕಾರಿಯಾಗಲಿದೆ ಎಂದು ಸಾರಿಗೆ ಅಧಿಕಾರಿಗಳು ತಿಳಿಸಿದ್ದಾರೆ.


ಚಾಮುಂಡೇಶ್ವರಿ ಕ್ಷೇತ್ರದ ಅಲ್ಪಸಂಖ್ಯಾತರ ಘಟಕದ ಬ್ಲಾಕ್ ಅಧ್ಯಕ್ಷರಾಗಿ ನೇಮಕಗೊಂಡ ಆರಿಫ್ ಪಾಷ, ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದರು. ಚಿತ್ರದಲ್ಲಿ ರಾಜ್ಯ ಅಹಿಂದ ಉಪಾಧ್ಯಕ್ಷ ನಜರ್‌ಬಾದ್ ನಟರಾಜ್, ಇಲವಾಲ ಸುರೇಶ್, ಅಯೂಬ್ ಇದ್ದಾರೆ.

ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

ಮೈಸೂರು,ಜು.18–ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಿಂದ 2022–23ನೇ ಸಾಲಿನ ವಿಶೇಷ ಘಟಕ ಹಾಗೂ ಗಿರಿಜ ಉಪಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ–13 ಪರಿಶಿಷ್ಟ ಪಂಗಡ–8 ಘಟಕಗಳಿಗೆ(6+1) ಕುರಿ–ಮೇಕೆ ಘಟಕಗಳ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಿದೆ. ಅರ್ಜಿಗಳನ್ನು ಜು.30ರೊಳಗಾಗಿ ಸಲ್ಲಿಸಬಹುದು.

ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಮೈಸೂರು ಕಚೇರಿ ದೂಸಂಖ್ಯೆ:0821–2488830 ಸಂಪರ್ಕಿಸಿ.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	123.80 ಅಡಿ
ಒಳಹರಿವು	70583 ಕ್ಯೂಸೆಕ್
ಹೊರಹರಿವು	30159 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಸೋಮವಾರ	2282.51 ಅಡಿ
ಒಳ ಹರಿವು	30721 ಕ್ಯೂಸೆಕ್
ಹೊರ ಹರಿವು	29000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2854.93 ಅಡಿ
ಒಳ ಹರಿವು	11080 ಕ್ಯೂಸೆಕ್
ಹೊರ ಹರಿವು	12000 ಕ್ಯೂಸೆಕ್

ಹೇಮಾವತಿ ನೀರಿನ ಮಟ್ಟ



ಗರಿಷ್ಠ ಮಟ್ಟ	2922 ಅಡಿ
ಸೋಮವಾರ	2920.10 ಅಡಿ
ಒಳ ಹರಿವು	26099 ಕ್ಯೂಸೆಕ್
ಹೊರ ಹರಿವು	28285 ಕ್ಯೂಸೆಕ್


ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ವತಿಯಿಂದ ಶ್ರೀಜಯಚಾಮರಾಜ ಒಡೆಯರ್ ಜಯಂತಿಯನ್ನು ಸಂಘದ ಕಚೇರಿಯಲ್ಲಿ ಆಚರಿಸಿ, ಸಿಹಿ ವಿತರಿಸಲಾಯಿತು. ಚಿತ್ರದಲ್ಲಿ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ಸಂಸ್ಥಾಪಕ ಅಧ್ಯಕ್ಷ ಎನ್.ಬೆಟ್ಟೇಗೌಡ, ಗೌರವ ಸಲಹೆಗಾರ ಡಾ.ಬಿ.ಎನ್.ರವೀಶ್, ಖಜಾಂಚಿ ಎಂ.ಎನ್.ಚಂದ್ರಶೇಖರ್, ಮಾ.ವೆಂಕಟೇಶ್, ಅಕ್ಷಯ, ಮಮತಾ ಚಿತ್ರದಲ್ಲಿದ್ದಾರೆ

ಜನ ವಿರೋಧಿ ಕೇಂದ್ರ, ರಾಜ್ಯ ಸರ್ಕಾರಗಳು

- ಮಾಜಿ ಸಿಎಂ ಕುಮಾರಸ್ವಾಮಿ ವಾಗ್ದಾಳಿ
- ಬಡವರ ಸ್ಥಿತಿ ಹೇಳತೀರದಾಗಿದೆ

ಬೆಂಗಳೂರು, ಜು.18(ಕೆಎಂಶಿ)–ಪೆಟ್ರೋಲ್, ದಿನನಿತ್ಯದ ವಸ್ತು ಬೆಲೆ ಏರಿಕೆ ಆಗಿದೆ. ಈಗ ಆಹಾರ ಪದಾರ್ಥಗಳಿಗೆ ಜಿಎಸ್‌ಟಿ ಏರಿಕೆ ಮಾಡಲಾಗಿದೆ. ಇದು ಜನ ವಿರೋಧಿ ಸರ್ಕಾರ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.



ರಾಷ್ಟ್ರಪತಿ ಚುನಾವಣೆ ಹಿನ್ನೆಲೆಯಲ್ಲಿ ಸೋಮವಾರ ವಿಧಾನ ಸೌಧದಲ್ಲಿ ಮತದಾನಕ್ಕೂ ಮುನ್ನ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಹಾಲು, ಮೊಸರು, ಉಪ್ಪಿನಕಾಯಿ ಮೇಲೆ ತೆರಿಗೆ ಹೆಚ್ಚು ಮಾಡಿ ಬಡವರ ಹೊಟ್ಟೆ ಮೇಲೆ ಹೊಡೆಯುತ್ತಿದ್ದಾರೆ. ಇದು ಜನ ವಿರೋಧಿ ನಿರ್ಧಾರ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕೋವಿಡ್‌ನಿಂದಾಗಿ ಅನೇಕ ಕುಟುಂಬಗಳು ಬೀದಿಗೆ ಬಂದಿವೆ. ಇಂತಹ ಪರಿಸ್ಥಿತಿಯಲ್ಲಿ ಜನರ ಮೇಲೆ ಜಿಎಸ್‌ಟಿ ಹೊರೆ ಹಾಕಲಾಗುತ್ತಿದೆ. ಜಿಎಸ್‌ಟಿ ಬಗ್ಗೆ ನಾನು ಮೊದಲೇ ವಿರೋಧ ಮಾಡಿದ್ದೆ. ಹಗ್ಗ ಕೊಟ್ಟು ಕುತ್ತಿಗೆ ಕೊಟ್ಟಿದ್ದೀರಾ ಅಂತ ಹೇಳಿದ್ದೆ. ಈ ನೀತಿಯನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

ಜಿಎಸ್‌ಟಿ ಹೆಚ್ಚಳ ಬಡವರ ಮೇಲೆ ಪ್ರಭಾವ ಬೀರುತ್ತದೆ. ನೇರವಾಗಿ ಬಡವರ ಮೇಲೆ ಹೊರೆ ಆಗುತ್ತದೆ. ಬಿಜೆಪಿ ಸಮರ್ಥನೆ ಮಾಡಿಕೊಳ್ಳಬೇಕು. ನೂರು ಸುಳ್ಳು ಹೇಳಿ ಒಂದು ಸತ್ಯ ಮಾಡುವುದು ಅವರ ಗುಣ. ಎಂಟು ವರ್ಷದಿಂದ ಎಲ್ಲಿ ಒಳ್ಳೆ ದಿನಗಳು ಬಂತು. ಡಾಲರ್ ಬೆಲೆ ಏನಾಗಿದೆ. ಫಾರಿನ್ ಎಕ್ಸ್‌ಚೇಂಜ್ ಕೂಡಾ ಖಾಲಿ ಆಗುತ್ತಿದೆ. ಕೇಂದ್ರ ಸರ್ಕಾರದ ನೀತಿಯಿಂದ ವಿದೇಶಿಗರು ಬಂಡವಾಳ ಹೂಡಿಕೆ ವಾಪಸ್ ಪಡೆದಿದ್ದಾರೆ. ಇದು ಚರ್ಚೆ ಮಾಡಬೇಕು ಎಂದರು.

ಪ್ರಧಾನಿ ಮೋದಿ ಅವರು ಉಚಿತ ಕಾರ್ಯಕ್ರಮ ಬೇಡ ಎನ್ನುತ್ತಿದ್ದಾರೆ. ಈ ದೇಶದಲ್ಲಿ ಆಹಾರದ ಕೊರತೆಯಿಂದ 1.7 ಮಿಲಿಯನ್ ಸಾವು ಆಗುತ್ತಿದೆ. ಶ್ರೀಲಂಕಾಕ್ಕಿಂತ ನಮ್ಮ ಸ್ಥಿತಿ ಸರಿಯಿಲ್ಲ. ನಮ್ಮ ರಾಷ್ಟ್ರದಲ್ಲಿ ಬಡತನ ರೇಖೆ ಬಡ ದೇಶಕ್ಕಿಂತ ಹಿಂದೆ ಇದೆ. ಜಿಡಿಪಿ ಜೊತೆ ಬಡತನ ರೇಖೆ ಕಡಿಮೆ ಮಾಡಲು ಸರ್ಕಾರ ಕೆಲಸ ಮಾಡಬೇಕು. ಎರಡು ಹೊತ್ತು ಊಟಕ್ಕೆ ಗತಿ ಇಲ್ಲದ ಪರಿಸ್ಥಿತಿ ಇದೆ ಎಂದರು.

ರಾಷ್ಟ್ರಪತಿ ಚುನಾವಣೆ ಪಕ್ಷಾಧಾರಿತ ಚುನಾವಣೆ ಅಲ್ಲ. ರಾಷ್ಟ್ರಪತಿ ದೇಶದ ಪ್ರಥಮ ಪ್ರಜೆ. ರಾಷ್ಟ್ರಪತಿ ಅಭ್ಯರ್ಥಿ ಬಿಜೆಪಿಯವರು ಇರಬಹುದು. ಆದರೆ, ಅವರು ಗೆದ್ದ ಮೇಲೆ ಪಕ್ಷಾತೀತವಾಗಿ ಕೆಲಸ ಮಾಡಬೇಕು ಎಂದು ಅಭಿಪ್ರಾಯಪಟ್ಟರು. ಸಿದ್ದರಾಮಯ್ಯ ಅವರು, ಯಡಿಯೂರಪ್ಪ 2008ರಲ್ಲಿ ಆಪರೇಷನ್ ಕಮಲ ನಡೆಸಿದಾಗ ಏನು ಮಾಡಿದರೆಂಬುದು ನನಗೆ ಗೊತ್ತಿದೆ. ನಾನು ತಾಜ್ ವೆಸ್ಟ್ ಎಂಡ್‌ನಲ್ಲಿ ಇಲ್ಲದೆ ಹೋಗಿದ್ದರೆ ಸರ್ಕಾರ ಉಳಿಯುತ್ತಿತ್ತು ಅಂದ್ರು. ಆಯ್ತು ಹಾಗೇ ಅಂದುಕೊಳ್ಳೋಣ. ಆದರೆ, ಇವತ್ತು ಮಹಾರಾಷ್ಟ್ರದಲ್ಲಿ ಸರ್ಕಾರ ಯಾಕೆ ಹೋಯಿತೆಂಬುದನ್ನು ಜನರಿಗೆ ಹೇಳಿ. ನಾನು ಏನು ಅಪರಾಧ ಮಾಡಿದ್ದೆ. ಕಾಂಗ್ರೆಸ್ ಶಾಸಕರ ಕ್ಷೇತ್ರಕ್ಕೆ ಸಿಎಂ ಆಗಿದ್ದಾಗ 19 ಸಾವಿರ ಕೋಟಿ ರೂ. ಕೊಟ್ಟಿದ್ದೆ. ಈಗ ಅದರ ಸ್ಥಿತಿ ಏನಾಗಿದೆ. ಇದು ಕೊನೆ ಚುನಾವಣೆ ಅಂತೀರಾ ಎಂದು ಸಿದ್ದರಾಮಯ್ಯ ವಿರುದ್ಧ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ಕಾಲದಲ್ಲೇ ಬ್ರಹ್ಮಾಂಡ ಭ್ರಷ್ಟಾಚಾರ

> "ಭ್ರಷ್ಟಾಚಾರ ವ್ಯವಸ್ಥೆಗೆ ಯಾರು ಕಾರಣ. ಪೊಲೀಸ್ ಹಗರಣದ ಬಗ್ಗೆ ಮಾತಾಡ್ತೀರಾ. ಆದರೆ ಸಿದ್ದರಾಮಯ್ಯ ನಿಮ್ಮ ಕಾಲದಲ್ಲಿ ಭ್ರಷ್ಟಾಚಾರ ಮರೆತು ಹೋಗಿದ್ದೀರಾ?. ಬಿಜೆಪಿ ಮತ್ತು ಕಾಂಗ್ರೆಸ್ ನೀನು ಹೊಡೆದ ಹಾಗೆ ಮಾಡು, ನಾನು ಅತ್ತ ಹಾಗೆ ಮಾಡ್ತೀನಿ ಅನ್ನೋ ಹಾಗೆ ಆಡುತ್ತಿದ್ದಾರೆ. ಸಿದ್ದರಾಮಯ್ಯ ಅವಧಿಯಲ್ಲಿ ಲಾಟರಿ ಹಗರಣದಲ್ಲಿ ಏನು ಮಾಡಿದ್ರಿ. ಯಾರ ಮೇಲೆ ಕ್ರಮ ಆಯಿತು. ಐಎಎಸ್ ಅಧಿಕಾರಿ ಮನೆಯಲ್ಲಿ 5 ಕೋಟಿ ರೂ. ಸಿಕ್ಕಿತು. ಆ ಅಧಿಕಾರಿಯ ಮೇಲೆ ಏನು ಕ್ರಮ ಜರುಗಿಸಿದ್ದೀರಿ, ನಿಮ್ಮ ಕಾಲದಲ್ಲಿ ಬೇಕಾದಷ್ಟು ಭ್ರಷ್ಟಾಚಾರ ನಡೆದಿದೆ. ಬ್ರಹ್ಮಾಂಡದ ಭ್ರಷ್ಟಾಚಾರ ಸಿದ್ದರಾಮಯ್ಯ ಅವರ ಅವಧಿಯಲ್ಲೇ ನಡೆದಿದೆ. ಬೇಕಾದರೆ ಅ ಬಗ್ಗೆ ಚರ್ಚೆ ಮಾಡಬಹುದು. –ಹೆಚ್.ಡಿ.ಕುಮಾರಸ್ವಾಮಿ

ಕೊಡವ ವ್ಯಾಕರಣ ಪುಸ್ತಕ ಬಿಡುಗಡೆ



ಮಡಿಕೇರಿ, ಜು.18– ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ಎಂ.ಎ. ಕೊಡವ ಸ್ನಾತಕೋತ್ತರ ವಿಭಾಗ, ಫೀಲ್ಡ್ ಮಾರ್ಷಲ್ ಕೆಎಂ.ಕಾರ್ಯಪ್ಪ ಕಾಲೇಜ್ ಇವರ ಸಹಯೋಗದಲ್ಲಿ 'ಕೊಡವ ವ್ಯಾಕರಣ ಪುಸ್ತಕ ಬಿಡುಗಡೆ' ಕಾರ್ಯಕ್ರಮ ನಡೆಯಿತು.

ಮಡಿಕೇರಿ ಕೊಡವ ಸಮಾಜದ ಅಧ್ಯಕ್ಷ ಮಂಡುವಂಡ ಪಿ.ಮುತ್ತಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಕೊಡವ ಜನಾಂಗ ಮಾತ್ರವಲ್ಲದೆ ಕೊಡವ ಸಂಸ್ಕೃತಿಯೂ ಉಳಿಯಬೇಕಾದರೆ ಭಾಷೆ ಬಹಳ ಮುಖ್ಯ. ಕೊಡವ ಭಾಷೆ ಉಳಿಯಬೇಕಾದರೆ ವ್ಯಾಕರಣವೂ ಒಂದು ಭಾಗವಾಗಿದೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯು ಮೊದಲ ಬಾರಿಗೆ ಕೊಡವ ವ್ಯಾಕರಣ ಪುಸ್ತಕವನ್ನು ಹೊರ ತಂದಿರುವುದು ಒಂದು ಹೆಮ್ಮೆಯ ವಿಷಯ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಕೇಶವ ಕಾಮತ್ ಮಾತನಾಡಿ, ಕೊಡವ ಭಾಷೆ ಬಹಳ ಮುಖ್ಯ. ಇದಕ್ಕೆ ವ್ಯಾಕರಣ ಬಹಳ ಮುಖ್ಯ. ಈಗಿನ ಜನಾಂಗದವರು ಎಲ್ಲಾ ಭಾಷೆಗಳನ್ನು ಮಿಶ್ರಿತವಾಗಿ ಬಳಸಿಕೊಂಡು ಮಾತನಾಡುತ್ತಾ ನಮ್ಮ ಸಂಸ್ಕೃತಿಗೆ ಧಕ್ಕೆ ಉಂಟುಮಾಡುತ್ತಿದ್ದಾರೆ. ಇದು ನಿಲ್ಲಬೇಕು. ಎಲ್ಲರೂ ಮಾತೃ ಭಾಷೆಯನ್ನು ಬೆಳೆಸಲು ಪ್ರಯತ್ನಿಸಬೇಕು ಎಂದರು.

ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಡಾ.ಚೌರೀರ ಜಗತ್ ತಿಮ್ಮಯ್ಯ ಮಾತನಾಡಿ, ತಮ್ಮ ಕಾಲೇಜಿನಲ್ಲಿ ಈ ಕಾರ್ಯಕ್ರಮ ನಡೆಯುತ್ತಿರುವುದು ತುಂಬಾ ಸಂತೋಷದ ವಿಷಯ. ಇನ್ನೂ ಹೆಚ್ಚು ಇಂತಹ ಸ್ಫೂರ್ತಿದಾಯಕ ಕಾರ್ಯಕ್ರಮಗಳು ನಡೆಯಲಿ. ಯುವಪ್ರತಿಭೆಗಳಿಗೂ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ಮಾತನಾಡಿ, ಸುಮಾರು ಐವತ್ತು ವರುಷದವರೆಗೆ ಯಾರೂ ಕೊಡವ ಭಾಷೆಯ ವ್ಯಾಕರಣವನ್ನು ಬರೆಯಲಿಲ್ಲ. ಕೊಡವ ಭಾಷೆಯ ಓದಿಗೆ ಹಾಗೂ ಬೆಳವಣಿಗೆಗೆ ಈ ವ್ಯಾಕರಣ ಪುಸ್ತಕವು ತುಂಬಾ ಉಪಯುಕ್ತವಾದುದು. ಅಲ್ಲದೆ ಈ ಕೊಡವ ಭಾಷೆಯು ಆಡಳಿತ ಭಾಷೆಯೂ, ಸಂಪರ್ಕ ಮಾಧ್ಯಮ ಭಾಷೆಯೂ ಆದಲ್ಲಿ 8ನೇ ಪರಿಚ್ಛೇದಕ್ಕೆ ಸೇರಲು ಸುಲಭವಾಗುತ್ತದೆ ಎಂದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಪ್ರಕಟಿತ ಚೀರಮ್ಮನ ವಾಣಿ ಚಂಗುಮ್ಮಯ್ಯನವರು ಬರೆದಿರುವ 'ಭಾವನೆಲ್ ಪಬ್ಬನ ಬಳ್ಳಿ', ಪಂದ್ಯಂಡ ರೇಣುಕಾ ಸೋಮಯ್ಯ ಅವರು ಬರೆದಿರುವ 'ಪೊಂಬೊಳಿ' ಹಾಗೂ ಡಾ.ವಿ.ಅವಿನಾಶ್‌ರವರ ಸಂಶೋಧನಾ ಪ್ರಬಂಧವಾಗಿರುವ 'ಕೊಡಗಿನಲ್ಲಿ ಸಾಂವಿಧಾನಿಕ ಸುಧಾರಣೆ ಮತ್ತು ರಾಜಕೀಯ ಪರಿವರ್ತನೆಗಳು (ಕ್ರಿ.ಶ.1924–1947)' ಗಳನ್ನು ಈ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಲಾಯಿತು. ವ್ಯಾಕರಣ ಸಮಿತಿಯ ಸದಸ್ಯರಾಗಿರುವ ನಾಗೇಶ್ ಕಾಲೂರು ವ್ಯಾಕರಣದ ಮಹತ್ವದ ಬಗ್ಗೆ ತಿಳಿಸಿದರು. ವಿರಾಜಪೇಟೆ ಪೊಮಾಲೆ ವಾರಪತ್ರಿಕೆಯ ಸಂಪಾದಕರಾಗಿರುವ ಅಜ್ಜಿನಿಕಂಡ ಮಹೇಶ್ ನಾಚಯ್ಯ ಅವರು "ಕೊಡವ ಪಾಜೆಲ್ ವ್ಯಾಕರಣತ್‌ರ ಮಹತ್ವ" ಎಂಬ ವಿಷಯದ ಬಗ್ಗೆ ವಿಚಾರ ಮಂಡನೆ ಮಾಡಿದರು. ಕಾರ್ಯಕ್ರಮದಲ್ಲಿ ಅಕಾಡೆಮಿಯ ಸದಸ್ಯರಾದ ಕುಡಿಯರ ಮುತ್ತಪ್ಪ ಇತರರು ಇದ್ದರು.

ತೇಲಪಂಡ ಕವನ್ ಕಾರ್ಯಪ್ಪ ನಿರೂಪಿಸಿದರು. ರಿಜಿಸ್ಟ್ರಾರ್ ಅಜ್ಜಿಕುಟ್ಟಿರ ಸಿ.ಗಿರೀಶ್ ಸ್ವಾಗತಿಸಿದರು. ಮಾಚಿಮಾಡ ಜಾನಕಿ ಮಾಚಯ್ಯ ಪ್ರಾರ್ಥಿಸಿದರು. ಎಂ.ಎ.ಕೊಡವ ಸ್ನಾತಕೋತ್ತರ ವಿಭಾಗದ ಸಂಯೋಜಕರಾದ ಮೇಚೀರ ರವಿಶಂಕರ್ ನಾಣಯ್ಯ ವಂದಿಸಿದರು.

ತಗ್ಗಿದ ಮಳೆ ಆರ್ಭಟ: ಕಾಳಜಿ ಕೇಂದ್ರದಿಂದ ಹೊರ ಹೋಗುವಂತೆ ಸಂತ್ರಸ್ತರಿಗೆ ನೋಟಿಸ್



ಮಡಿಕೇರಿ,ಜು.18– ಮಳೆ ಕಡಿಮೆಯಾದ ಹಿನ್ನೆಲೆಯಲ್ಲಿ ಕಾಳಜಿ ಕೇಂದ್ರದಲ್ಲಿ ಆಶ್ರಯ ಪಡೆದಿದ್ದ ಸಂತ್ರಸ್ತರನ್ನು ಏಕಾಏಕಿ ಜಾಗ ಖಾಲಿ ಮಾಡುವಂತೆ ನೋಟಿಸ್ ಹೊರಡಿಸಿದ ಘಟನೆ ಚೆಟ್ಟಳ್ಳಿಯಲ್ಲಿ ನಡೆದಿದೆ.

ಜಿಲ್ಲೆಯಲ್ಲಿ ಕಳೆದ ಹಲವು ದಿನಗಳಿಂದ ಸುರಿಯುತ್ತಿರುವ ವ್ಯಾಪಕ ಮಳೆಯಿಂದಾಗಿ ಚೆಟ್ಟಳ್ಳಿ ಸಮೀಪದ ಪೊನ್ನತ್‌ಮೊಟ್ಟೆಯಲ್ಲಿ 7–8 ಮನೆಗಳು ಅಪಾಯಕ್ಕೆ ಸಿಲುಕಿದ್ದವು. ಈ ಹಿನ್ನೆಲೆ ಅಲ್ಲಿನ 7 ಕುಟುಂಬಗಳನ್ನು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ನೋಟಿಸ್ ನೀಡಲಾಗಿತ್ತು. ಕಳೆದ ವಾರ ಮಳೆ ಹೆಚ್ಚಾದ ಹಿನ್ನೆಲೆ ಅಲ್ಲಿನ 30 ಮಂದಿ ಸಂತ್ರಸ್ತರನ್ನು ಸ್ಥಳಾಂತರ ಮಾಡಿ ಚೆಟ್ಟಳ್ಳಿ ಗ್ರಾಮ ವ್ಯಾಪ್ತಿಯ ಆರ್.ಎಸ್.ಚೆಟ್ಟಳ್ಳಿ ಶಾಲೆಯಲ್ಲಿ ಕಾಳಜಿ ಕೇಂದ್ರ ಆರಂಭಿಸಲಾಗಿತ್ತು.

ಕಳೆದ ಒಂದು ವಾರದಿಂದ ಈ 7 ಕುಟುಂಬಗಳು ಕಾಳಜಿ ಕೇಂದ್ರದಲ್ಲೇ ಆಶ್ರಯ ಪಡೆದಿದ್ದು, ಇವರಿಗೆ ಇದ್ದಕ್ಕಿದ್ದಂತೆ ಕಾಳಜಿ ಕೇಂದ್ರ ಖಾಲಿ ಮಾಡಿ ಹೊರಡಿ ಎಂದು ನೋಟಿಸ್ ನೀಡಲಾಗಿದೆ. 'ಮಳೆ ಕಡಿಮೆಯಾಗಿದ್ದು, ಶಾಲೆಗಳನ್ನು ಪುನರಾರಂಭಿಸಬೇಕಾಗಿರುವ ಹಿನ್ನೆಲೆ ಶಾಲೆಯನ್ನು ಬಿಟ್ಟುಕೊಡಬೇಕಿದೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ. ಮಾತ್ರವಲ್ಲದೇ, ಕಾಳಜಿ ಕೇಂದ್ರಕ್ಕೆ ಆಹಾರ ಪೂರೈಕೆಯನ್ನೂ ನಿಲ್ಲಿಸಲಾಗಿದೆ. ಇದರಿಂದ ಭಾನುವಾರ ರಾತ್ರಿಯಿಂದ ಇಲ್ಲಿನ ಸಂತ್ರಸ್ತರು ಆಹಾರವಿಲ್ಲದೆ ಎಲ್ಲಿಗೆ ಹೋಗಬೇಕು ಎಂಬುದೂ ತಿಳಿಯದೆ ಪರದಾಡುತ್ತಿದ್ದಾರೆ ಒಂದೆಡೆ ಮಳೆ ಸಂಪೂರ್ಣವಾಗಿ ಕಡಿಮೆಯಾಗುವವರೆಗೂ ಅಥವಾ ಸೆಪ್ಟೆಂಬರ್ ತಿಂಗಳವರೆಗೂ ಸುರಕ್ಷಿತ ಸ್ಥಳಗಳಲ್ಲಿರುವಂತೆ ಕಂದಾಯ ಇಲಾಖೆಯೇ ನೋಟಿಸ್ ನೀಡಿದೆ. ಮತ್ತೊಂದೆಡೆ ಮಳೆಯ ನಡುವೆಯೇ ಕಾಳಜಿ ಕೇಂದ್ರವನ್ನು ಖಾಲಿ ಮಾಡುವಂತೆಯೂ ತಾಕೀತು ಮಾಡಲಾಗುತ್ತಿದೆ. ಇದರಿಂದ ಸಂತ್ರಸ್ತರು ತ್ರಿಶಂಕು ಸ್ಥಿತಿಯಲ್ಲಿ ಸಿಲುಕಿದ್ದಾರೆ.

ಸದ್ಯ ಗ್ರಾಮ ಪಂಚಾಯಿತಿ ಆಹಾರ ನೀಡುವುದನ್ನು ನಿಲ್ಲಿಸಿರುವ ಹಿನ್ನೆಲೆ ಸಂಘ ಸಂಸ್ಥೆಗಳು ಮತ್ತು ದಾನಿಗಳು ಇಲ್ಲಿನ ಸಂತ್ರಸ್ತರಿಗೆ ಆಹಾರ ಪೂರೈಕೆ ಮಾಡುತ್ತಿದ್ದಾರೆ. ಗ್ರಾಮ ಪಂಚಾಯಿತಿ ಹಾಗೂ ತಾಲೂಕು ಆಡಳಿತದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿರುವ ಸಂತ್ರಸ್ತರು ಬದಲಿ ವ್ಯವಸ್ಥೆ ಮಾಡಿಕೊಡುವವರೆಗೆ ಜಾಗ ಖಾಲಿ ಮಾಡಲ್ಲ ಎಂದು ಪಟ್ಟು ಹಿಡಿದಿದ್ದಾರೆ.

ಕಲ್ಲು ಕ್ವಾರಿಯ ಹೊಂಡಕ್ಕೆ ಹಾರಿ ಕಾರ್ಮಿಕ ಆತ್ಮಹತ್ಯೆ



ಕುಶಾಲನಗರ,ಜು.18–ಕಲ್ಲು ಕ್ವಾರಿಯ ಹೊಂಡಕ್ಕೆ ಹಾರಿ ಕಾರ್ಮಿಕ ಆತ್ಮಹತ್ಯೆ ಮಾಡಿಕೊಂಡ ಘಟನೆ ಕುಶಾಲನಗರ ತಾಲೂಕಿನ ಗೊಂದಿಬಸವನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಕೂಲಿ ಕಾರ್ಮಿಕ(55 ವರ್ಷ) ಚಂದ್ರು ಎಂಬಾತ ಆತ್ಮಹತ್ಯೆಗೆ ಶರಣಾದವನಾಗಿದ್ದು, ಭಾನುವಾರ ಮಧ್ಯಾಹ್ನ ಚಂದ್ರು ಧರಿಸಿದ್ದ ಪಂಚೆ, ಜರ್ಕಿನ್ ಗ್ರಾಮದ ಕುಪ್ಪ ಕ್ವಾರಿ ಬಳಿ ಪತ್ತೆಯಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಸಂಜೆ ತನಕ ಹುಡುಕಾಡಿದರೂ ಪತ್ತೆಯಾಗಿರಲಿಲ್ಲ. ಸೋಮವಾರ ದುಬಾರೆ ರ್‍ಯಾಫ್ಟಿಂಗ್ ಸಿಬ್ಬಂದಿಗಳು ರ್‍ಯಾಫ್ಟರ್ ಬೋಟ್ ಬಳಿ ಹುಡುಕಾಟ ನಡೆಸಿದಾಗ ಮಧ್ಯಾಹ್ನ ಮೃತದೇಹ ಪತ್ತೆಯಾಗಿದೆ.

ಇತ್ತೀಚೆಗಷ್ಟೆ ಚಂದ್ರು ಅವರ ಪತ್ನಿ ಮೃತಪಟ್ಟಿದ್ದು, ಈ ಹಿನ್ನೆಲೆಯಲ್ಲಿ ಮನನೊಂದು ಆತ್ಮಹತ್ಯೆಗೆ ಶರಣಾಗಿರಬಹುದೆಂದು ಗ್ರಾಮಸ್ಥರು ಅನುಮಾನ ವ್ಯಕ್ತಪಡಿಸಿದರು.

ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಡಗಲ್ಲಿ ಸಾಧಾರಣ ಮಳೆ: ತಗ್ಗಿದ ಪ್ರವಾಹ

ಮಡಿಕೇರಿ,ಜು.18– ಕೊಡಗು ಜಿಲ್ಲೆಯಲ್ಲಿ ಮಳೆಯ ಅಬ್ಬರ ತೀರಾ ಕಡಿಮೆಯಾಗಿದ್ದು, ಜಿಲ್ಲೆಯಾದ್ಯಂತ ಸಾಧಾರಣ ಮಳೆ ಸಹಿತ ಗಾಳಿ ಮುಂದುವರೆದಿದೆ. ನದಿಗಳಲ್ಲೂ ಪ್ರವಾಹ ಮಟ್ಟ ಇಳಿಕೆ ಕಂಡಿದ್ದು, ತಗ್ಗು ಪ್ರದೇಶಗಳಲ್ಲಿ ನೀರು ನಿಂತಿದೆ.

ಇನ್ನು ಅಪಾಯಕಾರಿ ಸ್ಥಳಗಳಿಂದ ಸ್ಥಳಾಂತರಗೊಂಡ ಕುಟುಂಬಗಳು ಕಾಳಜಿ ಕೇಂದ್ರಗಳಲ್ಲಿ ಆಶ್ರಯ ಪಡೆದಿವೆ. ಮಡಿಕೇರಿ ರೆಡ್‌ಕ್ರಾಸ್ ಕಾಳಜಿ ಕೇಂದ್ರದಲ್ಲಿ 6 ಕುಟುಂಬಗಳ 19 ಮಂದಿ, ವಿರಾಜಪೇಟೆ ತೋಮರ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ 17 ಕುಟುಂಬಗಳ 43 ಮಂದಿ, ಸಂತ ಅನ್ನಮ್ಮ ಶಾಲೆಯಲ್ಲಿ 131 ಕುಟುಂಬಗಳ 466 ಮಂದಿ, ಸೋಮವಾರಪೇಟೆ ಕುಡಿಗಾನ ಕುಮಾರಳ್ಳಿ ಅಂಗನವಾಡಿ ಕೇಂದ್ರದಲ್ಲಿ 1 ಕುಟುಂಬದ 4 ಮಂದಿ, ಪೊನ್ನಂಪೇಟೆ ಬಲ್ಯಮುಂಡೂರು ಅಂಗನವಾಡಿ ಕೇಂದ್ರದಲ್ಲಿ 2 ಕುಟುಂಬಗಳ 8 ಮಂದಿ ಆಶ್ರಯ ಪಡೆದಿದ್ದಾರೆ.

ಕಳೆದ 24 ಗಂಟೆ ಅವಧಿಯಲ್ಲಿ 1 ಮನೆಗೆ ಸಂಪೂರ್ಣ ಕುಸಿದು ಬಿದ್ದಿದ್ದರೆ, 1 ಮನೆಗೆ ಭಾಗಶಃ ಹಾನಿಯಾಗಿದೆ. 4 ಮನೆಗಳಿಗೆ ಅಲ್ಪ ಪ್ರಮಾಣದ ಹಾನಿ ಸಂಭವಿಸಿದೆ. ಮಳೆ ಗಾಳಿ ಕಾರಣದಿಂದ 63 ವಿದ್ಯುತ್ ಕಂಬಗಳಿಗೆ ಹಾನಿಯಾಗಿದ್ದು, ಚೆಸ್ಕಾಂ ಇಲಾಖೆಗೆ 11.30 ಲಕ್ಷ ರೂ. ನಷ್ಟವಾಗಿದೆ ಎಂದು ಜಿಲ್ಲಾಡಳಿತ ಮಾಹಿತಿ ನೀಡಿದೆ.

ರಸ್ತೆಗೆ ಹಾನಿ: ಮಡಿಕೇರಿ–ಮಂಗಳೂರು ರಸ್ತೆಯಲ್ಲಿ ವಾಹನ ಸಂಚಾರ ಬಂದ್ ಆಗಿದ್ದು, ಪರ್ಯಾಯ ಮಾರ್ಗದಲ್ಲಿ ನೂರಾರು ವಾಹನಗಳು ಸಂಚರಿಸುತ್ತಿವೆ. ಮಡಿಕೇರಿ–ಮೇಕೇರಿ–ತಾಳತ್ತಮನೆ ಮಾರ್ಗದಲ್ಲಿ ಅತಿಯಾಗಿ ವಾಹನಗಳು ಸಂಚರಿಸುತ್ತಿರುವ ಕಾರಣ ತಾಳತ್ತಮನೆ ಬಳಿ ರಸ್ತೆಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿದೆ. ರಸ್ತೆಯ ಒಂದು ಅಂಚಿನಲ್ಲಿ ಡಾಮರು ಕಿತ್ತು ಹೋಗಿ ಬಿರುಕುಗಳು ಮೂಡಿದ್ದು, ಕುಸಿಯುವ ಆತಂಕ ಎದುರಾಗಿದೆ.

ಸಹಕಾರ ಸಂಘದ ಸಾಲ ಸೌಲಭ್ಯ ಸದ್ಬಳಕೆಗೆ ಸಲಹೆ



ಕೆ.ಆರ್.ಪೇಟೆ ಜು.18– ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಸಂಕಷ್ಟಕ್ಕೆ ನೆರವಾಗುವ ಸಂಸ್ಥೆಗಳಾಗಿವೆ. ಹಾಗಾಗಿ, ಈ ಎರಡೂ ಸಹಕಾರ ಸಂಘಗಳನ್ನು ಉಳಿಸಲು ಸರ್ಕಾರವು ಶೂನ್ಯ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ನೀಡುತ್ತಿದ್ದು, ಇದನ್ನು ರೈತರು ಹಾಗೂ ಮಹಿಳಾ ಸಂಘಟನೆಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಮೈಸೂರು ವಿಭಾಗೀಯ ನಿವೃತ್ತ ಜಂಟಿ ಸಹಕಾರ ನಿಬಂಧಕ ಡಾ.ಹೆಚ್.ಆರ್. ಕೃಷ್ಣಯ್ಯಗೌಡ ಸಲಹೆ ನೀಡಿದರು.

ತಾಲೂಕಿನ ಅಘಲಯ ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ 21 ಲಕ್ಷ ರೂ. ವೆಚ್ಚದಡಿ ನೂತನವಾಗಿ ನಿರ್ಮಿಸಿರುವ 6 ವಾಣಿಜ್ಯ ಮಳಿಗೆಗಳ ಕಟ್ಟಡದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಹಕಾರ ಸಂಸ್ಥೆಗಳಿಗೆ ಚುನಾಯಿತರಾದವರು ಕಡ್ಡಾಯವಾಗಿ ಸೇವಾ ಭಾವನೆಯನ್ನು ಬೆಳೆಸಿಕೊಳ್ಳಬೇಕು. ಯಾವುದೇ ಕಾರಣಕ್ಕೆ ಸಹಕಾರ ಸಂಸ್ಥೆಯ ಮೂಲಕ ಏನಾದರೂ ಲಾಭ ಮಾಡುವ ದೃಷ್ಟಿ ಇಟ್ಟುಕೊಂಡರೆ, ಆ ಸಂಸ್ಥೆ ದಿವಾಳಿಯಾಗುವುದು ಖಚಿತವಾಗುತ್ತದೆ. ಆದ್ದರಿಂದ ಸಹಕಾರಿ ತತ್ವದಲ್ಲಿ ನಂಬಿಕೆ ಇಟ್ಟು ಸಮಾಜಕ್ಕೆ ಏನಾದರೂ ಸೇವೆ ಸಲ್ಲಿಸಬೇಕು ಈ ಮೂಲಕ ಸಹಕಾರ ಸಂಸ್ಥೆಯನ್ನು ಉಳಿಸಿ ಬೆಳೆಸಬೇಕು ಎಂದು ಮನವಿ ಮಾಡಿದರು.

ಅಘಲಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎನ್.ಡಿ.ಕೃಷ್ಣಸಿಂಗ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕ ಡಾ.ಕೆ.ಬಿ.ಚಂದ್ರಶೇಖರ್ ಅವರು ನೂತನ ವಾಣಿಜ್ಯ ಮಳಿಗೆಗಳ ಕಟ್ಟಡವನ್ನು ಉದ್ಘಾಟಿಸಿದರು. ಮಂಡ್ಯ ಜಿಲ್ಲಾ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್ ನೂತನ ಕಟ್ಟಡದ ಶಿಲಾಫಲಕ ಅನಾವರಣಗೊಳಿಸಿದರು. ಸಂಘದ ಸಿಇಓ ಎ.ಮುರಳೀಧರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು, ಡಾಲು ರವಿ, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ಎಲ್.ದೇವರಾಜು, ತಾಲೂಕು ಜೆಡಿಎಸ್ ಅಧ್ಯಕ್ಷ ಜಾನಕೀರಾಂ, ತಾಲೂಕು ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಎ.ಎಸ್.ರಮೇಶ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಎ.ಎಸ್.ಶ್ರೀಧರ್, ಸಹಕಾರ ಇಲಾಖೆಯ ಎಆರ್‌ನಾಗಭೂಷಣ್, ಗ್ರಾಪಂ ಅಧ್ಯಕ್ಷೆ ಹೇಮಾವತಿ ಲೋಕೇಶ್, ಉಪಾಧ್ಯಕ್ಷ ಪುಟ್ಟೇಗೌಡ, ಡಿಸಿಸಿ ಬ್ಯಾಂಕ್ ವ್ಯವಸ್ಥಾಪಕ ಅಶ್ವಥ್, ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕ ಮುರುಳೀಧರ್, ಸಂಘದ ಮೇಲ್ವಿಚಾರಕ ಕೆ.ಆರ್.ರಘು, ಮುಖಂಡರಾದ ಎನ್.ಎಸ್.ಮಂಜೇಗೌಡ, ಲೋಕೇಶ್(ಹೋಬಳಿ), ಆಶಾ, ಆದಿಲ್ ಪಾಷಾ, ರಾಘವೇಂದ್ರ ಮಂಜು, ಎನ್.ಎಸ್. ಮಂಜೇಗೌಡ, ಅನಂತು, ಪಾರ್ಥಸಾರಥಿ, ಎನ್.ಡಿ.ರಾಮೇಗೌಡ, ಮಂಜಮ್ಮ ದೇವಮ್ಮ, ಸಂಘದ ಸಿಇಓ ಎ.ಮುರುಳೀಧರ್ ಇದ್ದರು.

ಇಷ್ಟಪಟ್ಟು ಶ್ರಮದಿಂದ ಓದಿದಾಗ ಯಶಸ್ಸು ಸಾಧ್ಯ: ರಾಮಚಂದ್ರು



ಮಂಡ್ಯ, ಜು.18– ವಿದ್ಯಾರ್ಥಿಗಳು ಕಷ್ಟಪಟ್ಟು ಓದುವುದಕ್ಕಿಂತ ಇಷ್ಟಪಟ್ಟು ಓದಿದಾಗ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯ ಎಂದು ಶ್ರೀಶಂಭು ಸೇವಾ ಟ್ರಸ್ಟ್ ಅಧ್ಯಕ್ಷ ಹಾಗೂ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು ಹೇಳಿದರು.

ತಾಲೂಕಿನ ಬಸರಾಳು ಹೋಬಳಿಯ ದೊಡ್ಡಗರುಡನಹಳ್ಳಿ ಗ್ರಾಪಂ ಮತ್ತು ಬೇಬಿ ಗ್ರಾಪಂ ವ್ಯಾಪ್ತಿಯ ಎಲ್ಲಾ ಸರ್ಕಾರಿ ಶಾಲಾ ಮಕ್ಕಳಿಗೆ ಶ್ರೀಶಂಭು ಸೇವಾ ಟ್ರಸ್ಟ್‌ನಿಂದ ಶಾಲಾ ಬ್ಯಾಗ್ ವಿತರಿಸಿ, ಬಳಿಕ ಮಾತನಾಡಿದ ಅವರು, ಶಾಲೆ ಎಲ್ಲರಿಗೂ ಒಂದೇ ಸಮಾನ. ಎಲ್ಲರನ್ನು ಸಮನಾಗಿ ಕಾಣುವ ದೃಷ್ಟಿಯಿಂದ ಸರ್ಕಾರಿ ಶಾಲಾ ಮಕ್ಕಳಿಗೆ ಬ್ಯಾಗ್ ವಿತರಿಸುವ ಮೂಲಕ ಸಮಾನತೆ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಹೇಳಿದರು.

ಗ್ರಾಮಸ್ಥರು ಹಾಗೂ ಯುವಕ ಮಿತ್ರರು ಮಾರ್ಗದರ್ಶನ, ಸಲಹೆ, ಸಹಕಾರ ಮಾಡಿದಲ್ಲಿ ಮುಂದಿನ ದಿನಗಳಲ್ಲಿ ಶಾಲೆಗಳಲ್ಲಿ ಸ್ವಚ್ಛತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಬಸರಾಳು ಹಾಗೂ ಕೆರಗೋಡು ಹೋಬಳಿಯ ಜನ ನನ್ನನ್ನು ಪ್ರೀತಿಯಿಂದ ಬೆಳೆಸಿದ್ದಾರೆ. ಅವರ ಋಣ ತೀರಿಸುವ ಅಳಿಲು ಸೇವೆ ಮಾಡುವ ಉದ್ದೇಶದಿಂದ ನನ್ನ ದುಡಿಮೆಯಲ್ಲಿ ಒಂದಷ್ಟು ಹಣವನ್ನು ಮೀಸಲಿಟ್ಟು ಸಮಾಜಮುಖಿ ಸೇವಾ ಕಾರ್ಯಗಳನ್ನು ಹಮ್ಮಿಕೊಳ್ಳುತ್ತೇನೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗುಡಿಗೇನಹಳ್ಳಿ, ಮಾಯಪ್ಪನಹಳ್ಳಿ, ದೊಡ್ಡಗರುಡನಹಳ್ಳಿ, ಬೇಬಿ, ಗುತ್ತಗಾನಹಳ್ಳಿ, ತರಣಿಗೆರೆ, ಬಿದರಕಟ್ಟೆ, ಗೂಳಿಕೊಪ್ಪಲು, ಕಾರೇಕಟ್ಟೆ, ಚಾಕನಹಳ್ಳಿ ಸೇರಿದಂತೆ ಇತರೆ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಬ್ಯಾಗ್ ವಿತರಿಸಲಾಯಿತು. ಈ ವೇಳೆ ಗ್ರಾಪಂ ಪ್ರಭಾರ ಅಧ್ಯಕ್ಷೆ ಜ್ಯೋತಿ, ಸದಸ್ಯ ಶಿವಲಿಂಗಯ್ಯ, ಡೈರಿ ಅಧ್ಯಕ್ಷ ಸ್ವಾಮಿ, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ನಾಗರಾಜು, ಮುಖಂಡರಾದ ಬಸವಯ್ಯ, ಹೆಚ್.ಡಿ.ಬಾಲರಾಜು, ಕೆಂಚನಹಳ್ಳಿ ಪುಟ್ಟಸ್ವಾಮಿ, ಸಿದ್ದೇಗೌಡ, ನಿಂಗೇಗೌಡ, ಬಸವರಾಜು, ಚಂದ್ರಶೇಖರ್, ಪಟೇಲ್ ಆನಂದ್ ಸೇರಿದಂತೆ ಮತ್ತಿತರರಿದ್ದರು.

ಇಂದು ಜೇನುಕೃಷಿ ತರಬೇತಿ ಕಾರ್ಯಕ್ರಮ

ಮದ್ದೂರು, ಜು.18– ಪಟ್ಟಣದ ಸಹಾಯಕ ತೋಟಗಾರಿಕಾ (ಜಿಪಂ) ಕಚೇರಿಯ ಆವರಣದಲ್ಲಿ ಜು.19ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಜೇನುಕೃಷಿ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ತಾಲೂಕಿನ ರೈತರಿಗೆ ಜೇನುಕೃಷಿ ಹಾಗೂ ಇಲಾಖೆಯ ಬಗ್ಗೆ ಮಾಹಿತಿಗಳನ್ನು ನೀಡಲಾಗುವುದು. ಜೊತೆಗೆ ಇಲಾಖೆ ವತಿಯಿಂದ ಜೇನು ಸಾಕಾಣಿಕೆಗೆ ಬೇಕಾಗುವ ಜೇನುಪೆಟ್ಟಿಗೆ ಮತ್ತು ಜೇನು ಕುಟುಂಬವನ್ನು ಒದಗಿಸಲಾಗುವುದು. ಆಸಕ್ತರು ತರಬೇತಿಯಲ್ಲಿ ಪಾಲ್ಗೊಂಡು ಸದುಪಯೋಗ ಪಡೆದುಕೊಳ್ಳುವಂತೆ ಹಿರಿಯ ಸಹಾಯಕ ತೋಟಗಾರಿಕಾ ನಿರ್ದೇಶಕಿ ಕೆ.ಎಂ.ರೇಖಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ಕೆಆರ್‌ಎಸ್ ಜಲಾಶಯಕ್ಕೆ ಸಿಎಂ ಬಾಗಿನ ಅರ್ಪಣೆ

ಮೈಸೂರು ರಾಜವಂಶಸ್ಥರ ಆಹ್ವಾನಕ್ಕೆ ಮನವಿ



ಶ್ರೀರಂಗಪಟ್ಟಣ, ಜು.18– ತಾಲೂಕಿನ ಕೆಆರ್‌ಎಸ್ ಜಲಾಶಯಕ್ಕೆ ಜು.20ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಾಗಿನ ಅರ್ಪಿಸಲಿದ್ದು, ಈ ಕಾರ್ಯಕ್ರಮಕ್ಕೆ ಮೈಸೂರಿನ ರಾಜವಂಶಸ್ಥರಿಗೆ ಆಹ್ವಾನ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಮನವಿ ಮಾಡಿದ್ದಾರೆ.

ಯದುವಂಶದ ಕೊಡುಗೆಯಾಗಿ ನಾಡಿನ ಹೆಮ್ಮೆಯ ಪ್ರತೀಕವಾಗಿರುವ ಕನ್ನಂಬಾಡಿ ಅಣೆಕಟ್ಟೆಯ ಕಾವೇರಿ ಮಾತೆಗೆ ಬಾಗಿನ ಅರ್ಪಿಸುವ ಸಂದರ್ಭದಲ್ಲಿ ಯದುವಂಶದ ಪ್ರತಿನಿಧಿಗಳು ಹಾಜರಿರಬೇಕು ಎಂಬುದು ಕಾವೇರಿ ಕೊಳ್ಳದ ಜನರ ಆಶಯವಾಗಿದೆ. ಹಾಗಾಗಿ, ಬಾಗಿನ ಅರ್ಪಿಸುವ ವೇಳೆ ಮೈಸೂರು ರಾಜಮನೆತನದ ಪ್ರತಿನಿಧಿಯನ್ನು ಆಹ್ವಾನಿಸಿ ಅವಕಾಶ ಕಲ್ಪಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಅವರ ಮೂಲಕ ಮನವಿ ಸಲ್ಲಿಸಿದರು. ಈ ವೇಳೆ ನಗರಸಭೆ ಸದಸ್ಯರಾದ ಆರ್.ರೂಪಾ, ವಸಂತಲಕ್ಷ್ಮೀ, ಬಿ.ಎಸ್.ಜ್ಯೋತಿ, ನಾಜೀಯಾ ಸುಲ್ತಾನ್, ಅಲಿ ಅನ್ಸುರ್, ರಮೇಶ್ ಸೇರಿದಂತೆ ಇತರರಿದ್ದರು.

ಮಾಜಿ ಎಂಎಲ್‌ಸಿ ರಮೇಶ್‌ರಾಜು ನಿಧನ



ಮಂಡ್ಯ, ಜು.18– ಅರ್ಕೇಶ್ವರ ಶಿಕ್ಷಣ ಸಂಸ್ಥೆಗಳ(ಎಇಟಿ) ಅಧ್ಯಕ್ಷರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಎಂ.ಡಿ.ರಮೇಶ್‌ರಾಜು(80) ಸೋಮವಾರ ಬೆಳಗ್ಗೆ 9 ಗಂಟೆ ಸಮಯದಲ್ಲಿ ಮಂಡ್ಯದ ಸುಭಾಷ್‌ನಗರದ ಮನೆಯಲ್ಲಿ ನಿಧನರಾದರು.

ಎಂ.ಡಿ.ರಮೇಶ್‌ರಾಜು ಅವರು ವಿಧಾನಪರಿಷತ್ ಸದಸ್ಯರಾಗಿ, ಮೈಷುಗರ್ ಕಾರ್ಖಾನೆ ಅಧ್ಯಕ್ಷರಾಗಿ, ಅರ್ಕೇಶ್ವರ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿ, ಮಂಡ್ಯ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಆಪ್ತರಾಗಿದ್ದ ರಮೇಶ್‌ರಾಜು, ಕೃಷ್ಣ ಸಿಎಂ ಆಗಿದ್ದಾಗ ವಿಧಾನಪರಿಷತ್‌ಗೆ ಆಯ್ಕೆಯಾಗಿದ್ದರು.

ಮೃತರು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಗರದ ಹೊಳಲು ರಸ್ತೆ ಸಂತೆ ಮೈದಾನದ ಸ್ಮಶಾನದಲ್ಲಿ ಸಂಜೆ ನೆರವೇರಿತು.ಮಾಜಿ ಮುಖ್ಯಮಂತ್ರಿಗಳಾದ ಎಸ್.ಎಂ.ಕೃಷ್ಣ, ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಎಂ.ಎಸ್.ಆತ್ಮಾನಂದ, ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮುಖಂಡರಾದ ಎಂ.ಎಸ್.ಚಿದಂಬರ್, ಕೆಪಿಸಿಸಿ ಸದಸ್ಯ ಎಂ.ಡಿ. ಜಯರಾಂ, ಎಂ.ಎಲ್.ತುಳಸೀಧರ್ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಸಿಮ್ಸ್ ಹೊರಗುತ್ತಿಗೆ ನೌಕರರ ಪ್ರತಿಭಟನೆ 8ನೇ ದಿನಕ್ಕೆ



ಚಾಮರಾಜನಗರ, ಜು.18–ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಹೊರಗುತ್ತಿಗೆಯಾಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರು ನಡೆಸುತ್ತಿರುವ ಪ್ರತಿಭಟನೆ ಸೋಮವಾರ 8ನೇ ದಿನಕ್ಕೆ ಕಾಲಿಟ್ಟಿತು.

ನಗರದ ಯಡಬೆಟ್ಟದ ತಪ್ಪಲಿನಲ್ಲಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಮುಂಭಾಗ ನೌಕರರು 8 ದಿನಗಳಿಂದ ನಡೆಸುತ್ತಿರುವ ಪ್ರತಿಭಟನೆ ಸೋಮವಾರವೂ ಸಹ ಮುಂದುವರೆಯಿತು. ತಮ್ಮ ಬೇಡಿಕೆಗೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸ್ಪಂದಿಸದ ಕಾರಣ, ಪ್ರತಿಭಟನೆಯನ್ನು ತೀವ್ರಗೊಳಿಸಲು ನಿರ್ಧರಿಸಿ ಇಂದು ಡೀನ್ ಕಚೇರಿಗೆ ಮುತ್ತಿಗೆ ಹಾಕಿದರು. ಇದಕ್ಕೆ ಕೆಲ ಸಂಘಟನೆಗಳು ಹೊರ ಗುತ್ತಿಗೆ ನೌಕರರಿಗೆ ಬೆಂಬಲ ನೀಡಿದವು. ಡೀನ್, ಸರ್ಕಾರ ಹಾಗೂ ಜಿಲ್ಲಾಡಳಿತ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು, ಪ್ರತಿಭಟನಾಕಾರರ ಮನವೊಲಿಸಿ ವಾಪಸ್ ಕಳುಹಿಸಿದರು. ನಂತರ ಹಿರಿಯ ಅಧಿಕಾರಿಗಳೊಂದಿಗೆ ಮುಖಂಡರ ಜೊತೆ ಮಾತುಕತೆ ನಡೆಸಲು ನೆರವಾದರು.

ಸಿಮ್ಸ್‌ನಲ್ಲಿ ಕಳೆದ ನಾಲ್ಕೈದು ವರ್ಷಗಳಿಂದ ಕೆಲಸ ಮಾಡುತ್ತಿರುವ ಎಲ್ಲಾ ಹೊರಗುತ್ತಿಗೆ ನೌಕರರಿಗೆ ಕಾಯ್ದೆ ಪ್ರಕಾರ ತಕ್ಷಣವೇ ನೇಮಕಾತಿ ಪತ್ರ ನೀಡುವಂತೆ ಗುತ್ತಿಗೆದಾರರಿಗೆ ಸೂಚಿಸಬೇಕು. ನೌಕರರಿಂದ ನೇಮಕಾತಿ ಪತ್ರ ನೀಡಲು ಹಣ ಪಡೆಯುತ್ತಿರುವುದನ್ನು ನಿಲ್ಲಿಸುವುದು ಸೇರಿದಂತೆ ಇನ್ನಿತರೆ ಬೇಡಿಕೆಗಳನ್ನು ಕೂಡಲೇ ಈಡೇರಿಸುವಂತೆ ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಬೀರೇಗೌಡ, ಕುಮಾರ, ಮಹೇಶ, ಮಂಜು, ಪ್ರಭು, ಹರೀಶ, ಮಹದೇವು, ರಮೇಶ್, ಮನು, ಸಿದ್ದಪ್ಪಾಜಿ, ಮಮತಾ ಇತರರು ಭಾಗವಹಿಸಿದ್ದರು.

ಚಾ.ನಗರ: ಜಿಟಿಜಿಟಿ ಮಳೆ; ಜನಜೀವನ ಅಸ್ತವ್ಯಸ್ತ





ಚಾಮರಾಜನಗರ, ಜು.18–ಜಿಲ್ಲೆಯಾದ್ಯಂತ ಸೋಮವಾರ ದಿನವಿಡೀ ಜಿಟಿಜಿಟಿ ಮಳೆ ಸುರಿದ ಪರಿಣಾಮ ಜನಜೀವನ ಅಸ್ತವ್ಯಸ್ತಗೊಂಡಿತು.

ಇಂದು ಮುಂಜಾನೆಯಿಂದಲೇ ಮೋಡ ಕವಿದ ವಾತಾವರಣ ಕಂಡು ಬಂತು. ಬೆಳಗ್ಗೆ 8 ಗಂಟೆಗೆ ಆರಂಭವಾದ ಜಿಟಿಜಿಟಿ ಮಳೆ ಸಂಜೆವರೆಗೂ ಮುಂದುವರೆಯಿತು. ಆಗಾಗ್ಗೆ ಬರುತ್ತಿದ್ದ ತುಂತುರು ಮಳೆಯಿಂದ ಜನರು ತೊಂದರೆ ಅನುಭವಿಸುವಂತಾಯಿತು. ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳಿಗೆ ತೆರಳಲು ಪರದಾಡಿದರು. ಬಹುತೇಕ ಎಲ್ಲರೂ ಛತ್ರಿ, ಸ್ವೆಟರ್ ಹಾಗೂ ಜರ್ಕಿನ್‌ಗಳ ಮೊರೆ ಹೋಗಿದ್ದರು. ನಗರದ ಬಹುತೇಕ ರಸ್ತೆಗಳು ದುಸ್ಥಿತಿಯಲ್ಲಿರುವ ಕಾರಣ ಕೆಸರುಮಯವಾದವು. ರಸ್ತೆಗಳಲ್ಲಿ ಸಂಚರಿಸುತ್ತಿದ್ದ ವಾಹನ ಸವಾರರು, ಪ್ರಯಾಣಿಕರು ಹಾಗೂ ಸಾರ್ವಜನಿಕರು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿಗೆ ಹಿಡಿಶಾಪ ಹಾಕಿದರು. ಬೀದಿಬದಿ ವ್ಯಾಪಾರಿಗಳು ಛತ್ರಿ ಹಾಗೂ ಟಾರ್ಪಲ್ ನೆರವಿನೊಂದಿಗೆ ವ್ಯಾಪಾರ ನಡೆಸಿದರೂ ಕೊಳ್ಳುವವರ ಸಂಖ್ಯೆ ತೀರ ಕಡಿಮೆ ಇದ್ದದ್ದು ಕಂಡು ಬಂತು.

ಏಳೆಂಟು ದಿನಗಳಿಂದ ಆಗಾಗ್ಗೆ ಮಳೆ ಸುರಿಯುತ್ತಿರುವ ಮಳೆಯಿಂದ ಜಮೀನುಗಳಲ್ಲಿ ಕೆಲಸ ಇಲ್ಲದೆ ಕೂಲಿಕಾರರು ಕಂಗಾಲಾಗಿದ್ದರೆ, ಸಣ್ಣ ಈರುಳ್ಳಿ ಸೇರಿದಂತೆ ಕೆಲ ಬೆಳೆಗಳು ಸತತ ಮಳೆಯಿಂದ ಹಾನಿಗೀಡಾಗಿದ್ದು, ರೈತರು ನಷ್ಟ ಅನುಭವಿಸುವಂತಾಗಿದೆ.

ಬೈಕ್‌ಗೆ ಟಿಪ್ಪರ್ ಡಿಕ್ಕಿ; ಸವಾರ ಸಾವು



ಬೇಗೂರು, ಜು.18–ಬೈಕ್‌ಗೆ ಟಿಪ್ಪರ್ ಡಿಕ್ಕಿ ಹೊಡೆದು ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಗೇಟ್ ಬಳಿಯ ರಾಷ್ಟ್ರೀಯ ಹೆದ್ದಾರಿ–766 ರಲ್ಲಿ ನಡೆದಿದೆ.

ತೊಂಡವಾಡಿ ಗ್ರಾಮದ ನಿವಾಸಿ, ಎಂ.ಮಹದೇವ ನಾಯ್ಕ(58) ಅಪಘಾತದಿಂದ ಮೃತಪಟ್ಟವರು. ಇವರು ಟೈಲರ್ ಆಗಿದ್ದು, ಬೇಗೂರಿನಲ್ಲಿ ಎಂದಿನಂತೆ ಕೆಲಸ ಮುಗಿಸಿಕೊಂಡು ಸಾಯಂಕಾಲ ತಮ್ಮ ಫ್ಯಾಷನ್ ಪ್ರೋ ಬೈಕ್(ಕೆಎ45 ಆರ್ 7081)ನಲ್ಲಿ ಸ್ವಗ್ರಾಮಕ್ಕೆ ತೆರಳುತ್ತಿದ್ದರು. ಈ ವೇಳೆ ನಂಜನಗೂಡು ಕಡೆಯಿಂದ ತೊಂಡವಾಡಿ ಗ್ರಾಮದಲ್ಲಿರುವ ಕ್ರಷರ್ ಕಡೆಗೆ ತೆರಳುತ್ತಿದ್ದ ಟಿಪ್ಪರ್(ಕೆಎ08–7396)ಡಿಕ್ಕಿ ಹೊಡೆದಿದೆ. ಪರಿಣಾಮ ಮಹದೇವನಾಯ್ಕ ಸ್ಥಳದಲ್ಲೇ ಅಸುನೀಗಿದ್ದಾರೆ.

ಸ್ಥಳಕ್ಕೆ ಪೊಲೀಸ್ ವೃತ್ತನಿರೀಕ್ಷಕ ಕಿರಣ್‌ಕುಮಾರ್, ಸಬ್‌ಇನ್ಸ್‌ಪೆಕ್ಟರ್ ಜಗದೀಶ್ ಧೂಳ ಶೆಟ್ಟಿ, ಸಿಬ್ಬಂದಿಯೊಂದಿಗೆ ಭೇಟಿ ಪರಿಶೀಲಿಸಿದರು. ಸದ್ಯ ಪ್ರಕರಣ ದಾಖಲಿಸಿಕೊಂಡಿರುವ ಬೇಗೂರು ಠಾಣೆ ಪೊಲೀಸರು ಟಿಪ್ಪರ್ ಚಾಲಕನನ್ನು ಬಂಧಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಸ್ಥಳೀಯರಿಂದ ಪ್ರತಿಭಟನೆ : ಅಪಘಾತ ಸಂಭವಿಸಿದ ಸುದ್ದಿ ತಿಳಿಯುತ್ತಿದ್ದಂತೆ ತೊಂಡವಾಡಿ ಸೇರಿದಂತೆ ಅಕ್ಕಪಕ್ಕದ ಗ್ರಾಮಸ್ಥರು ದಿಢೀರ್ ರಸ್ತೆತಡೆ ನಡೆಸಿ ಪ್ರತಿಭಟಿಸಿದರು. ಈ ರಸ್ತೆಯಲ್ಲಿ ದಿನೇದಿನೆ ಅಪಘಾತಗಳು ಹೆಚ್ಚಾಗುತ್ತಿವೆ. ಕ್ರಷರ್‌ನಿಂದ ಟಿಪ್ಪರ್, ಲಾರಿಗಳ ಓಡಾಟ ಹೆಚ್ಚಾಗಿದೆ. ಬೈಕ್ ಸವಾರರು ಜೀವ ಕೈಯಲ್ಲಿಡಿದು ಸಂಚರಿಸುವಂತಾಗಿದೆ. ಕೂಡಲೇ ರಸ್ತೆ ಅಗಲೀಕರಣಗೊಳಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು. ಪೊಲೀಸರು ಪ್ರತಿಭಟನಾಕಾರರ ಮನವೊಲಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಅರ್ಜಿ ಆಹ್ವಾನ

ಕೊಳ್ಳೇಗಾಲ,ಜು.18– ಕೊಳ್ಳೇಗಾಲದ ಮುಡಿಗುಂಡ ಸಮೀಪದಲ್ಲಿರುವ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿರುವ 8 ಮತ್ತು 9ನೇ ತರಗತಿಯ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

9ನೇ ತರಗತಿಯಲ್ಲಿ ಪ್ರವರ್ಗ–1ರಲ್ಲಿ ಖಾಲಿ ಸ್ಥಾನಕ್ಕೆ ತರಗತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅದೇ ರೀತಿಯಲ್ಲಿ 8ನೇ ತರಗತಿಯ ಪ್ರವೇಶಾತಿಗಾಗಿ ಸಾಮಾನ್ಯ, ಎಸ್‌ಟಿ ಮತ್ತು ಇತರೆ ಸಮಾಜದ 5 ಖಾಲಿ ಸೀಟುಗಳಿಗೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಲು ಜು.20 ಕಡೇ ದಿನ.

ಹೆಚ್ಚಿನ ಮಾಹಿತಿಗಾಗಿ ಬಿಇಓ ಕಚೇರಿ ಅಥವಾ ಮುಖ್ಯಶಿಕ್ಷಕರನ್ನು, 9972726769ಗೆ ಸಂಪರ್ಕಿಸಲು ಕೋರಲಾಗಿದೆ.

ಇಂದಿನಿಂದ ಮಳಿಗೆ ಮಾರಮ್ಮನ ತಂಪು ಹಬ್ಬ

ಕೊಳ್ಳೇಗಾಲ, ಜು.18–ನಗರದ ಮಾರಿಗುಡಿ ಬಡಾವಣೆಯಲ್ಲಿರುವ ದೇವಾಲಯದಲ್ಲಿ ಇಂದಿ((ಜು.19)ನಿಂದ ಮಳಿಗೆ ಮಾರಮ್ಮನ ತಂಪು ಹಬ್ಬ, ಉಯ್ಯಾಲೋತ್ಸವ ಹಾಗೂ ವಿವಿಧ ಸೇವಾ ಉತ್ಸವಗಳು ಜು.28 ವರೆಗೆ 8 ದಿನಗಳ ಕಾಲ ಜರುಗಲಿದೆ

19ರಿಂದ ಮಾರಮ್ಮ ದೇವಿಗೆ ವಿಶೇಷ ಅಲಂಕಾರ ಹಾಗೂ ವಿನೂತನ ಸೇವಾ ಕೈಂಕರ್ಯ ಜರುಗಲಿದ್ದು, ಅಂದು ಬೆಳಗ್ಗೆ ಮಾರಮ್ಮನ ತಂಪು ಉತ್ಸವದ ಅಂಗವಾಗಿ ವಿಶೇಷ ಪೂಜೆ, ಉತ್ಸವ ಮೂರ್ತಿ ಮೆರವಣಿಗೆ ಜರುಗಲಿದೆ. 20ರಂದು ವಿವಿಧ ಉತ್ಸವಗಳು, ವಿಶೇಷ ಪೂಜೆ ಹಾಗೂ ಗಿರಿವಾಸ ಮತ್ತು ಧನಂಜಯ ಅವರಿಂದ ಭಕ್ತಿ ಗೀತೆ ಗಾಯನ ಕಾರ್ಯಕ್ರಮ, 21ರಂದು ರಾಜರಾಜೇಶ್ವರಿ ಮಹಿಳಾ ಸಂಘದಿಂದಲೂ ಭಕ್ತಿ ಗೀತಗಾಯನದ ಬಳಿಕ ವಿಶೇಷ, ಪೂಜೆ, ಮಹಾಮಂಗಳಾರತಿ ನೆರವೇರಲಿದೆ.

22ರಂದು ದೇವಿಗೆ ದೀಪೋತ್ಸವ ಸೇವೆ ಜರುಗಲಿದೆ. 23ರಂದು ವಿಶೇಷ ಸೇವೆ ಬಳಿಕ ಗಾಯಕರಾದ ಅಶ್ವಿನಿ, ತಬಲ ದಶಪಾಲ್ ತಂಡದಿಂದ ಜಾನಪದ ಗೀತೆ ಮತ್ತು ವಿಶೇಷ ಕಾರ್ಯಕ್ರಮಗಳು ಜರುಗಲಿವೆ. 24ರಂದು ವಿವಿಧ ಸೇವಾ ಉತ್ಸವಗಳು ಮತ್ತು ನುರಿತ ಕಲಾವಿದರಿಂದ ರಸಮಂಜರಿ ಕಾರ್ಯಕ್ರಮ, 25ರಂದು ಸಜ್ಜ ಸಂಗೀತ ಶಾಲೆಯ ಕುಮುದ ಅವರಿಂದ ಸಂಗೀತ ಕಾರ್ಯಕ್ರಮ, 26ರಂದು ಸಾಯಿ ವಿಶಾರದ ಸಂಗೀತ ಸಭಾದಿಂದಲೂ ಸಹ ಸಂಗೀತ ಕಾರ್ಯಕ್ರಮ, 27ರಂದು ಕಾಲರ್ಪಣ ನೃತ್ಯ ಶಾಲೆಯಿಂದ ಭರತನಾಟ್ಯ, 28ರಂದು ಭಜನೆ ಮತ್ತು ಮಹಾಮಂಗಳಾರತಿ, ಉತ್ಸವಗಳು ಜರುಗಲಿದೆ. ಪ್ರತಿ ದಿನ ಬೆಳಗ್ಗೆ ಹಾಗೂ ಸಂಜೆ ಮಾರಮ್ಮನಿಗೆ ವಿಭಿನ್ನ ಹಾಗೂ ವಿಶೇಷ ರೀತಿಯ ಅಲಂಕಾರ ಸೇವೆಯೂ ಭಕ್ತಾದಿಗಳಿಂದ ಜರುಗಲಿದೆ ಎಂದು ದೇಗುಲದ ಆಡಳಿತ ಮಂಡಳಿ ತಿಳಿಸಿದೆ.

ಮರಕ್ಕೆ ಆಕ್ಟಿವಾ ಡಿಕ್ಕಿ: ವಿದ್ಯಾರ್ಥಿ ಸಾವು

ಮೈಸೂರು, ಜು.18– ನಿಯಂತ್ರಣ ತಪ್ಪಿದ ಹೋಂಡಾ ಆಕ್ಟಿವಾ ಸ್ಕೂಟರ್ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ವಿದ್ಯಾರ್ಥಿ ಸಾವನ್ನಪ್ಪಿದ ಘಟನೆ ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಬಳಿ ಸಂಭವಿಸಿದೆ. ಪಿರಿಯಾಪಟ್ಟಣದ ವಿದ್ಯಾರ್ಥಿ ಕೆ.ಎಸ್. ಹೇಮಂತ್ (19) ಅಪಘಾತದಲ್ಲಿ ಮೃತಪಟ್ಟವನಾಗಿದ್ದು, ಸ್ಕೂಟರ್ ಚಾಲನೆ ಮಾಡುತ್ತಿದ್ದ ಕೊಡಗಿನ ವಿದ್ಯಾರ್ಥಿ ಕೆ.ಆರ್. ಯಶಸ್ (19) ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾನೆ.

ನಾಲ್ವರು ವಿದ್ಯಾರ್ಥಿಗಳು 2 ದ್ವಿಚಕ್ರ ವಾಹನಗಳಲ್ಲಿ ಜು.16ರಂದು ರಾತ್ರಿ ಅಶೋಕ ಪುರಂನಲ್ಲಿ ಸ್ನೇಹಿತನ ಹುಟ್ಟುಹಬ್ಬದ ಪಾರ್ಟಿ ಮುಗಿಸಿಕೊಂಡು ಹಿಂದಿರುಗುತ್ತಿದ್ದರು. ರಾತ್ರಿ 10.20ರ ಸುಮಾರಿನಲ್ಲಿ ಯಶಸ್ ಚಾಲನೆ ಮಾಡುತ್ತಿದ್ದ ಹೋಂಡಾ ಆಕ್ಟಿವಾ (ಕೆಎ12,ಆರ್9557) ಕ್ರಾಫರ್ಡ್‌ಹಾಲ್ ದಾಟಿ ಆರ್ಚ್ ಕಡೆಗೆ ಚಲಿಸುತ್ತಿದ್ದ ವೇಳೆ ತುಂತುರು ಮಳೆಯಿದ್ದ ಕಾರಣ ಸ್ಕಿಡ್ ಆಗಿ ರಸ್ತೆಬದಿ ಇದ್ದ ಟ್ರಾಫಿಕ್ ಸೈನ್ ಬೋರ್ಡ್‌ಗೆ ಉಜ್ಜಿಕೊಂಡು ಹೋಗಿ ಸ್ಕೂಟರ್ ಮರಕ್ಕೆ ಡಿಕ್ಕಿ ಹೊಡೆದಿದೆ. ಈ ವೇಳೆ ಹಿಂಬದಿ ಸವಾರ ಹೇಮಂತ್ ತಲೆಗೆ ಸೈನ್‌ಬೋರ್ಡ್‌ನ ಆ್ಯಂಗ್ಲರ್ ಬಡಿದು ತೀವ್ರವಾಗಿ ಗಾಯಗೊಂಡಿದ್ದಾನೆ. ಸ್ಕೂಟರ್ ಚಾಲನೆ ಮಾಡುತ್ತಿದ್ದ ಯಶಸ್ ಹೆಲ್ಮೆಟ್ ಧರಿಸಿದ್ದರಿಂದ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ತೀವ್ರವಾಗಿ ಗಾಯಗೊಂಡ ಹೇಮಂತ್‌ನನ್ನು ಕೆ.ಆರ್.ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ. ಈ ಸಂಬಂಧ ಕೆ.ಆರ್.ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ತಮ್ಮ ಬಳಿ ಕೆಲಸಕ್ಕಿದ್ದ ಮಹಿಳೆ ಹೆಸರಲ್ಲಿ ಸಾಲ ಪಡೆದು ವಂಚನೆ

ಬ್ಯಾಗ್ ತಯಾರಿಕಾ ಕಂಪನಿ ಮಾಲೀಕ, ಆತನ ಸ್ನೇಹಿತನ ವಿರುದ್ಧ ಕೇಸ್ ದಾಖಲು

ಮೈಸೂರು, ಜು.18– ಬ್ಯಾಗ್ ತಯಾರಿಕಾ ಕಂಪನಿಯೊಂದರ ಮಾಲೀಕ ತನ್ನ ಬಳಿ ಕೆಲಸ ಮಾಡುತ್ತಿದ್ದ ಮಹಿಳೆಯ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ಸಾಲ ಪಡೆದು ವಂಚಿಸಿರುವ ಬಗ್ಗೆ ವರದಿಯಾಗಿದೆ.

ಮೈಸೂರಿನ ಗಾಂಧಿನಗರದಲ್ಲಿ ಸೆಲೆಬ್ರೇಷನ್ ಬ್ಯಾಗ್ ಫ್ಯಾಕ್ಟರಿ ಹೆಸರಿನ ಕಾರ್ಖಾನೆಯ ಮಾಲೀಕ ವೆಂಕಟೇಶಮೂರ್ತಿ (43) ಮತ್ತು ಆತನ ಸ್ನೇಹಿತ ರಂಗಸ್ವಾಮಿ (33) ಆರೋಪಿಗಳೆಂದು ಗುರುತಿಸಲಾಗಿದ್ದು, ಇವರಿಬ್ಬರೂ ಸೇರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಗಾಂಧಿನಗರ ನಿವಾಸಿ ಎಸ್. ಯಶೋಧ ಎಂಬುವರ ಹೆಸರಿನಲ್ಲಿ ಸಾಲಪಡೆದು ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

ವಿವರ: ಯಶೋಧ (30) ಅವರು ವೆಂಕಟೇಶ್ವರ ಮೂರ್ತಿ ಮಾಲೀಕತ್ವದ ಸೆಲೆಬ್ರೇಷನ್ ಬ್ಯಾಗ್ಸ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಪಿಎಂಇಜಿಪಿ ಯೋಜನೆಯಡಿ ಬ್ಯಾಂಕ್‌ನಲ್ಲಿ ಉದ್ಯೋಗಕ್ಕಾಗಿ ಸಾಲ ಪಡೆಯಬಹುದು. ಸರ್ಕಾರದಿಂದ ಸಬ್ಸಿಡಿಯೂ ದೊರೆಯುತ್ತದೆ ಎಂದು ಯಶೋಧ ಅವರಿಗೆ ವೆಂಕಟೇಶಮೂರ್ತಿ ಮತ್ತು ರಂಗಸ್ವಾಮಿ ತಿಳಿಸಿದ್ದಾರೆ. ಅಲ್ಲದೆ, ಸಾಲ ಪಡೆದ ಹಣವನ್ನು ತನಗೆ ನೀಡಿದರೆ ಸರ್ಕಾರದಿಂದ ಬರುವ ಸಬ್ಸಿಡಿಯನ್ನು ಯಶೋಧಗೆ ನೀಡುವುದಾಗಿಯೂ, ಸಾಲವನ್ನು ತಾನೇ ಬ್ಯಾಂಕ್‌ಗೆ ಪಾವತಿ ಮಾಡುವುದಾಗಿಯೂ ನಂಬಿಸಿ 2015ರಲ್ಲಿ ಯಶೋಧಾ ಹೆಸರಿನಲ್ಲಿ ಪಿಎಂಇಜಿಪಿ ಯೋಜನೆಯಡಿ ಬ್ಯಾಂಕ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಅದಕ್ಕಾಗಿ ಯಶೋಧಾ ಹೆಸರಿನಲ್ಲಿ 'ಯಶವಿ ಇಂಡಸ್ಟ್ರೀಸ್' ಹೆಸರಿನಲ್ಲಿ ಕಂಪನಿಯನ್ನೂ ನೋಂದಾಯಿಸಿದ್ದಾರೆ. 2015ರ ಮಾ.19ರಂದು ಎಸ್‌ಬಿಐನಿಂದ 19.30 ಲಕ್ಷ ರೂ. ಸಾಲ ಮಂಜೂರಾಗಿದ್ದು, ಈ ಹಣದಲ್ಲಿ ವೆಂಕಟೇಶಮೂರ್ತಿ 22 ಹೊಲಿಗೆ ಯಂತ್ರಗಳನ್ನು ಖರೀದಿಸಿ ತಮ್ಮ ಕಾರ್ಖಾನೆಯಲ್ಲಿ ಇಟ್ಟುಕೊಂಡಿದ್ದಾರೆ. ಆದರೆ, ಸಾಲದ ಕಂತನ್ನು ಪಾವತಿಸಿಲ್ಲ. 2020ರ ಮಾ.6 ರಂದು ಸಾಲದ ಕಂತು ಪಾವತಿಸುವಂತೆ ಯಶೋಧಾ ಅವರಿಗೆ ನೋಟೀಸ್ ಬಂದಿದೆ. ಅಸಲು, ಬಡ್ಡಿ ಸೇರಿ 31,63,816 ರೂ. ಪಾವತಿಸಬೇಕಾಗಿತ್ತು ಎಂದು ನೋಟೀಸ್‌ನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಯಶೋಧಾ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು, ನ್ಯಾಯಾಲಯ ಆದೇಶದ ಮೇರೆಗೆ ವೆಂಕಟೇಶಮೂರ್ತಿ ಮತ್ತು ರಂಗಸ್ವಾಮಿ ವಿರುದ್ಧ ಎನ್.ಆರ್.ಠಾಣೆ ಪೊಲೀಸರು ಭಾರತೀಯ ದಂಡಸಂಹಿತೆ 403, 406, 420, 504, 506, 34ರಡಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಲಾರಿ ಮೇಲಿಂದ ಬಿದ್ದು ಲೋಡರ್ ಸಾವು

ಮಾಲೀಕ, ಚಾಲಕನ ವಿರುದ್ಧ ಪ್ರಕರಣ ದಾಖಲು

ಹುಣಸೂರು, ಜು.18– ಭತ್ತದ ಮೂಟೆ ಲೋಡ್ ಮಾಡುವ ವೇಳೆ ಲಾರಿ ಚಲಿಸಿದ್ದರಿಂದ ಕೆಳಗೆ ಬಿದ್ದು ಗಾಯಗೊಂಡಿದ್ದ ಲೋಡರ್ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿರುವ ಬಗ್ಗೆ ವರದಿಯಾಗಿದೆ. ಕೆ.ಆರ್.ನಗರ ತಾಲೂಕು ಚಂದಗಾಲು ಗ್ರಾಮದ ಸೋಮೇಗೌಡ ಅಲಿಯಾಸ್ ಸ್ವಾಮಿಗೌಡ (55) ಮೃತಪಟ್ಟ ಲೋಡರ್ ಆಗಿದ್ದು, ಜು.10ರಂದು ಹುಣಸೂರಿನ ಎಪಿಎಂಸಿ ಆವರಣದಲ್ಲಿ ಸ್ವಾಮಿಗೌಡ ಭತ್ತದ ಮೂಟೆಗಳನ್ನು ಲಾರಿ (ಕೆಎ09 ಸಿ9515) ಗೆ ಲೋಡ್ ಮಾಡುತ್ತಿದ್ದ ವೇಳೆ ಚಾಲಕ ಲಾರಿಯನ್ನು ಹಿಂದೆ ಮುಂದೆ ಚಲಿಸಿದ್ದಾನೆ. ಈ ವೇಳೆ ಆಯತಪ್ಪಿ ಬಿದ್ದು ತೀವ್ರವಾಗಿ ಗಾಯಗೊಂಡ ಸ್ವಾಮಿಗೌಡನಿಗೆ ಹುಣಸೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆ ನಂತರ ಆತನನ್ನು ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೆ ಜು.16ರಂದು ಸಾವನ್ನಪ್ಪಿದ್ದಾನೆ. ಈ ಸಂಬಂಧ ಆತನ ಪುತ್ರ ಸಿ.ಎಸ್. ರವಿ ಜು.17ರಂದು ನೀಡಿದ ದೂರಿನನ್ವಯ ಹುಣಸೂರು ಟೌನ್ ಠಾಣೆ ಪೊಲೀಸರು ಲಾರಿ ಮಾಲೀಕ ಮತ್ತು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರೆಸಿದ್ದಾರೆ.

ಕಾರಿನಲ್ಲಿ ಗಾಂಜಾ ಸಾಗಾಣೆ: ಇಬ್ಬರ ಬಂಧನ; ಮತ್ತಿಬ್ಬರು ಪರಾರಿ

ಮೈಸೂರು, ಜು.18– ಟೊಯೋಟಾ ಇಟಿಯೋಸ್ ಕಾರಿನಲ್ಲಿ ಸಾಗಿಸುತ್ತಿದ್ದ 15.622 ಕೆಜಿ ಗಾಂಜಾ ವಶಪಡಿಸಿಕೊಂಡಿರುವ ಇಲವಾಲ ಠಾಣೆ ಪೊಲೀಸರು ಪರಾರಿಯಾಗಿರುವ ಇಬ್ಬರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ. ಕಾರಿನಲ್ಲಿ ಗಾಂಜಾ ಸಾಗಿಸಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಕೆ.ಎನ್. ಸುರೇಶ್ ಬೋಪಣ್ಣ ತಮ್ಮ ಸಿಬ್ಬಂದಿಯೊಂದಿಗೆ ಠಾಣೆ ಮುಂಭಾಗ ಮೈಸೂರು–ಹುಣಸೂರು ಮುಖ್ಯರಸ್ತೆಯಲ್ಲಿ ಬ್ಯಾರಿಕೇಡ್ ಅಳವಡಿಸಿ, ಜು.16ರಂದು ರಾತ್ರಿ ವಾಹನ ತಪಾಸಣೆಯಲ್ಲಿ ತೊಡಗಿದ್ದರು. ಈ ವೇಳೆ ಅಲ್ಲಿಗೆ ಬಂದ ಟೊಯೋಟಾ ಇಟಿಯೋಸ್ ಕಾರು (ಕೆಎ41, ಪಿ.0460) ನಿಲ್ಲುತ್ತಿದ್ದಂತೆಯೇ ಹಿಂಬದಿ ಸೀಟಿನಲ್ಲಿದ್ದ ಇಬ್ಬರು ಓಡಿ ಹೋಗಿದ್ದಾರೆ. ಚಾಲಕ ಮತ್ತು ಪಕ್ಕದ ಸೀಟಿನಲ್ಲಿ ಕುಳಿತಿದ್ದ ಇಬ್ಬರನ್ನು ವಶಕ್ಕೆ ಪಡೆದು ಕಾರಿನ ತಪಾಸಣೆ ನಡೆಸಿದಾಗ 15.622 ಕೆಜಿ ಒಣಗಾಂಜಾ ಪತ್ತೆಯಾಗಿದೆ. ಈ ಸಂಬಂಧ ಮೈಸೂರಿನ ರಾಜೀವ್‌ನಗರ ನಿವಾಸಿ ಮುದಾಸಿರ್ ಅಹಮ್ಮದ್ (36) ಮತ್ತು ಮಂಡಿ ಮೊಹಲ್ಲಾದ ಶೇಕ್ ಮತೀನ್ (30) ಎಂಬುವವರನ್ನು ಬಂಧಿಸಿ, ಪರಾರಿಯಾದ ಮೈಸೂರಿನ ಖಾನ್‌ಸಾಬ್ ಮತ್ತು ಶಾಹಿದ್ ಎಂಬುವರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮಂಡ್ಯ, ಜು.18– ಮನೆ ಬೀಗ ಮುರಿದು 1.42 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಮಂಡ್ಯ ತಾಲೂಕಿನ ತಗ್ಗಹಳ್ಳಿ ಗ್ರಾಮದಿಂದ ವರದಿಯಾಗಿದೆ. ಮೂಲತಃ ತಗ್ಗಹಳ್ಳಿ ಗ್ರಾಮದವರಾಗಿದ್ದು, ಹಾಲಿ ಯತಗದಹಳ್ಳಿ ಗ್ರಾಮದಲ್ಲಿ ಪ್ರಸನ್ನ ಎಂಬುವರು ವಾಸವಿದ್ದಾರೆ. ಅವರ ತಗ್ಗಹಳ್ಳಿ ನಿವಾಸದಲ್ಲಿ ತಾಯಿ ಮತ್ತು ಅಕ್ಕನ ಮಗಳು ವಾಸವಿದ್ದು, ಕಣ್ಣಿನ ಆಪರೇಷನ್‌ಗಾಗಿ ಪ್ರಸನ್ನ ತಾಯಿ ಸಾಕಮ್ಮ ಜು.12ರಂದು ಬೆಂಗಳೂರಿಗೆ ತೆರಳಿದ್ದರು. ವಾಪಸ್ಸಾದ ನಂತರ ಚೇತರಿಕೆಯಾಗುವವರೆಗೂ ಮಗಳ ಮನೆಯಲ್ಲೇ ಉಳಿದುಕೊಂಡಿದ್ದಾರೆ. ಜು.16ರಂದು ಪ್ರಸನ್ನ ಅವರು ತಗ್ಗಹಳ್ಳಿ ಮನೆಗೆ ತೆರಳಿದಾಗ ಮನೆಯ ಬೀಗ ಮುರಿದಿರುವುದು ಕಂಡುಬಂದಿದೆ. ಖದೀಮರು ಮನೆಯಲ್ಲಿದ್ದ 1.42 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ಈ ಸಂಬಂಧ ಮಂಡ್ಯ ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನಿವೃತ್ತಿ ವೇತನ ಕಡತ ವಿಲೇವಾರಿಗೆ ಲಂಚ: ಟ್ರೆಜರಿ ಸಿಬ್ಬಂದಿ ಎಸಿಬಿ ಬಲೆಗೆ

ಮಡಿಕೇರಿ, ಜು.18– ನಿವೃತ್ತಿ ವೇತನದ ಕಡತ ವಿಲೇವಾರಿ ಮಾಡಲು ಲಂಚ ಸ್ವೀಕರಿಸಿದ ಜಿಲ್ಲಾ ಖಜಾನೆಯ ಕೇಸ್‌ವರ್ಕರ್ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ)ದ ಬಲೆಗೆ ಬಿದ್ದಿದ್ದಾನೆ. ಕುಶಾಲನಗರದಲ್ಲಿ ಸರ್ವೇ ಅಧೀಕ್ಷಕರಾಗಿದ್ದು, ಕಳೆದ ಏ.30ರಂದು ನಿವೃತ್ತಿ ಹೊಂದಿದ್ದ ಎಂ.ಎಂ. ಲೋಕನಾಥ್ ಅವರು ನಿವೃತ್ತಿ ವೇತನದ ಕಡತ ವಿಲೇವಾರಿಗಾಗಿ ಮಡಿಕೇರಿ ಜಿಲ್ಲಾ ಖಜಾನೆಯ ಕೇಸ್‌ವರ್ಕರ್ ಎಂ.ಎ. ರವಿಕುಮಾರ್ ಅವರನ್ನು ಜು.13 ಮತ್ತು 16 ರಂದು ಸಂಪರ್ಕಿಸಿದಾಗ ಅವರು 7 ಸಾವಿರ ರೂ. ಲಂಚದ ಬೇಡಿಕೆ ಇಟ್ಟು ಕೊನೆಗೆ 5 ಸಾವಿರ ರೂ.ಗಳಿಗೆ ಒಪ್ಪಿಕೊಂಡಿದ್ದಾರೆ. ಈ ಸಂಬಂಧ ಸರ್ವೇ



ಇಲಾಖೆ ನಿವೃತ್ತ ಅಧೀಕ್ಷಕರು ಮಡಿಕೇರಿ ಎಸಿಬಿಗೆ ದೂರು ನೀಡಿ, ಜಿಲ್ಲಾ ಖಜಾನೆ ಕಚೇರಿ ಆವರಣದಲ್ಲಿ ರವಿಕುಮಾರ್‌ಗೆ 5 ಸಾವಿರ ರೂ. ನೀಡಿದಾಗ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳು ಲಂಚದ ಹಣ ಸಮೇತ ರವಿಕುಮಾರ್‌ನನ್ನು ಬಂಧಿಸಿದ್ದಾರೆ. ಎಸಿಬಿ ದಕ್ಷಿಣ ವಲಯ ಎಸ್‌ಪಿ ಸಜೀತ್ ಮಾರ್ಗದರ್ಶನದಲ್ಲಿ ಕೊಡಗು ಎಸಿಬಿ ಡಿವೈಎಸ್‌ಪಿ ಕೆ.ರಾಜೇಂದ್ರ ನೇತೃತ್ವದಲ್ಲಿ ಇನ್ಸ್‌ಪೆಕ್ಟರ್ ಕುಮಾರ್ ಸಿಬ್ಬಂದಿಗಳಾದ ವಸಂತ, ಸಜನ್, ಲೋಹಿತ್, ಪ್ರವೀಣ್‌ಕುಮಾರ್ ಮತ್ತು ದೀಪಿಕಾ ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಶುದ್ಧ ಕುಡಿಯುವ ನೀರು ಪೂರೈಕೆ

ಮೈಸೂರು ನಗರಪಾಲಿಕೆಯಿಂದ ಅತ್ಯಾಧುನಿಕ 'ವ್ಯಾಕ್ಯೂಂ ಫೀಡ್' ಜಲ ಶುದ್ಧೀಕರಣ ಯಂತ್ರಗಳ ಅಳವಡಿಕೆ

ಮೋಹನ್ ಕಾಯಕ

ಮೈಸೂರು, ಜು.18– ಮೈಸೂರು ನಗರ ಹಾಗೂ ಹೊರ ವಲಯದಲ್ಲಿರುವ ಬಡಾವಣೆಗಳಿಗೂ 'ಕ್ಲೋರಿನೇಷನ್' ಮೂಲಕ ಜಲ ಶುದ್ಧೀಕರಿಸಿ, ಕುಡಿಯುವ ನೀರು ಪೂರೈಕೆ ಮಾಡುತ್ತಿರುವ ಮೈಸೂರು ಮಹಾನಗರ ಪಾಲಿಕೆ ಅತ್ಯಾಧುನಿಕ 'ವ್ಯಾಕ್ಯೂಂ ಫೀಡ್'(VACCUM FEED)' ಯಂತ್ರೋಪಕರಣಗಳ ಅಳವಡಿಕೆಗೆ ಮುಂದಾಗಿದೆ.

ಯಾದವಗಿರಿಯಲ್ಲಿರುವ ವಾಣಿ ವಿಲಾಸ ವಾಟರ್ ವರ್ಕ್ಸ್ ಕಚೇರಿ ಬಳಿ, ಯಾದವಗಿರಿ ಹೆಚ್‌ಎಲ್‌ಆರ್, ವಿಜಯನಗರದ ಕೇಂದ್ರೀಯ ಜಲ ಸಂಗ್ರಹಗಾರ, ಕುವೆಂಪುನಗರ, ಜರ್ಮನ್ ಪ್ರೆಸ್, ಜೆಕೆಟೈರ್ಸ್ ಕಾರ್ಖಾನೆ ಹಿಂಭಾಗ, ಮೇಳಾಪುರ, ರಮ್ಮನಹಳ್ಳಿ, ಬೆಳಗೊಳ, ದೇವನೂರು, ಪಿಂಜರಾಪೋಲ್ (ಉದ್ಬೂರ್ ಗೇಟ್ ಬಳಿ), ಹುಲ್ಲಹಳ್ಳಿ ಸಮೀಪದ ಕೆಂಬಾಳುವಿನಲ್ಲಿ ಕ್ಲೋರಿನ್ ಸಿಲಿಂಡರ್‌ಗಳ ಮೂಲಕ ಕುಡಿಯುವ ನೀರಿನ ಶುದ್ಧೀಕರಣ ಮಾಡಲಾಗುತ್ತಿದೆ.

ನೀರಿಗೆ ಕ್ಲೋರಿನ್ ರಾಸಾಯನಿಕ ಬೆರೆಸುವುದಕ್ಕಾಗಿ ಮೊದಲಿನಿಂದಲೂ ಬಳಸುತ್ತಿದ್ದ 'ಗ್ರ್ಯಾವಿಟಿ ಫೀಡ್(GRAVITY FEED)' ಯಂತ್ರೋಪಕರಣಗಳ ಬದಲಿಗೆ ಆಧುನಿಕ 'ವ್ಯಾಕ್ಯೂಂ ಫೀಡ್' ಯಂತ್ರೋಪಕರಣಗಳನ್ನು ಅಳವಡಿಸಲಾಗುತ್ತಿದೆ. ಈ ಮೂಲಕ ಕ್ಲೋರಿನ್ ಸಿಲಿಂಡರ್ ಸೋರಿಕೆಗೆ ಕಡಿವಾಣ ಹಾಕುವುದರ ಜೊತೆಗೆ ಜಲ ಶುದ್ಧೀಕರಣ ಪ್ರಕ್ರಿಯೆ ಇನ್ನಷ್ಟು ಸರಳವಾಗಿದೆ.

ಪಿಂಜರಾಪೋಲ್ ಘಟಕದಲ್ಲಿ ಮೊದಲು ಅಳವಡಿಸಿದ್ದ 'ವ್ಯಾಕ್ಯೂಂ ಫೀಡ್' ಮಾದರಿಯಲ್ಲಿ 16.60 ಲಕ್ಷ ರೂ ವೆಚ್ಚದಲ್ಲಿ ಕುವೆಂಪುನಗರದ ವಲಯ ಜಲ ಸಂಗ್ರಹಾಗಾರದಲ್ಲಿ ಕ್ಲೋರಿನೇಷನ್ ಘಟಕ ಮತ್ತು ಕ್ಲೋರಿನ್ ಅನಲೈಸರ್ ಅಳವಡಿಕೆ ಕಾಮಗಾರಿ, ಯಾದವಗಿರಿ ಹೆಚ್‌ಎಲ್‌ಆರ್‌ನಲ್ಲಿ 18.60 ಲಕ್ಷ ರೂ. ವೆಚ್ಚದಲ್ಲಿ 'ವ್ಯಾಕ್ಯೂಂ ಫೀಡ್ ಮಾದರಿಯ ಕ್ಲೋರಿನೇಷನ್ ಘಟಕ', ಕೆಂಬಾಳು ಜಲ ಶುದ್ಧೀಕರಣ ಘಟಕದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಎರಡು 'ವ್ಯಾಕ್ಯೂಂ ಕ್ಲೋರಿನೇಟರ್ ಅಳವಡಿಕೆ ಮತ್ತು ಕ್ಲೋರಿನೇಟರ್ ಕಟ್ಟಡ ನಿರ್ಮಾಣ ಕಾಮಗಾರಿ, ಹೊಂಗಳ್ಳಿ 2 ಮತ್ತು 3ನೇ ಹಂತದ ಜಲ ಶುದ್ಧೀಕರಣ ಘಟಕದಲ್ಲಿ 34 ಲಕ್ಷ ರೂ. ವೆಚ್ಚದಲ್ಲಿ 'ವ್ಯಾಕ್ಯೂಂ ಕ್ಲೋರಿನೇಟರ್ ಘಟಕ ಮತ್ತು ಕ್ಲೋರಿನೇಟರ್ ಕಟ್ಟಡ ನಿರ್ಮಾಣ ಕಾಮಗಾರಿ ಹಾಗೂ ದೇವನೂರು ಜಲ ಸಂಗ್ರಹಾಗಾರದಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ 'ವ್ಯಾಕ್ಯೂಂ ಫೀಡ್ ಕ್ಲೋರಿನೇಟರ್ ಅಳವಡಿಸುವ ಕಾಮಗಾರಿ ನಡೆಯುತ್ತಿದ್ದು, ಬಹುತೇಕ ಕಡೆಗಳಲ್ಲಿ ಮುಕ್ತಾಯಗೊಳಿಸಿ ಆಧುನಿಕ ಯಂತ್ರಗಳ ಮೂಲಕ ಜಲ ಶುದ್ಧೀಕರಣ ನಡೆಯುತ್ತಿದೆ.



ಕುವೆಂಪುನಗರ ಜಲಸಂಗ್ರಹಾರದಲ್ಲಿ ನಿರ್ಮಾಣಗೊಳ್ಳುತ್ತಿರುವ ಕ್ಲೋರಿನೇಷನ್ ಘಟಕ

ನೀರಿನಿಂದ ಸಾಂಕ್ರಾಮಿಕ ಕಾಯಿಲೆಗಳು ಹರಡದಂತೆ ಮುನ್ನೆಚ್ಚರಿಕೆ...


ಕುಡಿಯುವ ನೀರಿನಿಂದ ವಾಂತಿ, ಭೇದಿ, ಕರುಳು ಬೇನೆ ಇನ್ನಿತರೆ ಸಾಂಕ್ರಾಮಿಕ ರೋಗಗಳು ಹರಡದಂತೆ ವಾಣಿವಿಲಾಸ ವಾಟರ್ ವರ್ಕ್ಸ್‌ನಲ್ಲಿರುವ ಲ್ಯಾಬ್ ಹಾಗೂ ಕೆಂಬಾಳು ಜಲ ಶುದ್ಧೀಕರಣ ಘಟಕದಲ್ಲಿ(ಕಬಿನಿ ಜಲ ಶುದ್ಧಿಕರಣ ಘಟಕ) ನೀರಿನ ಪರೀಕ್ಷೆ ಮಾಡಲಾಗುವುದು. ನೀರಿನ 'ಪಿಹೆಚ್ ಪ್ರಮಾಣ', ಕ್ಲೋರೈಡ್–ಫ್ಲೋರೈಡ್, ಬ್ಯಾಕ್ಟೀರಿಯಾಲಜಿ, ನೀರಿನ ಗಡಸುತನ, ನೀರಿನ ಟರ್ಬಿಡಿಟಿ ಟೆಸ್ಟ್ ಸೇರಿದಂತೆ ಇನ್ನಿತರೆ ನೀರಿನ ಪರೀಕ್ಷೆಗಳನ್ನು ಮಾಡಲಾಗುವುದು. ಸಾಂಕ್ರಾಮಿಕ ರೋಗಗಳು ಕಂಡುಬಂದರೆ ಕೂಡಲೇ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಮಾಹಿತಿ ಪಡೆದು ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

- **ಮಹಮದ್ ಮುಸ್ತಫಾ,** ಸಹಾಯಕ ಕಾರ್ಯಪಾಲಕ ಅಭಿಯಂತರ, ವಾಣಿ ವಿಲಾಸ ವಾಟರ್ ವರ್ಕ್ಸ್

ಕ್ಲೋರಿನ್ ರಾಸಾಯನಿಕ ಸರಬರಾಜು ವೇಳೆ ಪೈಪ್‌ನಲ್ಲಿ ಸಣ್ಣ ರಂಧ್ರ ಕಂಡುಬಂದರೂ ಅಥವಾ ಸಣ್ಣ ಪ್ರಮಾಣದಲ್ಲಿ ಸೋರಿಕೆಯಾದರು ಕ್ಲೋರಿನ್ ಸರಬರಾಜನ್ನೇ ಸ್ಥಗಿತಗೊಳಿಸುವ 'ವ್ಯಾಕ್ಯೂಂ ಫೀಡ್' ಯಂತ್ರದಲ್ಲಿ ರೆಗ್ಯುಲೇಟರ್ ಇದ್ದು, ಕ್ಲೋರಿನ್ ಅನಿಲ ಸೋರಿಕೆಯಿಂದ ಯಾವುದೇ ಬಗೆಯ ಅನಾಹುತ ಸಂಭವಿಸದಂತೆ ತಡೆಯಲು ಸಹಾಯಕವಾಗಿದೆ. ಇನ್ನೂ ಕೆಲ ಜಲ ಸಂಗ್ರಹಾಗಾರಗಳಲ್ಲಿ ಹಳೆಯ 'ಗ್ರ್ಯಾವಿಟಿ ಫೀಡ್' ಯಂತ್ರಗಳನ್ನೇ ಬಳಕೆ ಮಾಡುತ್ತಿದ್ದು, ಹಂತ ಹಂತವಾಗಿ ಅಲ್ಲಿಯೂ 'ವ್ಯಾಕ್ಯೂಂ ಫೀಡ್' ಯಂತ್ರೋಪಕರಣಗಳನ್ನು ಅಳವಡಿಸಲಾಗುವುದು ಎಂದು ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಸಹಾಯಕ ಕಾರ್ಯಪಾಲಕ ಅಭಿಯಂತರ ಮಹಮದ್ ಮುಸ್ತಫಾ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.


ತರಬೇತಿ: ಕ್ಲೋರಿನೇಷನ್ ಘಟಕಗಳಲ್ಲಿ ಪ್ರತಿನಿತ್ಯ ಮೂರು ಪಾಳಿಯಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ 'ವ್ಯಾಕ್ಯೂಂ ಫೀಡ್' ಯಂತ್ರ ಬಳಕೆ ಕುರಿತು ಖಾಸಗಿ ಸಂಸ್ಥೆಗಳ ಜೊತೆಗೂಡಿ ಸೂಕ್ತ ತರಬೇತಿ ನೀಡಲಾಗುತ್ತಿದೆ. ಕ್ಲೋರಿನ್ ಸಿಲಿಂಡರ್ ಪೂರೈಕೆ ಮಾಡುವ ಸಂಸ್ಥೆಯಿಂದ ಆಗಾಗ ತರಬೇತಿ ನಡೆಯುತ್ತಿದ್ದು, ಕ್ಲೋರಿನ್ ಸಿಲಿಂಡರ್ ಖಾಲಿಯಾದಾಗ ಮತ್ತೊಂದು ಸಿಲಿಂಡರ್ ಅಳವಡಿಸುವುದು, ಶುದ್ಧ ನೀರಿನ ಮಟ್ಟ ಗುರುತಿಸುವುದು, ಅಗತ್ಯ ಪ್ರಮಾಣದ ಕ್ಲೋರಿನ್ ರಾಸಾಯನಿಕವನ್ನು ನೀರಿನೊಂದಿಗೆ ಬೆರೆಸುವ ಕ್ರಮ ಸೇರಿದಂತೆ ಕ್ಲೋರಿನೇಷನ್‌ನ ಪ್ರತಿಯೊಂದು ಸೂಕ್ಷ್ಮ ಅಂಶಗಳನ್ನು ತಿಳಿಸಿಕೊಡಲಾಗುತ್ತಿದೆ ಎಂದು ತಿಳಿಸಿದರು.

ಆಂಧ್ರಪ್ರದೇಶದಿಂದ ಬರಲಿವೆ ಕ್ಲೋರಿನ್ ಸಿಲಿಂಡರ್‌ಗಳು: ಕ್ಲೋರಿನ್ ಸಿಲಿಂಡರ್‌ಗಳ ಪೂರೈಕೆಗಾಗಿ 'ಸದನ್ ಕೆಮಿಕಲ್ಸ್' ಎಂಬ ಕಂಪನಿಯವರಿಗೆ ಗುತ್ತಿಗೆ ನೀಡಲಾಗಿದೆ. ಕಂಪನಿಯವರು ಆಂಧ್ರಪ್ರದೇಶದ ಕರ್ನೂಲ್ ಹಾಗೂ ರಾಜಮಂಡ್ರಿಯಿಂದ ಕ್ಲೋರಿನ್ ಸಿಲಿಂಡರ್ ತರಿಸುತ್ತಿದ್ದು, ತಿಂಗಳಿಗೆ 30–35 ಕ್ಲೋರಿನ್ ಸಿಲಿಂಡರ್‌ಗಳ ಬಳಕೆಯಾಗುತ್ತಿದೆ ಎಂದರು.



'ವ್ಯಾಕ್ಯೂಂ ಫೀಡ್' ಯಂತ್ರ

ಇನ್ನೂ ಅತ್ಯಾಧುನಿಕ ಕ್ಲೋರಿನೇಷನ್ ಯಂತ್ರಗಳಿವೆ: 'ವ್ಯಾಕ್ಯೂಂ ಫೀಡ್' ಯಂತ್ರಗಳಿಗಿಂತಲೂ ಇನ್ನೂ ಅತ್ಯಾಧುನಿಕ 'ಕ್ಲೋರಿನ್ ಡೈಆಕ್ಸೈಡ್' ಎಂಬ ಕ್ಲೋರಿನೇಷನ್ ಯಂತ್ರಗಳಿವೆ. ಆದರೆ ಅವುಗಳ ಬೆಲೆ 2 ಕೋಟಿಗೂ ಹೆಚ್ಚು ಪಾಲಿಕೆ ಕೌನ್ಸಿಲ್ ಸಭೆಯಲ್ಲಿ 'ಕ್ಲೋರಿನ್ ಡೈಆಕ್ಸೈಡ್' ಯಂತ್ರಗಳ ಬಳಕೆ ಕುರಿತು ವಿಷಯ ಪ್ರಸ್ತಾಪಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು 10–15 ಲಕ್ಷ ರೂ. ಬೆಲೆಯ 'ವ್ಯಾಕ್ಯೂಂ ಫೀಡ್' ಯಂತ್ರಗಳ ಅಳವಡಿಕೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.



ವಿಜಯನಗರದ ಕೇಂದ್ರೀಯ ಜಲ ಸಂಗ್ರಹಾಗಾರದಲ್ಲಿರುವ ಕ್ಲೋರಿನೇಷನ್ ಘಟಕ

ಸಿದ್ದರಾಮಯ್ಯರ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ನಿಂದನೆ ಪೋಸ್ಟ್; ಸೈಬರ್ ಕ್ರೈಂ ಠಾಣೆಗೆ ದೂರು

ಮೈಸೂರು, ಜು.18(ಎಸ್‌ಬಿಡಿ)– ವಿಪಕ್ಷ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ನಿಂದಿಸಿದ್ದ ವ್ಯಕ್ತಿಯ ವಿರುದ್ಧ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ, ಮೈಸೂರಿನ ಸೈಬರ್ ಕ್ರೈಂ ಪೊಲೀಸ್ ಠಾಣೆಗೆ ಸೋಮವಾರ ದೂರು ನೀಡಿದೆ.



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ನಿನ್ನೆ ನಡೆದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಮುಂದಿನ ವಿಧಾನ ಸಭಾ ಚುನಾವಣೆ ನಾನು ಸ್ಪರ್ಧಿಸುವ ಕೊನೆಯ ಚುನಾವಣೆ ಎಂದು ಹೇಳಿದ್ದರು. ಇದು ಸುದ್ದಿ ವಾಹಿನಿಯೊಂದರ ವೆಬ್‌ಸೈಟ್‌ನಲ್ಲಿ ಪ್ರಸಾರವಾಗುವ ಸಂದರ್ಭದಲ್ಲಿ ವ್ಯಕ್ತಿಯೊಬ್ಬ ಸಿದ್ದರಾಮಯ್ಯನವರ ಬಗ್ಗೆ ಅವಾಚ್ಯ ಶಬ್ಧಗಳನ್ನು ಬಳಸಿ ಕಾಮೆಂಟ್ ಮಾಡಿದ್ದ. ಆ ವ್ಯಕ್ತಿ ಯಾರೆಂದು ಪತ್ತೆಯಾದ ನಂತರದಲ್ಲಿ ಕಾಂಗ್ರೆಸ್ ಕಾನೂನು ಸಮಿತಿಯವರು ಪೊಲೀಸರಿಗೆ ದೂರು ನೀಡಿ, ಕಾನೂನು ಕ್ರಮಕ್ಕೆ ಆಗ್ರಹಿಸಿದ್ದಾರೆ.

'ಹುಣಸೂರಿನ ಕಲ್ಕುಣಿಕೆ ಗುರುಗಳ ಕಟ್ಟೆ ಬೀದಿ ನಿವಾಸಿ ಗೋವಿಂದನಾಯಕ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದಾನೆ. 'ನೀನು ಎಲ್ಲೇ ನಿಂತರೂ ಸೋಲು, ನಿನ್ನಂತಹ ದುರಂಹಂಕಾರಿ ದೇಶದಲ್ಲಿ ಯಾರೂ ಇಲ್ಲ. ನೀನು ...' ಎಂದು ಕೆಟ್ಟದ್ದಾಗಿ ಕಾಮೆಂಟ್ ಮಾಡಿದ್ದಾನೆ. ರಾಜ್ಯದ ಹಿರಿಯ ಮುತ್ಸದ್ದಿ ನಾಯಕರ ಬಗ್ಗೆ ಹೀಗೆ ಕೀಳು ಭಾಷೆಯ ಪ್ರಯೋಗಿಸಿರುವುದು ಕ್ಷಮಾರ್ಹವಲ್ಲ. ಇಂತಹ ಹೇಳಿಕೆಗಳು ಸಂವಿಧಾನದ ಆಶಯಕ್ಕೆ ವಿರುದ್ಧ. ರಾಜಕೀಯ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆ ಸೃಷ್ಟಿಸುವ ಸಾಧ್ಯತೆ ಇದೆ. ಇದರ ಹಿಂದೆ ಸಮಾಜದ ಶಾಂತಿ ಕದಡುವ ಹುನ್ನಾರವೂ ಕಂಡುಬಂದಿದೆ ಅವಹೇಳನಕಾರಿ ಹೇಳಿಕೆ ಮೂಲಕ ಸಿದ್ದರಾಮಯ್ಯನವರ ವ್ಯಕ್ತಿತ್ವ ನಾಶ ಹಾಗೂ ತೇಜೋವಧೆಗೆ ಯತ್ನಿಸಿರುವ ಗೋವಿಂದನಾಯಕ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ಒತ್ತಾಯಿಸಲಾಗಿದೆ.


ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಕಾನೂನು ಮತ್ತು ಮಾನವ ಹಕ್ಕುಗಳ ಸಮಿತಿ ರಾಜ್ಯ ಕಾರ್ಯದರ್ಶಿ ಕವಿತಾ ಕಾಳೆ, ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಪಾಳ್ಯ ಸುರೇಶ್, ವಕೀಲರಾದ ತಿಮ್ಮಯ್ಯ, ಶಿವಪ್ರಸಾದ್, ಗಂಗಾಧರ್, ಶಿವಕುಮಾರ, ಲಕ್ಕೆಗೌಡ, ಮಹೇಶ್, ಚರಣರಾಜ್, ಪ್ರಣೀತ್, ಮೈತ್ರಿ, ಭಾಸ್ಕರ್, ಎಡತಲೆ ಮಂಜುನಾಥ್, ಹೇಮಂತ್, ಮುತ್ತುರಾಜ್ ಮತ್ತಿತರರು ದೂರು ಸಲ್ಲಿಸುವ ಸಂದರ್ಭದಲ್ಲಿ ಹಾಜರಿದ್ದರು.

ಡಾ|| ಸಿ.ಎನ್. ಮಂಜುನಾಥ್ ಸೇವೆ ಮುಂದುವರಿಕೆಗೆ ಸಿ.ಎನ್. ಮಂಜೇಗೌಡರ ಸ್ವಾಗತ

ಮೈಸೂರು, ಜು.18– ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಪದ್ಮಶ್ರೀ ಡಾ. ಸಿ.ಎನ್. ಮಂಜುನಾಥ್‌ರ ಸೇವಾ ಸಾಧನೆ ಪರಿಗಣಿಸಿ ಸರ್ಕಾರ ಒಂದು ವರ್ಷದ ಅವಧಿಗೆ ಅವರ ಸೇವೆಯನ್ನು ಮುಂದುವರೆಸಿರುವುದನ್ನು ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಸ್ವಾಗತಿಸಿದ್ದಾರೆ.



ಡಾ.ಮಂಜುನಾಥ್



ಮಂಜೇಗೌಡ

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಾ.ಸಿ.ಎನ್. ಮಂಜುನಾಥ್‌ರು ಜಯದೇವ ಸಂಸ್ಥೆ ನಿರ್ದೇಶಕರಾದ ನಂತರ ಮಾನವೀಯತೆಗೆ ಮೊದಲ ಆದ್ಯತೆ ನೀಡಿ 'ಮೊದಲು ಟ್ರೀಟ್‌ಮೆಂಟ್ ನಂತರ ಪೇಮೆಂಟ್' ಧ್ಯೇಯವಿಟ್ಟುಕೊಂಡು ಕಡುಬಡವರಿಗೂ ಗುಣಮಟ್ಟದ ಚಿಕಿತ್ಸೆ ನೀಡುತ್ತ ವರ್ಷಕ್ಕೊಮ್ಮೆ ಸಾವಿರಾರು ಮಂದಿಗೆ ಉಚಿತ ಆಂಜಿಯೋಪ್ಲಾಸ್ಟಿ ಕಾರ್ಯಾಗಾರ ನಡೆಸುತ್ತ ಹೃದ್ರೋಗಿಗಳ ಪಾಲಿಗೆ ದೇವರಾಗಿದ್ದಾರೆ.

ಮೈಸೂರು ಜಯದೇವ ಆಸ್ಪತ್ರೆಯನ್ನು ತಮ್ಮ ಮನೆಯನ್ನು ಕಟ್ಟಿಸುವ ಕಾಳಜಿ ವಹಿಸಿ, 65 ಭಾರಿ ಬೆಂಗಳೂರಿಂದ ಮೈಸೂರಿಗೆ ಭೇಟಿ ನೀಡಿ ಅದ್ಧೂರಿ, ಐಷಾರಾಮಿ ವ್ಯವಸ್ಥೆಯೊಂದಿಗೆ ನಿರ್ಮಿಸಿ ಮೈಸೂರು, ಚಾಮರಾಜನಗರ, ಕೊಡಗು, ಹಾಸನ, ಮಂಡ್ಯ ಜಿಲ್ಲೆಯ ಹೃದಯ ರೋಗಿಗಳಿಗೆ ಅನುಕೂಲ ಮಾಡಿಕೊಡುವ ಮೂಲಕ ಜಯದೇವ ಆಸ್ಪತ್ರೆಯ ಕೀರ್ತಿಯನ್ನು ಅಂತರ ರಾಷ್ಟ್ರೀಯ ಮಟ್ಟಕ್ಕೆ ಏರಿಸಿದ್ದಾರೆ. ಇಂತಹ ಹೃದಯವಂತರ ಸೇವೆಯನ್ನು ಇನ್ನೂ 5 ವರ್ಷ ಮುಂದುವರಿಸಿರುವುದು ಶ್ಲಾಘನೀಯ ಕಾರ್ಯ ಎಂದು ಅಭಿಪ್ರಾಯ ಪಟ್ಟಿರುವ ಮಂಜೇಗೌಡರು, ಡಾ. ಸಿ.ಎನ್. ಮಂಜುನಾಥ್ ಅವರನ್ನು ಇದೇ ವೇಳೆ ಹೃದಯಪೂರ್ವಕವಾಗಿ ಅಭಿನಂದಿಸುವುದಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.23ರಂದು ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ವಾರ್ಷಿಕ ಸಭೆ

ಮೈಸೂರು, ಜು.18– ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘದ ವಾರ್ಷಿಕ ಮಹಾಸಭೆ ಜು.23ರಂದು ಬೆಳಗ್ಗೆ 10 ಗಂಟೆಗೆ ಮೈಸೂರಿನ ಲಲಿತ ಮಹಲ್ ರಸ್ತೆಯಲ್ಲಿರುವ ಪೊಲೀಸ್ ಭವನದಲ್ಲಿ ಸಂಘದ ಅಧ್ಯಕ್ಷ ಎಂ.ಸಿ.ಮರಿಸ್ವಾಮಿ ಅಧ್ಯಕ್ಷತೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜೆ.ಚಾಮಯ್ಯ ತಿಳಿಸಿದ್ದಾರೆ.

ಮೈಸೂರಲ್ಲಿ ಪ್ಲಾಸ್ಟಿಕ್ ವಿರುದ್ಧ ತೀವ್ರ ಕಾರ್ಯಾಚರಣೆ: 2.80 ಲಕ್ಷ ದಂಡ

ಪ್ಲಾಸ್ಟಿಕ್ ಬಳಸುವವರಿಗೆ 'ದಂಡ'ದ ಬರೆ

ಮೈಸೂರು, ಜು.18(ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ಏಕಬಳಕೆ ಪ್ಲಾಸ್ಟಿಕ್ ವಿರುದ್ಧ ಇಂದಿನಿಂದ ತೀವ್ರ ಕಾರ್ಯಾಚರಣೆ ಆರಂಭಿಸಿದ್ದು, ಮೊದಲ ದಿನವೇ ಕ್ವಿಂಟಾಲ್‌ಗೂ ಹೆಚ್ಚು ಪ್ಲಾಸ್ಟಿಕ್ ವಶಪಡಿಸಿಕೊಂಡು 2.80 ಲಕ್ಷ ರೂ. ದಂಡ ವಿಧಿಸಲಾಗಿದೆ.

ನಗರ ಪಾಲಿಕೆ ಹೆಚ್ಚುವರಿ ಆಯುಕ್ತೆ (ಎಡಿಸಿ) ರೂಪಾ ಅವರ ನೇತೃತ್ವದಲ್ಲಿ ಆರೋಗ್ಯ ವಿಭಾಗದ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೋಮವಾರ ದಿನವಿಡೀ ಸಂತೆಪೇಟೆ, ಎಪಿಎಂಸಿ ಸೇರಿದಂತೆ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಸಿದರು. ಇಂದು ಪ್ಲಾಸ್ಟಿಕ್ ವಿತರಕರ (ಡಿಸ್ಟ್ರಿಬ್ಯೂಟರ್ಸ್) ಮಳಿಗೆ ಮೇಲೆ ದಾಳಿ ನಡೆಸಲಾಗಿದ್ದು, ಅವರು ಸಂಗ್ರಹಿಸಿದ್ದ 1015 ಕೆಜಿ ಏಕಬಳಕೆ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಗಿದೆ.

ಅಲ್ಲದೆ ವಶಕ್ಕೆ ಪಡೆದ ಪ್ಲಾಸ್ಟಿಕ್ ಪ್ರಮಾಣದ ಆಧಾರದಲ್ಲಿ ವಿತರಕರಾದ ಜಿತಿನ್ ರಾಮ್‌ಗೆ 1 ಲಕ್ಷ ರೂ., ದೀಪಕ್, ದಾಲರಾಮ್ ಹಾಗೂ ಶೆಟ್ಟಿ ಅವರಿಗೆ ತಲಾ 50 ಸಾವಿರ ರೂ., ಭರತ್ 20 ಸಾವಿರ ರೂ. ಹಾಗೂ ಕಲ್ಲೂರ್ ರಾಮ್ ಅವರಿಗೆ 10 ಸಾವಿರ ರೂ. ಸೇರಿ ಒಟ್ಟು 2.80 ಲಕ್ಷ ರೂ. ದಂಡ ವಿಧಿಸಿದ್ದಾರೆ. ಇದೇ ವೇಳೆ ಪ್ಲಾಸ್ಟಿಕ್ ಕವರ್ ಬಳಕೆ ಮಾಡುತ್ತಿದ್ದ ಬೀದಿ ಬದಿ ವ್ಯಾಪಾರಿಗಳಿಗೂ ಇನ್ನು ಮುಂದೆ ಬಳಸದಂತೆ ಎಚ್ಚರಿಕೆ ನೀಡಲಾಗಿದೆ.



ಯಂತ್ರೋಪಕರಣದ ಮೂಲಕ ಪ್ಲಾಸ್ಟಿಕ್ ಅನ್ನು ಚೂರು ಚೂರು ಮಾಡುತ್ತಿರುವುದು.

ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಆದೇಶ ಹಾಗೂ ಕರ್ನಾಟಕ ರಾಜ್ಯ ಅಧಿಸೂಚನೆಯಂತೆ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳು–2016(ತಿದ್ದುಪಡಿ)ರ ಪ್ರಕಾರ ಪಾಲಿಸ್ಟೀರೀನ್, ವಿಸ್ತೃತ ಪಾಲಿಸ್ಟೀರಿನ್ ಸೇರಿದಂತೆ ಏಕ ಬಳಕೆ ಪ್ಲಾಸ್ಟಿಕ್(ಸಿಂಗಲ್ ಯೂಸ್ ಪ್ಲಾಸ್ಟಿಕ್) ತಯಾರಿಕೆ, ಆಮದು, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ಜು.1ರಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದ್ದು, ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಇಂದಿನಿಂದ ಪರಿಣಾಮಕಾರಿಯಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇಂದು ಸಂಗ್ರಹವಾದ ಪ್ಲಾಸ್ಟಿಕ್ ಅನ್ನು ಯಂತ್ರದ ಮೂಲಕ ಚೂರು ಚೂರು ಮಾಡಿ, ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗಿದೆ ಎಂದು ಎಡಿಸಿ ರೂಪಾ ತಿಳಿಸಿದ್ದಾರೆ.

ನಗರದೆಲ್ಲೆಡೆ ದಾಳಿ: ನಗರದ ಎಲ್ಲಾ ವಾರ್ಡ್‌ಗಳ ವಾಣಿಜ್ಯ ಪ್ರದೇಶಗಳಲ್ಲಿ ನಾಳೆ(ಜು.19)ಯಿಂದ ಪ್ಲಾಸ್ಟಿಕ್ ವಿರುದ್ಧದ ಕಾರ್ಯಾಚರಣೆ ನಡೆಯಲಿದೆ. ಮೊದಲ ಹಂತದಲ್ಲಿ ಪ್ಲಾಸ್ಟಿಕ್ ಆಮದು, ಸಂಗ್ರಹಣೆ ಹಾಗೂ ವಿತರಣೆ ಮಾಡುವ ಸ್ಥಳಗಳಲ್ಲಿ ದಾಳಿ ನಡೆಸಿ, ಪ್ಲಾಸ್ಟಿಕ್ ವಸ್ತುಗಳ ವಶಪಡಿಸಿಕೊಳ್ಳುವ ಮೂಲಕ ಅಂಗಡಿಗಳು, ವ್ಯಾಪಾರಿಗಳಿಗೆ ವಿತರಣೆಯಾಗುವುದನ್ನು ತಡೆಯಲಾಗುವುದು. ನಂತರದಲ್ಲಿ ಹಿಂದೆ ವಿತರಣೆಯಾಗಿದ್ದನ್ನು ಸಂಗ್ರಹಿಸಿ ಬಳಕೆ ಮಾಡುವ ಪ್ಲಾಸ್ಟಿಕ್ ಅನ್ನು ವಶಪಡಿಸಿಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

ಈ ಉತ್ಪನ್ನಗಳು ಬೇಡ: ಪ್ಲಾಸ್ಟಿಕ್‌ನಿಂದ ತಯಾರಿಸಿದ ಬ್ಯಾಗ್, ಭಿತ್ತಿಪತ್ರ, ತೋರಣ, ಫ್ಲೆಕ್ಸ್, ಬಾವುಟ, ತಟ್ಟೆ, ಲೋಟ, ಚಮಚ, ಊಟದ ಮೇಜಿನ ಮೇಲೆ ಹರಡುವ ಹಾಳೆ, ಥರ್ಮೋಕೋಲ್‌ನಿಂದ ತಯಾರಾದ ವಸ್ತುಗಳ, ಪ್ಲಾಸ್ಟಿಕ್ ಸ್ಟಿಕ್ ಇರುವ ಇಯರ್ ಬಡ್ಸ್, ಬಲೂನ್, ಕ್ಯಾಂಡಿ, ಸ್ವೀಟ್ ಬಾಕ್ಸ್ ಪ್ಯಾಕಿಂಗ್‌ಗೆ ಹಾಳೆ, ಸಿಗರೇಟ್ ಪ್ಯಾಕಿಂಗ್‌ನಲ್ಲಿರುವ ಪ್ಲಾಸ್ಟಿಕ್ ಸೇರಿದಂತೆ ಎಲ್ಲಿಯೂ ಸಿಂಗಲ್ ಯೂಸ್ ಪ್ಲಾಸ್ಟಿಕ್ ಬಳಸುವಂತಿಲ್ಲ.



ಸೋಮವಾರ ವಿವಿಧೆಡೆ ದಾಳಿ ನಡೆಸಿ ಪ್ಲಾಸ್ಟಿಕ್ ವಶಪಡಿಸಿಕೊಳ್ಳಲಾಯಿತು.

ಪ್ಲಾಸ್ಟಿಕ್‌ನಲ್ಲಿ ಕಸ ಹಾಕಿದರೂ ದಂಡ

ಪ್ಲಾಸ್ಟಿಕ್ ವಿರುದ್ಧದ ಕಾರ್ಯಾಚರಣೆ ನಿರಂತರವಾಗಿ ಮುಂದುವರೆಯಲಿದೆ. 3ನೇ ಹಂತದಲ್ಲಿ ವಸತಿ ಪ್ರದೇಶಗಳಲ್ಲೂ ಕಾರ್ಯಾಚರಣೆ ನಡೆಸಲಾಗುವುದು. ಮನೆ ಮನೆ ಕಸ ಸಂಗ್ರಹಿಸುವ ಆಟೋಗಳಿಗೆ ಯಾರಾದರೂ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ಕಸ ಹಾಕಿದರೆ ಅಂತಹವರಿಗೂ ದಂಡ ವಿಧಿಸಲಾಗುವುದು. ಪರಿಸರ ಸಂರಕ್ಷಣೆ ಹೊಣೆ ಪ್ರತಿಯೊಬ್ಬರ ಮೇಲೂ ಇರುವುದರಿಂದ ಎಲ್ಲರೂ ಕೈಜೋಡಿಸಬೇಕು.

- **ರೂಪಾ,** ಎಡಿಸಿ ಮೈಸೂರು ಮಹಾನಗರ ಪಾಲಿಕೆ

ಮೂರನೇ ಪುಟದಿಂದ

ರಾಜ್ಯದಲ್ಲಿ ಭಿಕ್ಷಾಟನೆ ನಿಷಿದ್ಧ

ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಲಾಗುವುದು ಎಂದರು. ಭಿಕ್ಷಾಟನೆಯಲ್ಲಿ ತೊಡಗಿದವರನ್ನು ರಕ್ಷಿಸಿ ಅವರಿಗೆ ಪುನರ್ವಸತಿ ಕಲ್ಪಿಸುವ ಸಂಬಂಧ ಹಾಗೂ ಈ ಚಟುವಟಿಕೆಯಲ್ಲಿ ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಇಲಾಖೆ, ಕಾರ್ಮಿಕ ಇಲಾಖೆಗಳ ಪಾತ್ರ ಹಾಗೂ ಸಹಕಾರದ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ಮಾಡಲಾಗಿದೆ. ಭಿಕ್ಷಾಟನೆ ನಿರ್ಮೂಲನೆಗೆ ಸಂಬಂಧಿಸಿದ ಇಲಾಖೆಗಳು ಸಂಪೂರ್ಣವಾಗಿ ಸಹಕಾರ ನೀಡಲಿವೆ ಎಂದರು. ಇಲಾಖೆ ಅಧಿಕಾರಿಗಳೊಂದಿಗೆ ಈಗಾಗಲೇ ಐದು ಬಾರಿ ಈ ಕುರಿತು ಚರ್ಚೆ ನಡೆಸಿದ್ದು, ಭಿಕ್ಷಾಟನೆ ವ್ಯಾಪಕವಾಗಿರುವುದನ್ನು ಗುರುತಿಸಲಾಗಿದೆ. ಈಗಾಗಲೇ ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಭಿಕ್ಷಾಟನೆಯಲ್ಲಿ ತೊಡಗಿದ್ದ 101 ಮಕ್ಕಳನ್ನು ವಶಕ್ಕೆ ಪಡೆದಿದ್ದು ಅವರಿಗೆ ಪುನರ್ವಸತಿ ಕಲ್ಪಿಸಲಾಗಿದೆ. ಅಲ್ಲದೆ ಕಾನೂನು ಸೇವಾ ಪ್ರಾಧಿಕಾರದಿಂದ 720 ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವ ಬಗ್ಗೆ ವರದಿ ನೀಡಿದ್ದಾರೆ. ಈ ಎಲ್ಲ ಮಾಹಿತಿಯನ್ನಾಧರಿಸಿ ಸೂಕ್ತ ಕ್ರಮ ವಹಿಸಲಾಗುವುದು ಎಂದು ಸಚಿವರು ತಿಳಿಸಿದರು. ಭಿಕ್ಷಾಟನೆ ವ್ಯಾಪಕವಾಗಿರುವುದನ್ನು ಗಮನಿಸಲಾಗಿದ್ದು, ಭಿಕ್ಷಾಟನೆ ನಿಯಂತ್ರಣಕ್ಕೆ ನಿರ್ದಾಕ್ಷಿಣ್ಯವಾಗಿ ಕ್ರಮಗಳನ್ನು ಕೈಗೊಳ್ಳಲಾಗುವುದು. ಈಗಾಗಲೇ ಬೆಂಗಳೂರಿನ ಎಂಟು ಪೊಲೀಸ್ ವಿಭಾಗಗಳಲ್ಲಿ ತಂಡಗಳನ್ನು ರಚಿಸಿ ಈ ಬಗ್ಗೆ ಕಾರ್ಯಯೋಜನೆಯನ್ನು ಸಿದ್ಧಪಡಿಸಲಾಗಿದೆ. ಮಕ್ಕಳನ್ನು ಭಿಕ್ಷಾಟನೆಗಾಗಿ ಬೀದಿಗೆ ಬಿಡುವವರ ವಿರುದ್ಧವೂ ಕೇಸು ದಾಖಲಿಸಲಾಗುವುದು ಎಂದರು.

ಅಲ್ಲದೆ ವಶಕ್ಕೆ ಪಡೆದ ಮಕ್ಕಳು ಹಾಗೂ ತಾಯಿಯರಿಗೆ ಪುನರ್ವಸತಿ ಕಲ್ಪಿಸಲು ಇಲಾಖೆಯಿಂದ ಪ್ರತ್ಯೇಕವಾಗಿ ಕಟ್ಟಡವೊಂದನ್ನು ವ್ಯವಸ್ಥೆ ಮಾಡಲಾಗುವುದು. ಇದಕ್ಕಾಗಿ ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ ಎಂದರು. ಮಕ್ಕಳ ರಕ್ಷಣಾ ನಿರ್ದೇಶನಾಲಯದಿಂದ ಈಗಾಗಲೇ 'ಈ ಗುರುತು' ಎಂಬ ಮೊಬೈಲ್ ಆ್ಯಪ್ ಅನ್ನು ಬಿಡುಗಡೆ ಮಾಡಿದ್ದು ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವ ಬಗ್ಗೆ ಕಂಡುಬಂದಲ್ಲಿ ಸಾರ್ವಜನಿಕರು ತಕ್ಷಣ 1098ಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದರು.

ದಸರಾ ಉನ್ನತ ಸಮಿತಿ ಸಭೆ

ಅಂತಿಮವಾಗಿ ತೀರ್ಮಾನ ಕೈಗೊಳ್ಳಲಾಗುತ್ತದೆ. ಅರಣ್ಯಾಧಿಕಾರಿಗಳು ಸಿದ್ಧಪಡಿಸಿರುವ 20 ಆನೆಗಳ ಪಟ್ಟಿಯಲ್ಲಿ 14–15 ಆನೆಗಳ ಆಯ್ಕೆಯನ್ನು ಸಭೆಯಲ್ಲಿ ಅಂತಿಮಗೊಳಿಸುವುದು. ದಸರಾದ ಮೊದಲ ಕಾರ್ಯಕ್ರಮವಾದ ಗಜಪಯಣ, ದೀಪಾಲಂಕಾರ, ಸಾಂಸ್ಕೃತಿಕ ಕಾರ್ಯಕ್ರಮಗಳು, ಜಂಬೂಸವಾರಿ ಸೇರಿದಂತೆ ಎಲ್ಲಾ ಕಾರ್ಯಕ್ರಮಗಳು ಹಾಗೂ ಅಗತ್ಯ ಅನುದಾನ ಸಂಬಂಧ ಚರ್ಚೆ ನಡೆಯಲಿದೆ. ದಸರೆಗೆ ಇನ್ನು 2 ತಿಂಗಳಷ್ಟೇ ಬಾಕಿ ಇದ್ದು, ಸೆ.26ರಿಂದ ನವರಾತ್ರಿ ಆರಂಭಗೊಂಡು ಅ.5ಕ್ಕೆ ಜಂಬೂಸವಾರಿ ಮೂಲಕ ಸಂಪನ್ನಗೊಳ್ಳಲಿದೆ.

ನಾಳೆ ಕೆಆರ್‌ಎಸ್, ಕಬಿನಿಗೆ ಸಿಎಂ ಬಾಗಿನ

ಬೆಳಗ್ಗೆ 9.20 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಹೆಲಿಕಾಪ್ಟರ್‌ನಲ್ಲಿ ಆಗಮಿಸುವರು. ಅಲ್ಲಿಂದ ಕಾರಿನಲ್ಲಿ ಚಾಮುಂಡಿಬೆಟ್ಟಕ್ಕೆ ಆಗಮಿಸುವ ಬೊಮ್ಮಾಯಿ ಅವರು, ಬೆಳಗ್ಗೆ 9.45 ಗಂಟೆಗೆ ನಾಡದೇವತೆ ಶ್ರೀ ಚಾಮುಂಡೇಶ್ವರಿ ದೇವಿಯ ವರ್ಧಂತಿ ಉತ್ಸವದ ಅಂಗವಾಗಿ ತಾಯಿಯ ದರ್ಶನ ಪಡೆಯುವರು.

ಅಲ್ಲಿಂದ 10.35 ಗಂಟೆಗೆ ವಿಮಾನ ನಿಲ್ದಾಣಕ್ಕೆ ಹಿಂದಿರುಗಿ ಹೆಲಿಕಾಪ್ಟರ್ ಮೂಲಕ ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕು ಬೀಚನಹಳ್ಳಿ ಹೆಲಿಪ್ಯಾಡ್‌ಗೆ ತೆರಳುವ ಮುಖ್ಯಮಂತ್ರಿಗಳು, ಕಬಿನಿ ಜಲಾಶಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಜಲಸಂಪನ್ಮೂಲ ಸಚಿವರು, ಸ್ಥಳೀಯ ಸಂಸದರು, ಶಾಸಕರು ಹಾಗೂ ಜನಪ್ರತಿನಿಧಿಗಳೊಂದಿಗೆ ಬಾಗಿನ ಸಮರ್ಪಿಸುವರು. ನಂತರ ಹೆಲಿಕಾಪ್ಟರ್‌ನಲ್ಲಿ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್‌ನ ಕೆಇಆರ್‌ಎಸ್ ಹೆಲಿಪ್ಯಾಡ್‌ಗೆ ತೆರಳಿ ಮಧ್ಯಾಹ್ನ 12.10ಕ್ಕೆ ಕೃಷ್ಣರಾಜಸಾಗರ ಜಲಾಶಯಕ್ಕೆ ಬಾಗಿನ ಸಮರ್ಪಿಸುವ ಮುಖ್ಯಮಂತ್ರಿಗಳು, ನಂತರ ಕಾವೇರಿ ಮಾತೆಯ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸುವರು. ಅಲ್ಲಿನ ಹೆಲಿಪ್ಯಾಡ್‌ನಿಂದ ಹೆಲಿಕಾಪ್ಟರ್ ಮೂಲಕ ಮಧ್ಯಾಹ್ನ 1.20ಕ್ಕೆ ಹೊರಡಲಿರುವ ಅವರು ಮಧ್ಯಾಹ್ನ 2.10ಕ್ಕೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣ ತಲುಪುವರು ಎಂದು ಪ್ರಕಟಣೆ ತಿಳಿಸಿದೆ.

ನಂದಿನಿ ಉತ್ಪನ್ನಗಳ ದರ ಅಲ್ಪ ಇಳಿಕೆ

ಇದರಿಂದ, ಮೂಲ ಹಿಂದಿನ ದರಕ್ಕಿಂತ 50 ಪೈಸೆಯಷ್ಟು ಮಾತ್ರ ಹೆಚ್ಚಿಸಿದಂತಾಗಿದೆ. 200 ಮಿ.ಲೀ. ಸ್ಯಾಚೆಯ ಮಜ್ಜಿಗೆ ದರವು 7ರಿಂದ 8ರೂ. ಹೆಚ್ಚಿಸಲಾಗಿತ್ತು. ಪರಿಷ್ಕೃತ ದರಗಳ ಅನ್ವಯ 7.50ಕ್ಕೆ ನಿಗದಿಪಡಿಸಲಾಗಿದೆ. ಹಾಗೇ, 200 ಮಿ.ಲೀ. ಸ್ಯಾಚೆಯ ಲಸ್ಸಿ ದರವನ್ನು 10ರಿಂದ 11ಕ್ಕೆ ಹೆಚ್ಚಿಸಲಾಗಿತ್ತು. ಈಗ, ಹೊಸ ದರಗಳ ಅನ್ವಯ 10.50ರೂ.ಗೆ ನಿಗದಿಪಡಿಸಲಾಗಿದೆ. ಗ್ರಾಹಕರ ಹಿತದೃಷ್ಟಿಯಿಂದ ಇಂದಿನಿಂದ(ಜು.19) ಜಾರಿಗೆ ಬರುವಂತೆ 'ನಂದಿನಿ' ಮೊಸರು, ಮಜ್ಜಿಗೆ ಮತ್ತು ಲಸ್ಸಿ ಪೊಟ್ಟಣಗಳ ಮಾರಾಟ ದರಗಳನ್ನು ಮತ್ತೊಮ್ಮೆ ಮರುಪರಿಷ್ಕರಿಸಲಾಗಿದೆ. ಅಲ್ಲದೆ, ರವಿವಾರ ಈ ಉತ್ಪನ್ನಗಳ ದರಗಳನ್ನು 1ರಿಂದ 3ರಷ್ಟು ಹೆಚ್ಚಿಸಲಾಗಿತ್ತು. ಗ್ರಾಹಕರಿಂದ ಬೆಲೆ ಏರಿಕೆಗೆ ಅಸಮಾಧಾನ ವ್ಯಕ್ತವಾಗಿದ್ದರಿಂದ ಕೆಎಂಎಫ್ ಈ ಕ್ರಮ ಕೈಗೊಂಡಿದೆ.

ಸೇವಾವಧಿ ಒಂದು ವರ್ಷ ವಿಸ್ತರಣೆ

ಬಸವರಾಜ ಬೊಮ್ಮಾಯಿ ಕರೆ ಮಾಡಿ ಡಾ.ಸಿ.ಎನ್.ಮಂಜುನಾಥ್ ಅವರಿಗೆ ತಿಳಿಸಿ ಶುಭ ಕೋರಿದರು ಎಂದು ಮೂಲಗಳು ತಿಳಿಸಿವೆ. ಡಾ.ಮಂಜುನಾಥ್ ಅವರ ಸೇವೆಯನ್ನು ವಿಸ್ತರಿಸಬೇಕು ಎಂದು ಜಯದೇವ ಸಂಸ್ಥೆಯ ವೈದ್ಯರು ಹಾಗೂ ಸಿಬ್ಬಂದಿ, ಮುಖ್ಯಮಂತ್ರಿ ಗಳಿಗೆ ಪತ್ರ ಬರೆದಿದ್ದರು. ಅಲ್ಲದೇ ರಾಷ್ಟ್ರೀಯ ವೈದ್ಯಕೀಯ ಪರಿಷತ್ (ನ್ಯಾಷನಲ್ ಮೆಡಿಕಲ್ ಕೌನ್ಸಿಲ್) ಪ್ರಕಾರ ಯಾವುದೇ ಸಂಸ್ಥೆ ಮುಖ್ಯಸ್ಥರು 70 ವರ್ಷದವರೆಗೆ ಸೇವೆಯಲ್ಲಿ ಮುಂದುವರೆಯಬಹುದಾಗಿದ್ದು, ಡಾ.ಮಂಜುನಾಥ್ ಅವರಿಗೆ 65 ವರ್ಷ ವಯಸ್ಸಾಗಿದ್ದು, ಅವರ ನಾಯಕತ್ವ ಗುಣ ಪರಿಗಣಿಸಿ ಇನ್ನಷ್ಟು ವರ್ಷ ಅವರ ಸೇವೆಯನ್ನು ವಿಸ್ತರಿಸಬೇಕು ಎಂದು ಮನವಿ ಮಾಡಿದ್ದರು. ಜೊತೆಗೆ ನಾಳೆ (ಮಂಗಳವಾರ) ಒಂದು ವೇಳೆ ಸೇವೆ ವಿಸ್ತರಣೆಯಾಗದೇ ಡಾ.ಮಂಜುನಾಥ್ ನಿವೃತ್ತಿ ಹೊಂದಿದ್ದೆ ಆದಲ್ಲಿ ರೋಗಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಪ್ರತಿಭಟನೆ ನಡೆಸುವುದಾಗಿಯೂ ಎಚ್ಚರಿಕೆ ನೀಡಿದ್ದರು. ಇನ್ನು ರಾಜ್ಯಾದ್ಯಂತ ಡಾ.ಮಂಜುನಾಥ್ ಅವರ ಸೇವಾ ಅವಧಿ ವಿಸ್ತರಣೆಗೆ ಆಗ್ರಹಿಸಿ ಸಾರ್ವಜನಿಕರು ಆಗ್ರಹಿಸಿದ್ದರು. ಹಲವೆಡೆ ಪ್ರತಿಭಟನೆಗಳು ನಡೆದಿದ್ದವು.

ಶೇ.99.18 ಮತದಾನ

ಮಿಜೋರಾಂ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಶೇ.100ರಷ್ಟು ಮತದಾನ ನಡೆದಿದೆ. ದೆಹಲಿಯಲ್ಲಿ ಮೊದಲಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಮತದಾನ ಮಾಡಿದರು. ನಂತರ ಸ್ಪೀಕರ್ ಓಂ ಬಿರ್ಲಾ, ಗೃಹ ಸಚಿವ ಅಮಿತ್ ಶಾ, ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ಎಲ್ಲಾ ಪಕ್ಷಗಳ ಸಂಸದರು ಮತದಾನ ಮಾಡಿದರು.

ರಾಷ್ಟ್ರಪತಿ ಚುನಾವಣೆಯಲ್ಲಿ 770 ಸಂಸದರು ಮತ್ತು 4033 ಶಾಸಕರಿಗೆ ಮತ ಚಲಾಯಿಸುವ ಹಕ್ಕನ್ನು ನೀಡಲಾಗಿತ್ತು. ಎನ್‌ಡಿಎ ಅಭ್ಯರ್ಥಿಯಾಗಿ ದ್ರೌಪದಿ ಮುರ್ಮು ಮತ್ತು ವಿಪಕ್ಷಗಳ ಅಭ್ಯರ್ಥಿಯಾಗಿ ಯಶವಂತ್ ಸಿನ್ಹಾ ಸ್ಪರ್ಧಿಸಿದ್ದರು. ಈ ಚುನಾವಣೆಯಲ್ಲಿ ದ್ರೌಪದಿ ಮುರ್ಮು ಜಯಗಳಿಸುವುದು ಬಹುತೇಕ ಖಚಿತ ಎಂಬ ಮಾತುಗಳು ಕೇಳಿ ಬಂದಿವೆ. ಜು.21ರಂದು ಮತದಾನ ಎಣಿಕೆ ನಡೆದು ಫಲಿತಾಂಶ ಹೊರ ಬೀಳಲಿದ್ದು, ಜು.25ರಂದು ನೂತನ ರಾಷ್ಟ್ರಪತಿ ಪದಗ್ರಹಣ ಮಾಡಲಿದ್ದಾರೆ.

ವೀಲ್‌ಚೇರ್‌ನಲ್ಲಿ ಬಂದು ಮತ ಚಲಾಯಿಸಿದ ದೇವೇಗೌಡರು, ಡಾ.ಮನಮೋಹನ್ ಸಿಂಗ್





ನವದೆಹಲಿ: ಅನಾರೋಗ್ಯದ ನಡುವೆಯೂ ವೀಲ್‌ಚೇರ್‌ನಲ್ಲಿ ಬಂದು ಮತ ಚಲಾಯಿಸುವ ಮೂಲಕ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡ ಮತ್ತು ಡಾ.ಮನಮೋಹನ್ ಸಿಂಗ್ ಅವರು ತಮ್ಮ ಪ್ರಜಾಸತಾತ್ಮಕ ಜವಾಬ್ದಾರಿ ನಿರ್ವಹಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾದರು.

ಇದೇ ಮೊದಲ ಬಾರಿಗೆ ಸಾರ್ವಜನಿಕವಾಗಿ ವೀಲ್‌ಚೇರ್‌ನಲ್ಲಿ ಕಾಣಿಸಿಕೊಂಡ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಬೆಂಗಳೂರಿನ ವಿಧಾನಸೌಧದಲ್ಲಿ ಸ್ಥಾಪಿಸಲಾಗಿದ್ದ ಮತಗಟ್ಟೆಯಲ್ಲಿ ಮತದಾನ ಮಾಡಿದರು. ಕಾಲು ನೋವಿನ ಕಾರಣ ಗೌಡರು ವೀಲ್‌ಚೇರ್‌ನಲ್ಲಿ ಆಗಮಿಸಿದರು ಎಂದು ಹೇಳಲಾಗಿದೆ.

89 ವರ್ಷ ವಯೋಮಾನದ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರು ಕೂಡ ವೀಲ್‌ಚೇರ್‌ನಲ್ಲಿ ಬಂದು ಮತದಾನ ಮಾಡಿದರು. ಮತದಾನದ ಮೊದಲ ಗಂಟೆಯಲ್ಲೇ ಮನಮೋಹನ್ ಸಿಂಗ್ ಮತ್ತು ಪ್ರಧಾನಿ ಮೋದಿ ಮತ ಚಲಾಯಿಸಿ ಗಮನ ಸೆಳೆದರು. ಅನಾರೋಗ್ಯದಿಂದಿರುವ ಮನಮೋಹನ್‌ಸಿಂಗ್ ಅವರಿಗೆ ಮತದಾನ ಮಾಡಲು ನಾಲ್ವರು ಅಧಿಕಾರಿಗಳು ಸಹಕಾರ ನೀಡಿದರು. ಕೆಲ ವರ್ಷಗಳಿಂದ ಸಾರ್ವಜನಿಕವಾಗಿ ಕಾಣಿಸಿಕೊಳ್ಳದ ಸಿಂಗ್, ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸುವ ಸಲುವಾಗಿ ಇಂದು ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದಾರೆ. ಆರೋಗ್ಯ ಹದಗೆಟ್ಟಿದ್ದರೂ, ಪ್ರಜಾಸತಾತ್ಮಕ ಜವಾಬ್ದಾರಿ ಪೂರೈಸಲು ವೀಲ್‌ಚೇರ್‌ನಲ್ಲಿ ಬಂದ ಮನಮೋಹನ್ ಸಿಂಗ್ ನಮಗೆಲ್ಲಾ ಸ್ಫೂರ್ತಿ ಅವರಿಗೆ ದೇವರು ಉತ್ತಮ ಆರೋಗ್ಯ ಮತ್ತು ದೀರ್ಘಾಯುಷ್ಯ ನೀಡಲಿ ಎಂದು ಕಾಂಗ್ರೆಸ್ ಮುಖಂಡ ಬಿ.ವಿ.ಶ್ರೀನಿವಾಸ್ ಟ್ವೀಟ್ ಮಾಡಿದ್ದಾರೆ.

ಮೈಸೂರಲ್ಲಿ ಬೂಸ್ಟರ್ ಡೋಸ್ ಅಭಿಯಾನಕ್ಕೆ ಚಾಲನೆ

75 ದಿನಗಳ ವಿಶೇಷ ಅಭಿಯಾನಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಚಾಲನೆ

ಮೈಸೂರು,ಜು.18(ಎಂಟಿವೈ)– ದೇಶಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷ ಸಂದ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲೆಯಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಉಚಿತವಾಗಿ ಬೂಸ್ಟರ್ ಡೋಸ್ ಹಾಕುವ 75 ದಿನಗಳ ವಿಶೇಷ ಅಭಿಯಾನಕ್ಕೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಚಾಲನೆ ನೀಡಿದರು.

ಮೈಸೂರಿನ ದಾಸಪ್ಪ ವೃತ್ತದ ಬಳಿಯಿರುವ ವಾರ್ತಾ ಇಲಾಖೆಯ ಕಚೇರಿ ಆವರಣದಲ್ಲಿ ಸೋಮವಾರ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಿರ್ದೇಶನದ ಮೇರೆಗೆ 18 ವರ್ಷ ಮೇಲ್ಪಟ್ಟವರಿಗೆ ಉಚಿತ ಬೂಸ್ಟರ್ ಡೋಸ್ ನೀಡುವ ಅಭಿಯಾನವನ್ನು ಮೈಸೂರು ಜಿಲ್ಲೆಯಲ್ಲಿ ಆರಂಭಿಸಲಾಗಿದೆ ಎಂದರು.

ನಾಡಹಬ್ಬ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಲಿದೆ. ಜನಸಂದಣಿ ಹೆಚ್ಚಾದ ವೇಳೆ ಸಾಂಕ್ರಾಮಿಕ ರೋಗ ಹರಡದಂತೆ ನೋಡಿಕೊಳ್ಳುವುದು ಸವಾಲಾಗಿದೆ. ಹೊರ ಜಿಲ್ಲೆ, ಹೊರ ರಾಜ್ಯ ಮತ್ತು ವಿದೇಶಗಳಿಂದಲೂ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ನಗರಕ್ಕೆ ಬರುತ್ತಾರೆ. ಈ ವೇಳೆ ಸಾಂಕ್ರಾಮಿಕ ರೋಗ ಹರಡದಂತೆ ನೋಡಿಕೊಳ್ಳುವುದಕ್ಕಾಗಿ ಕೊರೊನಾ ಲಸಿಕೆ ಹಾಗೂ ಬೂಸ್ಟರ್ ಡೋಸ್ ಪಡೆದುಕೊಳ್ಳುವುದು ಅನಿವಾರ್ಯ ಎಂದು ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಮಾತನಾಡಿ, ಆಜಾದಿ ಕಾ ಅಮೃತ್ ಮಹೋತ್ಸವದ ಹಿನ್ನೆಲೆಯಲ್ಲಿ ಸರ್ಕಾರದ ಆದೇಶದ ಮೇರೆಗೆ ಮೈಸೂರು ಜಿಲ್ಲೆಯಲ್ಲಿ 75 ದಿನಗಳ ಕಾಲ ಬೂಸ್ಟರ್ ಡೋಸ್ ನೀಡುವ ವಿಶೇಷ ಅಭಿಯಾನ ಆರಂಭಿಸಿದ್ದೇವೆ. ಸೆ.30ರವರೆಗೂ ಈ ಅಭಿಯಾನ ಜರುಗಲಿದೆ. ಈ ಹಿಂದೆ 60 ವರ್ಷ ಮೇಲ್ಪಟ್ಟವರು, ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರಿಗೆ ಮಾತ್ರ ಬೂಸ್ಟರ್ ಡೋಸ್ ನೀಡಲಾಗುತ್ತಿತ್ತು. ಇದೀಗ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಉಚಿತವಾಗಿ ಬೂಸ್ಟರ್ ಡೋಸ್ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಪತ್ರಕರ್ತರಿಗಾಗಿ ಬೂಸ್ಟರ್ ಡೋಸ್ ಅಭಿಯಾನ: ಮೈಸೂರಿನ ವಾರ್ತಾಭವನದ ಆವರಣದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರು ಹಾಗೂ ಕುಟುಂಬದ ಸದಸ್ಯರಿಗಾಗಿ ಜಿಲ್ಲಾಡಳಿತ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಾರ್ತಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಬೂಸ್ಟರ್ ಡೋಸ್ ಅಭಿಯಾನ ಆಯೋಜಿಸಲಾಗಿತ್ತು. ಬೆಳಗ್ಗೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಡಿಹೆಚ್‌ಓ ಡಾ.ಕೆ.ಹೆಚ್. ಪ್ರಸಾದ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅಭಿಯಾನಕ್ಕೆ ಚಾಲನೆ ನೀಡಿದರು. ಈ ವೇಳೆ ಹಲವು ಮಂದಿ ಪತ್ರಕರ್ತರು ಬೂಸ್ಟರ್ ಡೋಸ್ ಪಡೆದುಕೊಂಡರು.

ಇದಕ್ಕೂ ಮುನ್ನ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ ಮಾತನಾಡಿ, ಕೋವಿಡ್ ಸೋಂಕಿನಿಂದ ಪಾರಾಗಿ ಜನರು ಎಲ್ಲೆಡೆ ನಿರ್ಭೀತಿಯಿಂದ ಓಡಾಡಬೇಕಾದರೆ ಬೂಸ್ಟರ್ ಡೋಸ್ ಪಡೆಯುವುದು ಅತ್ಯವಶ್ಯಕ. ಈಗಾಗಲೇ ಸೋಂಕು ಹರಡುವಿಕೆ ನಿಯಂತ್ರಣದಲ್ಲಿದೆ. ಸೋಂಕನ್ನು ಸಂಪೂರ್ಣವಾಗಿ ತೊಡೆದು ಹಾಕುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಶ್ರಮಿಸುತ್ತಿದ್ದು, ಮೈಸೂರು ದಸರಾ ಆರಂಭವಾಗುವುದಕ್ಕೂ ಮೊದಲು ಬೂಸ್ಟರ್ ಡೋಸ್ ಅನ್ನು ಪ್ರತಿಯೊಬ್ಬರೂ ಹಾಕಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ನಗರಪಾಲಿಕೆ ಆರೋಗ್ಯಾಧಿಕಾರಿ ಡಾ. ಡಿ.ಜಿ.ನಾಗರಾಜ್, ವಾರ್ತಾ ಇಲಾಖೆ ಸಹಾಯಕ ನಿರ್ದೇಶಕ ಹರೀಶ್, ವೈದ್ಯರಾದ ಡಾ.ಜಯಂತ್, ಡಾ.ರವಿ, ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಕಾರ್ಯದರ್ಶಿ ರಂಗಸ್ವಾಮಿ, ಖಜಾಂಚಿ ನಾಗೇಶ್ ಪಾಣತ್ತಲೆ, ರಾಜ್ಯ ಸಮಿತಿ ಸದಸ್ಯ ಬಿ. ರಾಘವೇಂದ್ರ, ಕಾರ್ಯಕಾರಿ ಸಮಿತಿ ಸದಸ್ಯರಾದ ಶಿವಮೂರ್ತಿ ಜುಪ್ತಿಮಠ, ಕೃಷ್ಣೋಜಿರಾವ್, ಬೀರೇಶ್ ಮತ್ತಿತರರು ಉಪಸ್ಥಿತರಿದ್ದರು.



'ಬೂಸ್ಟರ್ ಡೋಸ್ ವೀಕ್'

ಈ ವಾರವನ್ನು 'ಬೂಸ್ಟರ್ ಡೋಸ್ ವೀಕ್' ಎಂದು ಆಚರಿಸಲಾಗುತ್ತಿದೆ. ಮೈಸೂರು ನಗರ ವ್ಯಾಪ್ತಿಯಲ್ಲಿ 70 ಕೇಂದ್ರ ಸೇರಿದಂತೆ ಜಿಲ್ಲೆಯಲ್ಲಿ 540 ಕೇಂದ್ರಗಳಲ್ಲೂ ಬೂಸ್ಟರ್ ಡೋಸ್ ನೀಡಲಾಗುತ್ತಿದೆ. ಆರೋಗ್ಯ ಕೇಂದ್ರ, ಆರೋಗ್ಯ ಉಪಕೇಂದ್ರಗಳಲ್ಲೂ ಬೂಸ್ಟರ್ ಡೋಸ್ ನೀಡಲಾಗುತ್ತಿದೆ. ಮೈಸೂರು ಜಿಲ್ಲೆಯಲ್ಲಿ 60 ವರ್ಷ ಮೇಲ್ಪಟ್ಟ 4 ಲಕ್ಷ ಜನರಲ್ಲಿ 1.50 ಲಕ್ಷ ಮಂದಿ ಬೂಸ್ಟರ್ ಡೋಸ್ ಪಡೆದಿದ್ದು, 2.50 ಲಕ್ಷ ಹಿರಿಯ ನಾಗರಿಕರು ಇನ್ನೂ ಬೂಸ್ಟರ್ ಡೋಸ್ ಪಡೆದಿಲ್ಲ. 18ರಿಂದ 60 ವರ್ಷದೊಳಗಿನ 20 ಲಕ್ಷ ಜನರಲ್ಲಿ 10 ಲಕ್ಷ ಜನರು ಡೋಸ್ ತೆಗೆದುಕೊಂಡಿಲ್ಲ. ಈ ವಾರ ಜನರು ತಮ್ಮ ಸಮೀಪದ ಸ್ಥಳದಲ್ಲೇ ಬೂಸ್ಟರ್ ಡೋಸ್ ಸಿಗುವುದರಿಂದ ಅಭಿಯಾನದ ಸದುಪಯೋಗ ಪಡೆದುಕೊಳ್ಳಿ.

-ಡಾ.ಕೆ.ಹೆಚ್.ಪ್ರಸಾದ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ

ಹಿರಿಯ ಸಾಹಿತಿ ದೇವನೂರ ಮಹಾದೇವ ಬಗ್ಗೆ ಸಂಸದ ಪ್ರತಾಪ್ ಸಿಂಹ ಟೀಕೆ ; ದಸಂಸ ಖಂಡನೆ



ಮೈಸೂರು,ಜು.18(ಪಿಎಂ)– ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಕುರಿತು 'ಆರ್‌ಎಸ್‌ಎಸ್ ಆಳ ಮತ್ತು ಅಗಲ' ಕೃತಿ ರಚಿಸಿರುವ ಸಂಬಂಧ ದೇವನೂರ ಮಹಾದೇವ ಅವರನ್ನು ಸಂಸದ ಪ್ರತಾಪ್ ಸಿಂಹ ಟೀಕಿಸಿರುವುದನ್ನು ದಲಿತ ಸಂಘರ್ಷ ಸಮಿತಿ (ದಸಂಸ) ಖಂಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು, ಸರಳ ಸಜ್ಜನಿಕೆಯ ಹಿರಿಯ ಸಾಹಿತಿ ದೇವನೂರ ಮಹಾದೇವ ಅವರ ಬಗ್ಗೆ ಇತ್ತೀಚೆಗೆ ಪ್ರತಾಪ್ ಸಿಂಹ ಬಾಯಿಗೆ ಬಂದಂತೆ ಮಾತನಾಡಿದ್ದಾರೆ. ದೇವನೂರ ಮಹಾದೇವ ಅವರನ್ನು ಯಾವುದೋ ಪಕ್ಷದ ಆಳು ಎಂದು ಟೀಕಿಸಿದ್ದಾರೆ. 'ಲೇಖನಿ ಬಿಟ್ಟು ಮೈಕ್ ಹಿಡಿದಿದ್ದಾರೆ' ಎಂದು ವ್ಯಂಗ್ಯವಾಡಿದ್ದಾರೆ. ಆ ಮೂಲಕ ಪ್ರತಾಪ್ ಸಿಂಹ ತಮ್ಮ ನೀಚತನದ ಪರಮಾವಧಿ ಮೆರೆದಿದ್ದಾರೆ ಎಂದು ಖಂಡಿಸಿದರು.

ಆರ್‌ಎಸ್‌ಎಸ್‌ನ ಗೋಳ್ವಾಲ್ಕರ್ ಅವರ ಸಿದ್ಧಾಂತ ಪ್ರತಿಪಾದಿಸುವುದಾದರೆ ಆ ಸಂಘಟನೆ ಮುಖಂಡರೊಂದಿಗೆ ಚರ್ಚೆಗೆ ಬರಲಿ. ಇವರ ಜೊತೆಗೆ (ಪ್ರತಾಪ್ ಸಿಂಹ) ಚರ್ಚೆ ಮಾಡಬೇಕಾದ ಅಗತ್ಯವಿಲ್ಲ. ಅವರ ವಿದ್ವಾಂಸರೊಂದಿಗೆ ಬರಲಿ ಎಂದು ಸವಾಲು ಹಾಕಿದರು.

ಇವರು ಮತ್ತು ಇವರ ಕಡೆಯವರು ಭಾರತೀಯ ಪರಂಪರೆ ಎಂದು ಬಾಯಿ ಬಡಿದುಕೊಳ್ಳುತ್ತಾರೆ. ಇವರು ಹೀಗೆ ಹೇಳಿದಾಗೆಲ್ಲಾ, ಶ್ರೀರಾಮನು ಶೂದ್ರ ಶಂಬುಕನ ತಲೆ ಕಡಿದ ಪ್ರಸಂಗ, ಗುರು ಕಾಣಿಕೆ ನೆಪದಲ್ಲಿ ಏಕಲವ್ಯನ ಹೆಬ್ಬೆರಳನ್ನು ದ್ರೋಣಾಚಾರ್ಯ ಪಡೆದ ಕುತಂತ್ರ, ಜಾತೀಯತೆ, ಸತಿ ಸಹಗಮನ ಪದ್ಧತಿ, ದೇವದಾಸಿ ಪದ್ಧತಿ ಮೊದಲಾದ ಅನಿಷ್ಟ ಪದ್ಧತಿಗಳು ನೆನಪಾಗುತ್ತವೆ. ನಮಗೆ ಭಾರತೀಯ ಪರಂಪರೆ ಎಂದರೆ, ಬುದ್ಧ ನೆನಪಾಗುತ್ತಾರೆ. ನಮ್ಮದು ನಿಜವಾದ ಭಾರತೀಯತೆಯೇ ಹೊರತು ಇವರಂತೆ ಹುಸಿ ಭಾರತೀಯತೆ ಅಲ್ಲ ಎಂದು ಕಿಡಿಕಾರಿದರು.

ಚಾತುರ್ವರ್ಣ ವಿರೋಧಿಸುವವರು ಬೇರೆ ಬೇರೆ ಧರ್ಮಗಳಲ್ಲೂ ಇವರ ಪಂಥ, ಪಂಗಡಗಳ ಬಗ್ಗೆ ಮಾತನಾಡುವುದಿಲ್ಲವೇಕೆ? ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ. ಆದರೆ ಅವಿರುವುದು ಬೆರಳೆಣಿಕೆಯಷ್ಟೇ. ಆದರೆ ನಿಮ್ಮವರು 5 ಸಾವಿರಕ್ಕೂ ಹೆಚ್ಚು ಜಾತಿ ಮಾಡಿ, ಸಮಾಜ ಒಡೆದು ಹಾಕಿದ್ದು, ಇದು ನಿಮ್ಮ ಭಾರತೀಯ ಪರಂಪರೆಯೇ? ಎಂದು ಪ್ರಶ್ನಿಸಿದರು.

ಹಿಂದೂ ಧರ್ಮ ಎಂಬುದೇ ಇಲ್ಲ. ಅದೇನಿದ್ದರೂ ವೈದಿಕ ಧರ್ಮವಷ್ಟೆ. ಚಾತುರ್ವರ್ಣ ಪದ್ಧತಿ ಸಮರ್ಥಿಸಿಕೊಳ್ಳುವವರನ್ನು ಕೇಳಬಯಸುತ್ತೇವೆ. ಅದರಲ್ಲಿ ಮಾನವೀಯತೆ ಇದೆಯೇ? ಎಂದು ಪ್ರಶ್ನಿಸಿದರು.

ದಸಂಸ ಜಿಲ್ಲಾ ಸಂಚಾಲಕ ಬೆಟ್ಟಯ್ಯಕೋಟೆ ಮಾತನಾಡಿ, ಪ್ರತಾಪ್ ಸಿಂಹ ಕೋಮು ಭಾವನೆ ಕೆರಳಿಸುವುದನ್ನೇ ರೂಢಿಸಿಕೊಂಡಿದ್ದಾರೆ. ಈ ಹಿಂದಿದ್ದ ಮೈಸೂರಿನ ಯಾವುದೇ ಸಂಸದರು ಈ ರೀತಿ ವರ್ತಿಸುತ್ತಿರಲಿಲ್ಲ ಎಂದರು. ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ಜಿಲ್ಲಾ ಸಂಘಟನಾ ಸಂಚಾಲಕರಾದ ಮಲ್ಲಹಳ್ಳಿ ನಾರಾಯಣ, ಶಂಭುಲಿಂಗಸ್ವಾಮಿ ಗೋಷ್ಠಿಯಲ್ಲಿದ್ದರು.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಜು.24ರಂದು ಪಾರಂಪರಿಕ ವೇಗದ ನಡಿಗೆ ಸ್ಪರ್ಧೆ



ಮೈಸೂರು,ಜು.18(ಪಿಎಂ)– ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆಯು ವಿವಿಧ ಸಂಘ–ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಜು.24ರಂದು ಪಾರಂಪರಿಕ ವೇಗದ ನಡಿಗೆ ಸ್ಪರ್ಧೆಯನ್ನು ಏರ್ಪಡಿಸಿದೆ ಎಂದು ವೇದಿಕೆ ಪೋಷಕ ಸಿ.ಜಗದೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಡೆಕಾಥ್ಲಾನ್, ದ ಏಟ್ರಿಯಂ ಬೂಟಿಕ್ ಹೋಟೆಲ್, ಲಯನ್ ಕ್ಲಬ್ ಆಫ್ ಬೆಂಗಳೂರು ಸ್ಯಾಂಡಲ್‌ವುಡ್ ಸೆಲಬ್ರಿಟೀಸ್, ಭೂಮಿಕಾ ಭಾವೈಕ್ಯ ಬಳಗ, ಶ್ರೀ ತಲಕಾವೇರಿ ಮಹಿಳಾ ಶಿಕ್ಷಣ ಟ್ರಸ್ಟ್ ಸಹಯೋಗದಲ್ಲಿ ಈ ಸ್ಪರ್ಧೆ ಆಯೋಜಿಸಲಾಗಿದೆ ಎಂದರು.

30ರಿಂದ 60 ವರ್ಷದೊಳಗಿನ ಪುರುಷರು ಮತ್ತು ಮಹಿಳೆಯರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಒಂದೇ ವಿಭಾಗದಲ್ಲಿ ಸ್ಪರ್ಧೆ ನಡೆಯಲಿದ್ದು, ಮಹಿಳೆಯರು ಸೀರೆ ಧರಿಸಿ ನಮ್ಮ ಸಾಂಪ್ರದಾಯಿಕ ಉಡುಗೆ–ತೊಡುಗೆಯೊಂದಿಗೆ ಸ್ಪರ್ಧೆಯಲ್ಲಿ ಪಾಲ್ಗೊಳ್ಳಬೇಕು. ಪುರುಷರು ಪಂಚೆ–ಅಂಗಿ ಧರಿಸಿ ಸಂಪ್ರದಾಯಿಕ ವೇಷಭೂಷಣದಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸಬೇಕು. ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳಿಗೆ ಕ್ರಮವಾಗಿ 3 ಸಾವಿರ ರೂ., 2 ಸಾವಿರ ರೂ. ಮತ್ತು ಸಾವಿರ ರೂ. ಮೌಲ್ಯದ ಉಡುಗೊರೆಯನ್ನು ಬಹುಮಾನವಾಗಿ ನೀಡಲಾಗುವುದು. ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ನೋಂದಣಿ ಮಾಡಿಕೊಳ್ಳಬೇಕಿದ್ದು, ನೋಂದಣಿ ಉಚಿತವಾಗಿದೆ ಎಂದು ವಿವರಿಸಿದರು.

ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತದ ಬಳಿ ಅಂದು ಬೆಳಗ್ಗೆ 8.30ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ. ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿಯವರು ಸಾನ್ನಿಧ್ಯ ವಹಿಸುವರು. ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್ ಸಭಾ ಕಾರ್ಯಕ್ರಮ ಉದ್ಘಾಟಿಸುವರು. ಸಾಂಸ್ಕೃತಿಕ ಚಿಂತಕ ರಘುರಾಮ್ ವಾಜಪೇಯಿ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವವರು ಮೊ.ಸಂ. 94485 76337, 99017 08996 ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು. ವೇದಿಕೆ ಸಂಸ್ಥಾಪಕ ಅಧ್ಯಕ್ಷ ತಗಡೂರು ಗೌರಿಶಂಕರ್, ಸಾಮಾಜಿಕ ಚಿಂತಕ ಸುರೇಶ್‌ಗೋಲ್ಡ್, ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಗೋಲ್ಡ್‌ನ ಕಾರ್ಯದರ್ಶಿ ಪ್ರೇಮಾರವಿ ಮತ್ತಿತರರು ಗೋಷ್ಠಿಯಲ್ಲಿದ್ದರು.



ಸೋಮವಾರ ರಾಷ್ಟ್ರಪತಿ ಚುನಾವಣೆಯಲ್ಲಿ ಮತ ಚಲಾಯಿಸಲು ವಿಧಾನಸೌಧಕ್ಕೆ ಆಗಮಿಸಿದಾಗ ಸಂಸದ ವಿ. ಶ್ರೀನಿವಾಸ ಪ್ರಸಾದ್ ಮತ್ತು ವಿಪಕ್ಷ ನಾಯಕ ಸಿದ್ದರಾಮಯ್ಯ ಮುಖಾಮುಖಿಯಾಗಿ ಉಭಯ ಕುಶಲೋಪರಿ ನಡೆಸಿದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಜುಲೈ 18ರ ಬೆಳಗ್ಗೆ ಯದುವಂಶದ ಶ್ರೀ ಜಯಚಾಮರಾಜ ಒಡೆಯರ್ ಅವರ ಜಯಂತಿಯನ್ನು ಕುವೆಂಪುನಗರದಲ್ಲಿರುವ ವಾಸವಿ ವಿದ್ಯಾನಿಕೇತನದಲ್ಲಿ ಆಚರಿಸಲಾಯಿತು. ಇದೇ ವೇಳೆ ಜಯಚಾಮರಾಜ ಒಡೆಯರ್ ಬಗ್ಗೆ ಉಪನ್ಯಾಸ ನೀಡಿದ ಇತಿಹಾಸದ ಪ್ರಾಧ್ಯಾಪಕ ಲ.ನ.ಸ್ವಾಮಿ ಅವರನ್ನು ಗೌರವಿಸಲಾಯಿತು. ಚಿತ್ರದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕಾರ್ಯದರ್ಶಿ ಮ.ನ. ಲತಾಮೋಹನ್, ಮುಖ್ಯೋಪಾಧ್ಯಾಯರಾದ ನಿರ್ಮಲ, ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಅನಂತ್, ಮುಕ್ತಕ ಕವಿ ಮುತ್ತುಸ್ವಾಮಿ ಉಪಸ್ಥಿತರಿದ್ದಾರೆ.

ಜಯಚಾಮರಾಜ ಒಡೆಯರ್ ವಿವಿಧ ಕ್ಷೇತ್ರಗಳಿಗೆ ಆದ್ಯತೆ ನೀಡಿದ್ದರು

ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್


ಮೈಸೂರು,ಜು.18(ಎಂಟಿವೈ)– ಮೈಸೂರು ಸಂಸ್ಥಾನವನ್ನಾಳಿದ ಜಯಚಾಮರಾಜ ಒಡೆಯರ್ ಅವರು ಉತ್ತಮ ಆಡಳಿತದೊಂದಿಗೆ ಸಂಗೀತ, ಕಲೆ, ಸಾಹಿತ್ಯ ಸೇರಿದಂತೆ ಇನ್ನಿತರ ಕ್ಷೇತ್ರಗಳಿಗೂ ಆದ್ಯತೆ ನೀಡಿದ್ದರು ಎಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದರು.

ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ಜಯಚಾಮರಾಜ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸೋಮವಾರ ಜಯಚಾಮರಾಜ ಅರಸು ಎಜುಕೇಶನ್ ಟ್ರಸ್ಟ್ ಆಯೋಜಿಸಿದ್ದ ಜಯಚಾಮರಾಜ ಒಡೆಯರ್ ಅವರ 103ನೇ ಜನ್ಮ ಜಯಂತಿ ಕಾರ್ಯಕ್ರಮ ಹಾಗೂ ಜಯಚಾಮರಾಜ ಒಡೆಯರ್ ಅವರ ಪುತ್ಥಳಿ ಅನಾವರಣಗೊಳಿಸಿ ಮಾತನಾಡಿದ ಅವರು, ಜಯಚಾಮರಾಜ ಒಡೆಯರ್ ಅವರು ಕರ್ನಾಟಕ ಸಂಗೀತ, ಪಾಶ್ಚಿಮಾತ್ಯ ಸಂಗೀತದಲ್ಲಿ ಅಪಾರ ಆಸಕ್ತಿ ಹೊಂದಿದ್ದರು. ಅಲ್ಲದೆ, ವಿಭಿನ್ನ ರಾಗ ಸಂಯೋಜನೆಯನ್ನು ಮಾಡಿದ್ದರು. ಹಲವು ಗೀತೆಗಳನ್ನು ರಚಿಸಿದ್ದರು. ಅವರ ಆಡಳಿತಾವಧಿಯಲ್ಲಿ ಪಂಚವಾರ್ಷಿಕ ಯೋಜನೆ ಜಾರಿಗೊಳಿಸಿದ್ದರು. ವನ್ಯಜೀವಿಗಳ ಸಂರಕ್ಷಣೆ, ಪರಿಸರ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ತಮ್ಮ ಆಡಳಿತಾವಧಿಯಲ್ಲೇ ಕಾರ್ಯಕ್ರಮ ರೂಪಿಸಿದ್ದರು ಎಂದು ಸ್ಮರಿಸಿದರು.

ಮೈಸೂರು ರಾಜವಂಶಸ್ಥರು ಮೊದಲಿನಿಂದಲೂ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಿದ್ದರು. ಎಲ್ಲರಿಗೂ ಶಿಕ್ಷಣ ದೊರೆಯಬೇಕು ಎಂಬ ಹಂಬಲದಿಂದ 100 ವರ್ಷದ ಹಿಂದೆಯೇ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ್ದರು. 1957ರಲ್ಲಿ ಸ್ಥಾಪಿತವಾದ ಅರಸು ಶಿಕ್ಷಣ ಸಂಸ್ಥೆಯನ್ನು ಅಂದಿನಿಂದಲೂ ಮುನ್ನಡೆಸಿಕೊಂಡು ಬಂದಿದ್ದೇನೆ. ಟ್ರಸ್ಟ್ ಪದಾಧಿಕಾರಿಗಳು ಹಾಗೂ ಬೋಧಕ ವರ್ಗ ಬದ್ಧತೆಯಿಂದ ನಮ್ಮ ಶಿಕ್ಷಣ ಸಂಸ್ಥೆಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ. ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಗಿಡ, ಮರಗಳ ಸಂರಕ್ಷಣೆ ಹಾಗೂ ಅದರ ಮಹತ್ವದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ನಮ್ಮ ಶಿಕ್ಷಣ ಸಂಸ್ಥೆಯಲ್ಲೇ 3 ಸಾವಿರ ಗಿಡ ಬೆಳೆಸಿ, ಪಾಲಿಕೆ ಸೇರಿದಂತೆ ಇನ್ನಿತರ ಸಂಸ್ಥೆಗಳಿಗೆ ಕೊಡುಗೆ ನೀಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿಲೀನವಾಗಲು ಒಪ್ಪಿಗೆ ಸೂಚಿಸಿದ ಮೊಟ್ಟ ಮೊದಲ ಸಂಸ್ಥಾನ ಎಂಬ ಹೆಗ್ಗಳಿಕೆಗೆ ಮೈಸೂರು ಸಂಸ್ಥಾನ ಪಾತ್ರವಾಗಿದೆ. ಜಯಚಾಮರಾಜ ಒಡೆಯರ್ ಅವರು ಪ್ರಜಾಪ್ರಭುತ್ವದ ಪ್ರತಿನಿಧಿಯಾಗಿ ಗಮನ ಸೆಳೆದಿದ್ದಾರೆ. ಪ್ರಸ್ತುತ ಜಾರಿಯಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆಯ ಅವರ ಕನಸಿನ ಕೂಸಾಗಿದೆ. ಜನಸಮುದಾಯ ಕಷ್ಟ–ಸುಖ ಅರಿಯಲು ಗ್ರಾಮೀಣ ಪ್ರದೇಶಕ್ಕೂ ಭೇಟಿ ನೀಡಿ, ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಕಲೆ, ಸಂಸ್ಕೃತಿ ಉಳಿವಿಗೆ ಶ್ರಮಿಸಿದ ಕೆಲವೇ ರಾಜರಲ್ಲಿ ಜಯಚಾಮರಾಜ ಒಡೆಯರ್ ಒಬ್ಬರು. ನೀರಾವರಿ ಯೋಜನೆಗೆ ಆದ್ಯತೆ ನೀಡಿದ್ದರು. ಅವರ ಕಾಲದಲ್ಲೇ ನುಗು, ಹಿರಿಯೂರು ಜಲಾಶಯ ಸ್ಥಾಪಿಸಲಾಯಿತು. ಕೃಷಿಗೆ ವಿಶೇಷವಾದ ಆದ್ಯತೆ ನೀಡಿದ್ದರಿಂದ ಹಳೆ ಮೈಸೂರು ಪ್ರಾಂತ್ಯ ಕೃಷಿಯಲ್ಲಿ ಸಾಧನೆ ಮಾಡಲು ಸಾಧ್ಯವಾಯಿತು ಎಂದು ವಿವರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಮೈಸೂರು ಸಂಸ್ಥಾನದ ಆಳ್ವಿಕೆಯ ಅವಧಿಯಲ್ಲಿ ಜಯಚಾಮರಾಜ ಒಡೆಯರ್ ಅವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಅವರು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ನಾವು ಸಾಗುತ್ತಿದ್ದೇವೆ. ಅವರ ಆಶೀರ್ವಾದ ಸದಾ ನಮ್ಮ ಮೇಲಿದೆ. ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಪುತ್ಥಳಿ ನಿರ್ಮಿಸಬೇಕೆಂಬ ಹಂಬಲವಿತ್ತು ಆದರೆ ಕೋವಿಡ್–19 ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷದಿಂದ ಕಾರ್ಯಕ್ರಮ ನಡೆಸಲು ಸಾಧ್ಯವಾಗಿರಲಿಲ್ಲ. ಅದಕ್ಕಾಗಿ 103ನೇ ಜನ್ಮದಿನದ ಸಂದರ್ಭದಲ್ಲಿ ಜಯಚಾಮರಾಜ ಒಡೆಯರ್ ಅವರು ಪುತ್ಥಳಿ ಅನಾವರಣಗೊಳಿಸಿದ್ದೇವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರಾಜವಂಶಸ್ಥ ಎಂ.ಎಲ್.ವರ್ಚಸ್ ಶ್ರೀಕಂಠ ಸಿದ್ಧಲಿಂಗ ರಾಜೇ ಅರಸ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರಿನ ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿರುವ ಜಯಚಾಮರಾಜ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸೋಮವಾರ ಜಯಚಾಮರಾಜ ಅರಸು ಎಜುಕೇಶನ್ ಟ್ರಸ್ಟ್ ಆಯೋಜಿಸಿದ್ದ ಜಯಚಾಮರಾಜ ಒಡೆಯರ್ ಅವರ 103ನೇ ಜನ್ಮ ಜಯಂತಿ ಕಾರ್ಯಕ್ರಮದಲ್ಲಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಜಯಚಾಮರಾಜ ಒಡೆಯರ್ ಅವರ ಪುತ್ಥಳಿ ಅನಾವರಣಗೊಳಿಸಿ, ನಮಿಸಿದರು. ಚಿತ್ರದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ನಿವೃತ್ತ ಪ್ರಾಧ್ಯಾಪಕ ಪ್ರೊ.ಎನ್.ಎಸ್. ತಾರಾನಾಥ್ ಹಾಗೂ ಇನ್ನಿತರರನ್ನು ಕಾಣಬಹುದು.

ಕೋಮುವಾದಿ ಆಡಳಿತ ಕೊನೆಗಾಣಿಸಿ, ಕಾಂಗ್ರೆಸ್ ಅಧಿಕಾರಕ್ಕೆ ತನ್ನಿ

ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ತಿ.ನರಸೀಪುರ, ಜು.18– ಸ್ವಾತಂತ್ರ್ಯಕ್ಕೆ ವಿರುದ್ಧವಾಗಿರುವ ಕೋಮುವಾದಿ, ಜಾತಿವಾದಿ ಆಡಳಿತ ಕೊನೆಗಾಣಿಸಿ ಪ್ರಜಾಪ್ರಭುತ್ವ ಪರ ಇರುವ ಸರ್ಕಾರವನ್ನು ಅಧಿಕಾರಕ್ಕೆ ತರಬೇಕಾದದ್ದು ಪ್ರಜೆಗಳ ಜವಾಬ್ದಾರಿ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ದಾವಣಗೆರೆಯಲ್ಲಿ ಆ.3ರಂದು ನಡೆಯುವ ಮಾಜಿ ಸಿಎಂ ಸಿದ್ದರಾಮಯ್ಯನವರ ಅಮೃತ ಮಹೋತ್ಸವ ಕಾರ್ಯಕ್ರಮ ಹಾಗೂ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕೋಮುವಾದಿ ಆಡಳಿತ ಪ್ರಜಾಪ್ರಭುತ್ವ ಹಾಗೂ ಸಂವಿಧಾನಕ್ಕೆ ವಿರುದ್ಧವಾದದ್ದು. ಕಾಂಗ್ರೆಸ್‌ಗೆ ದೇಶ ಮತ್ತು ಜನತೆ ಹಿತ ಬಿಟ್ಟು ಬೇರೆ ವಿಷಯಗಳಿಲ್ಲ. ಆದರೆ ಇವೆರಡಕ್ಕೂ ವಿರುದ್ಧವಾಗಿ ದೇಶದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷದಿಂದ ದೇಶದ ಅಭಿವೃದ್ಧಿ ಕುಂಠಿತಗೊಳ್ಳುತ್ತಿದೆ. ಹಾಗಾಗಿ ಪೆಟ್ರೋಲ್ ಹಾಗೂ ಗೊಬ್ಬರದ ಬೆಲೆ ಗಗಕ್ಕೇರಿದೆ. ಜನರಿಗೆ ಯಾವುದನ್ನೂ ಕೊಂಡುಕೊಳ್ಳುವ ಶಕ್ತಿ ಇಲ್ಲದಂತಾಗಿದೆ. ಹಾಗಾಗಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿರುವ ಸರ್ಕಾರದ ಆಡಳಿತ ಅಂತ್ಯ ಅವಶ್ಯಕ ಎಂದರು.

ಜನರಿಗೆ ಸ್ವಾತಂತ್ರ್ಯವಿಲ್ಲ: ಬಿಜೆಪಿ ಆಡಳಿತದಲ್ಲಿ ಜನರಿಗೆ ಸ್ವಾತಂತ್ರ್ಯ ಇಲ್ಲದಂತಾಗಿದೆ. ಸರ್ಕಾರದ ವಿರುದ್ಧ ದನಿ ಎತ್ತಿದರೆ ಜೈಲಿಗೆ ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದೇನು ಬ್ರಿಟಿಷ್ ಸರ್ಕಾರವೋ ಅಥವಾ ಭಾರತ ಸರ್ಕಾರವೋ ಎಂಬ ಗೊಂದಲ ಮೂಡಿದೆ. ಸ್ವಾತಂತ್ರ್ಯ ಎಂದರೇನು? ಅದರ ಉದ್ದೇಶ ಏನು? ಜನರ ಬದುಕು ಹೇಗೆ? ಮಹಿಳೆಯರ ಸ್ಥಾನಮಾನವೇನು? ರೈತರ ಜೀವನ ಹೇಗೆ? ಹಿಂದುಳಿದವರು, ದಲಿತರು, ಪ.ಜಾತಿ, ಪಂಗಡದವರಿಗೆ ಸಂವಿಧಾನದಲ್ಲಿ ಕೊಟ್ಟಿರುವ ಅವಕಾಶಗಳೇನು?



ತಿ.ನರಸೀಪುರದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮಾತನಾಡಿದರು.

> **ವಿಧಾನಸಭಾ ಚುನಾವಣೆ ಹತ್ತಿರದಲ್ಲಿರುವುದರಿಂದ ಪ್ರತಿಯೊಬ್ಬರೂ ಪಕ್ಷ ಸಂಘಟನೆಗೆ ಶ್ರಮಿಸಬೇಕು. ಆಡಳಿತರೂಢ ಸರ್ಕಾರದ ವಿರುದ್ಧ ಜನಜಾಗೃತಿ ಮೂಡಿಸಲು ಹಮ್ಮಿಕೊಂಡಿರುವ ಹೋರಾಟದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಭಾಗಿಯಾಗಬೇಕು. ಕೇಂದ್ರ ಹಾಗೂ ರಾಜ್ಯದ ಬಿಜೆಪಿ ಸರ್ಕಾರ ಧರ್ಮ ಸಂಘರ್ಷದ ಮೂಲಕ ಜನರ ಸ್ವಾತಂತ್ರ್ಯಹರಣ ಮಾಡುತ್ತಿರುವ ಬಗ್ಗೆ ಜಾಗೃತಿ ಮೂಡಿಸಲು ಹಮ್ಮಿಕೊಂಡಿರುವ ಪಾದಯಾತ್ರೆ ಯಶಸ್ವಿಗೊಳಿಸಿ.**
> -**ಸುನೀಲ್ ಬೋಸ್**, ವಸತಿ ಯೋಜನೆ ಜಾಗೃತಿ ಸಮಿತಿ ಮಾಜಿ ಅಧ್ಯಕ್ಷ.

ಇವೆಲ್ಲಾ ಸರ್ಕಾರದಲ್ಲಿ ಏಕಾಗುತ್ತಿಲ್ಲ ಎಂದು ಪ್ರಶ್ನಿಸಿದ ಅವರು ಜನಜಾಗೃತಿ ಮೂಡಿಸುವ ಮೂಲಕ ಮೂಲ ಉದ್ದೇಶದ ಧಕ್ಕೆ ತಪ್ಪಿಸಬೇಕಿದೆ ಎಂದರು.

ಶೀಘ್ರ ಚುನಾವಣೆ: ಅವಧಿಗೂ ಮುಂಚೆಯೇ ಡಿಸೆಂಬರ್‌ನಲ್ಲಿ ಸಾರ್ವತ್ರಿಕ ಚುನಾವಣೆಯಾಗಬಹುದು ಎಂದ ಮಹದೇವಪ್ಪ ಈಗಿನಿಂದಲೇ ಕಾರ್ಯಕರ್ತರು ಜಾಗೃತರಾಗಬೇಕು. ಕಳೆದ ಚುನಾವಣೆಯಲ್ಲಿ 222 ಬೂತ್‌ಗಳಲ್ಲಿ ಕಾಂಗ್ರೆಸ್‌ಗೆ 55ರಲ್ಲಿ, ಜೆಡಿಎಸ್‌ಗೆ 116 ಬೂತ್‌ನಲ್ಲಿ ಮುನ್ನಡೆ ದೊರಕಿದೆ. ಪಕ್ಷಕ್ಕೆ ಬಂದ ಮತಗಳ ಜೊತೆಗೆ ಹೆಚ್ಚುವರಿಯಾಗಿ ಪ್ರತಿ ಬೂತ್‌ನಲ್ಲಿ 60 ಮತ ಬಂದರೆ ಪಕ್ಷಕ್ಕೆ ಗೆಲುವು ಕಟ್ಟಿಟ್ಟಬುತ್ತಿ. ರಾಜ್ಯದಲ್ಲಿ ಬಿಜೆಪಿಗೆ ಈ ಬಾರಿ ಒಲವಿಲ್ಲ. ಜೆಡಿಎಸ್ 25 ಸ್ಥಾನ ಪಡೆಯಬಹುದು. ಹೀಗಾಗಿ ಬಿಜೆಪಿ, ಜೆಡಿಎಸ್‌ನವರು ಮತ್ತೆ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದರು.

ಕಳೆದ ಚುನಾವಣೆಯಲ್ಲಿ ಅಭಿವೃದ್ಧಿ, ಜನರ ಬಗ್ಗೆ ಬದ್ಧತೆ ಇಲ್ಲದ ವ್ಯಕ್ತಿ ಆಯ್ಕೆ ಮಾಡಲಾಗಿದೆ. ಕ್ಷೇತ್ರದಲ್ಲಿ ನಾನೇ ಸ್ಪರ್ಧಿಸುತ್ತೇನೋ ಅಥವಾ ಸುನೀಲ್ ಬೋಸ್ ಸ್ಪರ್ಧೆ ಮಾಡುತ್ತಾನೋ ಆ ಬಗ್ಗೆ ಯಾವುದೇ ಅಪಸ್ವರ ಬೇಡ. ನನಗಿಂತಲೂ ಸುನೀಲ್ ಬೋಸ್ ಜನರೊಂದಿಗಿದ್ದು ಕೆಲಸ ಮಾಡುತ್ತಾನೆ. ಆತನನ್ನೇ ಮುಂಬರುವ ಚುನಾವಣೆಯಲ್ಲಿ ಗೆಲ್ಲಿಸಿಕೊಳ್ಳಬೇಕು ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಚನ್ನಕೇಶವ, ಪುರಸಭಾಧ್ಯಕ್ಷ ಎಸ್.ಮದನ್ ರಾಜ್, ಉಪಾಧ್ಯಕ್ಷೆ ನಾಗರತ್ನ ಮಾದೇಶ್, ಜಿಪಂ ಮಾಜಿ ಸದಸ್ಯೆ ಎಂ.ಸುಧಾ ಮಹದೇವಯ್ಯ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಮಾಜಿ ನಿರ್ದೇಶಕ ಬಸವಣ್ಣ, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕಿ ಲತಾ ಜಗದೀಶ್, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಎಂ.ಜೆ.ಶಿವಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನಸ್ವಾಮಿ, ಹೆಚ್.ಎನ್. ಉಮೇಶ್, ಮಾಜಿ ಉಪಾಧ್ಯಕ್ಷ ಪ್ರಸನ್ನ, ಮಾಜಿ ಸದಸ್ಯರಾದ ಗಣೇಶ್, ರಾಮಲಿಂಗಯ್ಯ, ಶಿವಸ್ವಾಮಿ, ರಂಗಸ್ವಾಮಿ, ಸೋಮಣ್ಣ, ಮಲ್ಲಾಜಮ್ಮ, ಕೋಕಿಲ, ಗ್ರಾಪಂ ಅಧ್ಯಕ್ಷರಾದ ಜಯರಾಮೇಗೌಡ, ಮರಿ ಸ್ವಾಮಿ, ಪುರಸಭೆ ಸದಸ್ಯರಾದ ಟಿ.ಎಂ.ನಂಜುಂಡಸ್ವಾಮಿ, ಸಿ.ಪ್ರಕಾಶ್, ಮುಖಂಡರಾದ ಬಸವರಾಜು, ಎ.ಬಿ.ಮಂಜುನಾಥ್, ಸ್ವಾಮಿಗೌಡ, ಎಂ.ಬಿ.ಚಂದ್ರ ಶೇಖರ್, ಜೆ.ಅನುಪ್‌ಗೌಡ, ಗೋಪಿ, ಬೋರೇಗೌಡ, ಮಹದೇವಸ್ವಾಮಿ, ನಾಗೇಶ್, ಸಿದ್ಧಶೆಟ್ಟಿ, ಶಿವಣ್ಣ ಇನ್ನಿತರರಿದ್ದರು.

ಸಾರ್ವಜನಿಕ ಬದುಕಿನ ದೊಡ್ಡ ನಾಯಕ ಸಿದ್ದರಾಮಯ್ಯ

ಸಿದ್ದರಾಮಯ್ಯ ಸಾರ್ವಜನಿಕ ಬದುಕಿನ ದೊಡ್ಡ ಮಟ್ಟದ ನಾಯಕ. 75 ವರ್ಷ ತುಂಬಿದ ಸಿದ್ದು 40 ವರ್ಷ ಸಕ್ರಿಯ ರಾಜಕಾರಣದಲ್ಲಿದ್ದು ರಾಜಕೀಯ ನಾಯಕತ್ವ ವಹಿಸಿಕೊಂಡು ಮಾಡುತ್ತಿರುವ ಸೇವೆ ಅನನ್ಯ. ಸಿದ್ದು ಅವರಂತಹ ನಾಯಕರು ಸಾರ್ವಜನಿಕ ಜೀವನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಬಂದಾಗ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಯಲಿದೆ. ಇಲ್ಲವಾದಲ್ಲಿ ವ್ಯಾಪಾರಸ್ಥರು, ಗೂಂಡಾಗಳು ಮತ್ತು ಹಣವಂತರ ಪಾಲಾಗುತ್ತದೆ ಎಂದು ಮಹದೇವಪ್ಪ ಆತಂಕ ವ್ಯಕ್ತಪಡಿಸಿದರು.

ಜಗಳ ಬಿಡಿಸಲು ಹೋದ ವ್ಯಕ್ತಿ ಹತ್ಯೆ

ಹುಣಸೂರು, ಜು.18– ಜಗಳ ಬಿಡಿಸಲು ಹೋದ ವ್ಯಕ್ತಿಯೋರ್ವನನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ತಾಲೂಕಿನ ರಾಮನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಸಿದ್ದನಾಯಕ ಅವರ ಪುತ್ರ ಶೇಖರ್(37) ಹತ್ಯೆಗೊಳಗಾದವರು. ಅದೇ ಗ್ರಾಮದ ಸಿದ್ದನಾಯಕ(40) ಹತ್ಯೆಗೈದ ಆರೋಪಿ.

ವಿವರ: ಗ್ರಾಮದ ನಿವಾಸಿಗಳಾದ ಶೇಖರ್, ಸಿದ್ದನಾಯಕ ಹಾಗೂ ರಾಜೇಶ್ ಮೂವರು ಸ್ನೇಹಿತರಾಗಿದ್ದು, ಇವರು ಶನಿವಾರ ಸಂಜೆ ಸಿದ್ದನಾಯಕನ ಮನೆಯಲ್ಲಿ ಊಟ ಮಾಡುತ್ತಿದ್ದರು. 1500 ರೂ. ಹಣ ನೀಡುವ ವಿಚಾರವಾಗಿ ರಾಜೇಶ್ ಮತ್ತು ಸಿದ್ದನಾಯಕನ ನಡುವೆ ಮಾತಿಗೆ ಮಾತು ಬೆಳೆದು ಇಬ್ಬರ ನಡುವೆ ಗಲಾಟೆ ನಡೆದಿದೆ. ಈ ವೇಳೆ ಇವರಿಬ್ಬರನ್ನು ಸಮಾಧಾನಪಡಿಸಲು ಮಧ್ಯ ಪ್ರವೇಶಿಸಿದ ಶೇಖರ್‌ಗೆ ಸಿದ್ದನಾಯಕ ಚಾಕುವಿನಿಂದ ಹೊಟ್ಟೆಗೆ ಇರಿದಿದ್ದಾರೆ. ಈ ವೇಳೆ ತೀವ್ರ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದ ಶೇಖರ್‌ನನ್ನು ತಕ್ಷಣ ಕೆ.ಆರ್.ನಗರ ಹಾಗೂ ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಶೇಖರ್ ಭಾನುವಾರ ರಾತ್ರಿ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಡಿವೈಎಸ್ಪಿ ರವಿ ಪ್ರಸಾದ್, ಇನ್ಸ್‌ಪೆಕ್ಟರ್ ಚಿಕ್ಕಸ್ವಾಮಿ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣ ಸಂಬಂಧ ಆರೋಪಿ ಸಿದ್ದನಾಯಕನನ್ನು ವಶಕ್ಕೆ ಪಡೆದಿರುವ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

ಸ್ಕೂಟರ್‌ಗೆ ಲಾರಿ ಡಿಕ್ಕಿ: ಯುವತಿ ಸ್ಥಳದಲ್ಲೇ ಸಾವು

ನಂಜನಗೂಡು, ಜು.18– ಸ್ಕೂಟರ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಯುವತಿ ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೋರ್ವ ಯುವತಿ ತೀವ್ರ ಗಾಯಗೊಂಡಿರುವ ಘಟನೆ ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿಯ ತಾಲೂಕಿನ ಕಳಲೆ ಗೇಟ್ ಬಳಿ ನಡೆದಿದೆ.

ನಗರದ ಅಶೋಕಪುರಂ ನಿವಾಸಿ ನಿರ್ಮಲ(20) ಮೃತಪಟ್ಟ ಯುವತಿ. ತೀವ್ರ ಗಾಯಗೊಂಡಿರುವ ನಗರದ ಆರ್.ಪಿ.ರಸ್ತೆ ನಿವಾಸಿ ರಮ್ಯಾಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಬ್ಯುಟಿಷಿಯನ್ ಆಗಿದ್ದ ನಿರ್ಮಲ ಮತ್ತು ರಮ್ಯಾ ಕೆಲಸದ ನಿಮಿತ್ತ ತಮ್ಮ ಟಿವಿಎಸ್ ಜುಪಿಟರ್(ಕೆಎ.09, ಎಡಿ.7746)ನಲ್ಲಿ ನಂಜನಗೂಡಿನಿಂದ ಗುಂಡ್ಲುಪೇಟೆ ಕಡೆಗೆ ತೆರಳುತ್ತಿದ್ದರು. ಈ ವೇಳೆ ಹಿಂದಿನಿಂದ ಬಂದ ಲಾರಿ(ಎಪಿ02, ಟಿಡಿ7479) ಡಿಕ್ಕಿ ಹೊಡೆದ ಪರಿಣಾಮ ಸ್ಕೂಟರ್ ಹಿಂಬದಿ ಕುಳಿತಿದ್ದ ನಿರ್ಮಲ ರಸ್ತೆಗೆ ಬಿದ್ದಿದ್ದು, ಲಾರಿ ಆಕೆ ಮೇಲೆ ಹರಿದ ಪರಿಣಾಮ ಸ್ಥಳದಲ್ಲೇ ಸಾವನ್ನಪ್ಪಿದ್ದು, ರಮ್ಯಾ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನೆ ಬಳಿಕ ಲಾರಿ ಚಾಲಕ ಪರಾರಿಯಾಗಿದ್ದಾನೆ ಎಂದು ಸಂಚಾರಿ ಪೊಲೀಸ್ ಠಾಣೆ ಎಸ್‌ಐ ಲೋಹಿತ್ ತಿಳಿಸಿದ್ದಾರೆ. ಈ ಸಂಬಂಧ ನಂಜನಗೂಡು ಸಂಚಾರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.


ಭಾರೀ ಮಳೆ: ಮನೆ ಗೋಡೆ ಕುಸಿತ

ಸರಗೂರು, ಜು.18– ಭಾರೀ ಮಳೆಗೆ ಮನೆ ಗೋಡೆ ಕುಸಿದಿರುವ ಘಟನೆ ಪಟ್ಟಣದ 4ನೇ ವಾರ್ಡ್‌ನಲ್ಲಿ ಭಾನುವಾರ ರಾತ್ರಿ ನಡೆದಿದೆ.



ಇಲ್ಲಿನ ನಿವಾಸಿ ಸತೀಶ್ ಎಂಬುವರ ಮನೆ ಗೋಡೆ ಕುಸಿದಿದ್ದು, ಪತ್ನಿ ಗೀತಾಂಜಲಿ ಹಾಗೂ ಇಬ್ಬರು ಮಕ್ಕಳು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆದರೆ ದಿನಬಳಕೆಯ ವಸ್ತುಗಳು ನಾಶವಾಗಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಹೀಗಾಗಿ ಕಂದಾಯ ಅಧಿಕಾರಿಗಳು ಹಾಗೂ ಪಟ್ಟಣ ಪಂಚಾಯತ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವಂತೆ ಪಪಂ ಸದಸ್ಯ ಎಸ್.ಎಲ್.ರಾಜಣ್ಣ, ಮಾಜಿ ಅಧ್ಯಕ್ಷ ಶಿವಣ್ಣ ಒತ್ತಾಯಿಸಿದ್ದಾರೆ.

ಇಂದು ನಾಡಪ್ರಭು ಕೆಂಪೇಗೌಡರ ಜಯಂತಿ



ಹೆಚ್.ಡಿ.ಕೋಟೆ, ಜು.18– ಪಟ್ಟಣದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಜು.19ರಂದು ಬೆಳಗ್ಗೆ 11 ಗಂಟೆಗೆ ಅದ್ಧೂರಿಯಾಗಿ ಆಚರಿಸಲಾಗುವುದು ಎಂದು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಟಿ.ವೆಂಕಟೇಶ್ ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ಗದ್ದಿಗೆ ವೃತ್ತದಲ್ಲಿ ಕೆಂಪೇಗೌಡರ ಭಾವಚಿತ್ರ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾ ಪ್ರಕಾರಗಳು ಭಾಗವಹಿಸಲಿದ್ದು, ಪದವಿ ಪೂರ್ವ ಕಾಲೇಜು ಆವರಣದಲ್ಲಿ ಮೆರವಣಿಗೆ ಸಮಾವೇಶಗೊಳ್ಳುವುದು. ಕಾರ್ಯಕ್ರಮದಲ್ಲಿ ತಾಲೂಕಿನ 5 ಸಾವಿರ ಮಂದಿ ಪಾಲ್ಗೊಳ್ಳಲಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಸೋಮೇಶ್ವರ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಸಂಸದ ವಿ.ಶ್ರೀನಿವಾಸ ಪ್ರಸಾದ್, ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಶಾಸಕ ಅನಿಲ್ ಚಿಕ್ಕಮಾದು ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ.

ಗೋಷ್ಠಿಯಲ್ಲಿ ಸುರೇಂದ್ರ ಡಿ.ಗೌಡ, ಹೆಚ್.ಎಂ.ರಾಮು, ಹೆಚ್.ಬಿ.ಪ್ರಕಾಶ್, ಚಲುವರಾಜ್, ಮಹೇಶ್, ಕಲ್ಲು ವೀರೇಗೌಡ, ಶಿವಲಿಂಗೇಗೌಡ, ಕಾಳಪ್ಪ, ಸುಧೀರ್ ಇದ್ದರು.

ತಿಪ್ಪೂರು ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಭೇರ್ಯ/ಹೆಬ್ಬಾಳು, ಜು.18– ಇಲ್ಲಿನ ತಿಪ್ಪೂರು ಗ್ರಾಪಂ ಅಧ್ಯಕ್ಷೆಯಾಗಿ ಅನಸೂಯ, ಉಪಾಧ್ಯಕ್ಷರಾಗಿ ಶಿವಣ್ಣ ಆಯ್ಕೆಯಾಗಿದ್ದಾರೆ.

ಒಟ್ಟು 18 ಸದಸ್ಯ ಬಲದ ಗ್ರಾಪಂನ ಅಧ್ಯಕ್ಷ ಸ್ಥಾನ ಹಿಂದುಳಿದ ಎ ವರ್ಗ, ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿತ್ತು. ಈ ಹಿಂದಿನ ಅಧ್ಯಕ್ಷೆಯಾಗಿದ್ದ ಅನಸೂಯ, ಉಪಾಧ್ಯಕ್ಷರಾಗಿದ್ದ ನೀಲಯ್ಯ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ತಿಪ್ಪೂರು ಗ್ರಾಪಂ ಸಭಾಂಗಣದಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅನಸೂಯ, ರತ್ನಮ್ಮ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶಿವಣ್ಣ ಹಾಗೂ ಟಿ.ಎಸ್.ಸತ್ಯನಾರಾಯಣ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ 10 ಮತ ಪಡೆದು ಅನಸೂಯ ಅಧ್ಯಕ್ಷೆಯಾಗಿ ಆಯ್ಕೆಯಾದರೇ, ಪ್ರತಿಸ್ಪರ್ಧಿ ರತ್ನಮ್ಮ 8 ಮತ ಪಡೆದು ಪರಾಭವಗೊಂಡರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಶಿವಣ್ಣ ಸಹ 10 ಮತ ಪಡೆದು ಚುನಾಯಿತರಾದರೇ, ಪ್ರತಿಸ್ಪರ್ಧಿ ಸತ್ಯನಾರಾಯಣ 8 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಅಶೋಕ್ ನೂತನ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಯನ್ನು ಘೋಷಿಸಿದರು.



ಚುನಾವಣಾ ಸಭೆಯಲ್ಲಿ ಸದಸ್ಯರಾದ ಹೆಚ್.ಆರ್.ಭವ್ಯ, ಎ.ಪಿ.ದಾಕ್ಷಾಯಿಣಿ, ಮಧು, ಪಿ.ರಾಮಕೃಷ್ಣೇಗೌಡ, ಶೋಭಾ, ನೀಲಯ್ಯ, ಟಿ.ಸಿ.ಭಾಸ್ಕರನಾಯಕ, ಭಾರತಿ, ಕೆ.ಸಿ.ರಮ್ಯಾ, ಡಿ.ಕೆ.ಅನಿತಾ, ಡಿ.ಜೆ.ಮಹದೇವ, ಶೈಲಜಾ, ರಾಜೇಗೌಡ ಹಾಜರಿದ್ದರು.

ಇದರಿಂದ ಜೆಡಿಎಸ್ ತೆಕ್ಕೆಯಲ್ಲಿದ್ದ ಪಂಚಾಯಿತಿ ಆಡಳಿತವನ್ನು ಕಾಂಗ್ರೆಸ್ ತನ್ನದಾಗಿಸಿಕೊಂಡಿದೆ. ಈ ಹಿಂದೆ ಅನುಸೂಯ ಅವರು ಜೆಡಿಎಸ್ ಬೆಂಬಲಿತರಾಗಿ ಅಧ್ಯಕ್ಷರಾಗಿದ್ದು, ಪಕ್ಷದ ಅಂತರಿಕ ಒಪ್ಪಂದದಂತೆ ರಾಜೀನಾಮೆ ನೀಡಿದ್ದರು. ಆದರೆ ಅವರು ಮತ್ತೆ ಅಧ್ಯಕ್ಷರಾಗುವ ಆಸೆಯಿಂದ ಕಾಂಗ್ರೆಸ್ ಪರವಾಗಿ ನಾಮಪತ್ರ ಸಲ್ಲಿಸಿ ಆಯ್ಕೆಯಾದರು.

ಚುನಾವಣಾ ಫಲತಾಂಶ ಪ್ರಕಟವಾಗುತ್ತಿದ್ದಂತೆ ಕಾಂಗ್ರೆಸ್ ಮುಖಂಡರಾದ ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್, ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಆನಂದ್, ಸೊಸೈಟಿ ನಿರ್ದೇಶಕ ವಿಶ್ವನಾಥ್, ತಾಲೂಕು ಕುಕ್ಕುಟ ಮಹಾಮಂಡಳ ನಿರ್ದೇಶಕ ರವಿ, ತಾಲೂಕು ಕಾಂಗ್ರೆಸ್ ಎಸ್‌ಟಿ ಘಟಕದ ಅಧ್ಯಕ್ಷ ಮಹದೇವನಾಯಕ, ರುಕ್ಮಾಂಗದ, ರಾಮಕೃಷ್ಣ, ದಿಲೀಪ್, ಡಿ.ಸಿ.ಕುಮಾರ್, ಗಂಗನಾಯಕ್, ತಿಮ್ಮನಾಯಕ, ದಿನೇಶ್, ಜಗದೀಶ್, ರಮೇಶ್, ಮಹದೇವ, ಸಂತೋಷ್ ಮತ್ತಿತರರು ಹಾಜರಿದ್ದು ಪಟಾಕಿ ಸಿಡಿಸಿ ಸಿಹಿ ಹಂಚಿ ಕಾಂಗ್ರೆಸ್, ಡಿ.ರವಿಶಂಕರ್ ಪರ ಘೋಷಣೆ ಕೂಗಿ ಹರ್ಷ ವ್ಯಕ್ತಪಡಿಸಿದರು.

ಕಾಡಾನೆಗಳ ದಾಳಿ: ತಾಳೆ ಬೆಳೆ ನಾಶ

ಸರಗೂರು, ಜು.18– ಕಾಡಾನೆ ದಾಳಿಗೆ ತಾಳೆ ಬೆಳೆ ನಾಶವಾಗಿರುವ ಘಟನೆ ತಾಲೂಕಿನ ಹುಸ್ಕೂರಿನಲ್ಲಿ ನಡೆದಿದೆ.

ಗ್ರಾಮದ ರತ್ನಯ್ಯ ಎಂಬುವರ ಜಮೀನಿನಲ್ಲಿ ಬೆಳೆದಿದ್ದ ತಾಳೆಗಿಡಗಳನ್ನು ಕಾಡಾನೆಗಳು ತುಳಿದು ನಾಶಗೊಳಿಸಿದೆ. ರತ್ನಯ್ಯ ಅವರು ತಮ್ಮ 12 ಎಕರೆ ಜಮೀನಿನಲ್ಲಿ 800 ತಾಳೆ ಗಿಡಗಳನ್ನು ನೆಟ್ಟಿದ್ದರು. ಆದರೆ ಇಲ್ಲಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮೊಳೆಯೂರು ಅರಣ್ಯ ವಲಯದಿಂದ ಬಂದ ಕಾಡಾನೆಗಳು 60 ಗಿಡಗಳನ್ನು ತುಳಿದು ನಾಶಗೊಳಿಸಿವೆ ಎಂದು ರೈತ ರತ್ನಯ್ಯ ಅಳಲು ತೋಡಿಕೊಂಡಿದ್ದಾರೆ.

ಜಮೀನಿನ ಸುತ್ತಲೂ ಸೋಲಾರ್ ತಂತಿ ಅಳವಡಿಸಿದ್ದರೂ, ಕಾಡಾನೆಗಳು ಸೋಲಾರ್ ತಂತಿ ಕಿತ್ತುಹಾಕಿ ಜಮೀನಿಗೆ ಪ್ರವೇಶಿಸಿ ತಾಳೆಗಿಡಗಳನ್ನು ನಾಶಗೊಳಿಸಿವೆ. ಇದರಿಂದಾಗಿ 30 ಸಾವಿರ ರೂ. ಹೆಚ್ಚು ನಷ್ಟವಾಗಿದೆ. ತೋಟಗಾರಿಕೆ ಇಲಾಖೆಯಿಂದ ಗಿಡಗಳನ್ನು ತಂದು ನಾಟಿ ಮಾಡಲಾಗಿತ್ತು. ಕಾಡಾನೆಗಳು ತುಳಿದು ನಾಶ ಮಾಡಿರುವ ಗಿಡಗಳನ್ನು ತೆರವುಗೊಳಿಸಿ, ಮತ್ತೆ ಅದೇ ಜಾಗದಲ್ಲಿ ಗಿಡಗಳನ್ನು ನಾಟಿ ಮಾಡಲು ತೋಟಗಾರಿಕೆ ಇಲಾಖೆ ಅಧಿಕಾರಿಗಳು ಹೆಚ್ಚುವರಿ ಗಿಡಗಳನ್ನು ನೀಡಬೇಕೆಂದು ರೈತ ರತ್ನಯ್ಯ ಮನವಿ ಮಾಡಿದ್ದಾರೆ.

ಹೋಬಳಿಗೊಂದು ವೈನ್‌ಸ್ಟೋರ್ ವಿಸ್ತರಣೆಯೇ ಶಾಸಕರ ಸಾಧನೆ

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಟೀಕೆ

ನಂಜನಗೂಡು, ಜು.18– ನಂಜನಗೂಡು ಕ್ಷೇತ್ರದಲ್ಲಿ ಶಾಸಕರು ಕಳೆದ 4 ವರ್ಷದಿಂದ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಬದಲಾಗಿ ಹೋಬಳಿಗೊಂದು ಹೊಸ ವೈನ್‌ಸ್ಟೋರ್ ವಿಸ್ತರಣೆ ಮಾಡಿದ್ದೆ ದೊಡ್ಡ ಸಾಧನೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಶಾಸಕ ಬಿ.ಹರ್ಷವರ್ಧನ್ ವಿರುದ್ಧ ಟೀಕಾಪ್ರಹಾರ ನಡೆಸಿದರು.

ನಗರದ ಆರ್.ಪಿ.ರಸ್ತೆಯಲ್ಲಿರುವ ಮಹದೇಶ್ವರ ಯಾತ್ರಿ ಭವನದಲ್ಲಿ ಕಾಂಗ್ರೆಸ್ ಪಕ್ಷದಿಂದ ನಡೆದ ಕಾಂಗ್ರೆಸ್ ಡಿಜಿಟಲ್ ಸದಸ್ಯತ್ವ ಅಭಿಯಾನದಲ್ಲಿ 100ಕ್ಕೂ ಹೆಚ್ಚು ಸದಸ್ಯರನ್ನು ನೋಂದಾಯಿಸಿದವರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಅವರದೇ ಸರ್ಕಾರವಿದೆ. ಇವರು ಬಂದ ಮೇಲೆ ಹೊಸ ಆಸ್ಪತ್ರೆ, ಶಾಲೆ, ಕಾಲೇಜು, ಪ್ರೌಢಶಾಲೆ, ವಿದ್ಯಾಸಂಸ್ಥೆಗಳನ್ನು ತರುತ್ತಾರೆ. ಕೆರೆ ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆ ಜಾರಿಗೆ ತರುತ್ತಾರೆ. ನಂಜನಗೂಡು ವಿಧಾನಸಭಾ ಕ್ಷೇತ್ರ ಪ್ರಗತಿಯಾಗಲಿದೆ ಅಂದುಕೊಂಡಿದ್ದೆ. ಹುರಾ ಭಾಗದ ಕೆರೆಗೆ ನೀರು ತುಂಬಿಸುವ ಯೋಜನೆಗೆ ಅನುದಾನ ಬಿಡುಗಡೆಯಾಗಿದ್ದರೂ ಸಹ ಇನ್ನೂ ಕಾಮಗಾರಿ ಪ್ರಾರಂಭವಾಗಿಲ್ಲ. ನಿಮ್ಮ ಯೋಜನೆಗಳು, ಆಲೋಚನೆಗಳು ಜನರ ಜೀವನ ಮಟ್ಟ ಸುಧಾರಣೆಯತ್ತ, ಕ್ಷೇತ್ರದ ಅಭಿವೃದ್ಧಿ ಕಡೆಗೆ ಇರಬೇಕೆ ವಿನಃ ವೈನ್‌ಸ್ಟೋರ್‌ಗಳನ್ನು ಪ್ರಾರಂಭಿಸಲು ಅಲ್ಲ ಎಂದು ಚಾಟಿ ಬೀಸಿದರು.



ಶಾಸಕರ ನಡೆಯಿಂದ ಕ್ಷೇತ್ರದ ಬಹಳಷ್ಟು ಮಂದಿ ಬೇಸರಗೊಂಡು ಬಿಜೆಪಿ ತೊರೆದು ಕಾಂಗ್ರೆಸ್ ಸೇರಲಿದ್ದಾರೆ. ಕಾರ್ಯಕರ್ತರು ಶಾಸಕರ, ಸರ್ಕಾರದ ವೈಫಲ್ಯಗಳನ್ನು ಜನರಿಗೆ ತಿಳಿಸಿ ಪಕ್ಷ ಸಂಘಟಿಸಿ ಎಂದರು.

ಪ್ರಧಾನಿ ಮೋದಿ ಕಳೆದ 8 ವರ್ಷಗಳಲ್ಲಿ ಜನರ ಜೀವನ ಸುಧಾರಣೆ ಮಾಡುವ ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. ದೇಶದ ಪ್ರಗತಿ ಶೂನ್ಯವಾಗಿದೆ. ರೂಪಾಯಿ ಮೌಲ್ಯ 80 ರೂ. ದಾಟಿದೆ. ಬಿಜೆಪಿ ಭ್ರಷ್ಟಾಚಾರ ಮುಚ್ಚಿಕೊಳ್ಳಲು ಧರ್ಮವನ್ನು ಮುನ್ನೆಲೆಗೆ ತಂದು ಶಾಂತಿ ಕದಡುತ್ತಿದ್ದಾರೆ. ಇಂತಹ ಧರ್ಮ ಪ್ರಚೋದನೆಗೆ ಕಡಿವಾಣ ಹಾಕುವ ಸಲುವಾಗಿ ಮತ್ತು ಸರ್ಕಾರಗಳ ವೈಫಲ್ಯಗಳನ್ನು ಜನರಿಗೆ ತಿಳಿಸಿ ಪಕ್ಷ ಸಂಘಟನೆ ಮಾಡುವಂತೆ ಸಲಹೆ ನೀಡಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಕ್ಷೇತ್ರದಲ್ಲಿ 41,483 ಮಂದಿ ಹೊಸ ಸದಸ್ಯರನ್ನು ನೋಂದಣಿ ಮಾಡಲಾಗಿದ್ದು ಜಿಲ್ಲೆಗೆ ನಂಜನಗೂಡು 2 ಸ್ಥಾನ ಪಡೆದುಕೊಂಡಿದೆ. ಈ ಸದಸ್ಯತ್ವ ನೋಂದಣಿ ಅಭಿಯಾನ ಪಕ್ಷವನ್ನು ತಳಮಟ್ಟದಲ್ಲಿ ಸಂಘಟಿಸಲು ಸಾಧ್ಯವಾಗಲಿದೆ ಎಂದರು.

ಸಮಾರಂಭದಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯಕುಮಾರ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಜಿಪಂ ಮಾಜಿ ಸದಸ್ಯೆ ಲತಾ ಸಿದ್ದಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಕೆಪಿಸಿಸಿ ಸದಸ್ಯ ಅಕ್ಬರ್‌ಅಲಿಂ, ಮುಖಂಡರಾದ ಉಪ್ಪಿನಹಳ್ಳಿ ಶಿವಣ್ಣ, ದೊರೆಸ್ವಾಮಿ ನಾಯಕ, ಎಂ.ಮಾದಪ್ಪ, ಕಳಲೆ ರಾಜೇಶ್, ಕೂಡ್ಲಾ ಪುರರಾಜು, ಹುಂಡಿ ನಾಗರಾಜು, ವಕೀಲ ನಾಗರಾಜಯ್ಯ, ಶ್ರೀಧರ್, ಶಿವಪ್ಪದೇವರು, ಯುವ ಅಧ್ಯಕ್ಷ ಅಶೋಕ್, ನಗರಸಭಾ ಸದಸ್ಯರಾದ ಗಂಗಾಧರ್, ಎಸ್.ಪಿ.ಮಹೇಶ್, ಪ್ರದೀಪ್ ಸೇರಿದಂತೆ ಕಾರ್ಯಕರ್ತರು ಇದ್ದರು.

> **ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮಿತಿ ಮೀರಿದೆ. ದಿನಾ ಒಂದಿಲ್ಲೊಂದು ಪ್ರಕರಣಗಳಲ್ಲಿ ಸಿಲುಕಿಕೊಳ್ಳುತ್ತಿದ್ದಾರೆ. ಭ್ರಷ್ಟಾಚಾರದ ಬಗ್ಗೆ ಅವರದೇ ಪಕ್ಷದ ಬಸವರಾಜ ಪಾಟೀಲ್ ಯತ್ನಾಳ್, ವಿಶ್ವನಾಥ್ ಆರೋಪಿಸುತ್ತಿದ್ದಾರೆ. ಅವರ ಮೇಲೆ ನೀವು ಕ್ರಮ ಕೈಗೊಳ್ಳಲು ಸಾಧ್ಯವೇ? ಎಂದ ಅವರು, ಪಿಎಸ್‌ಐ ಹಗರಣದಲ್ಲಿ ಮಂತ್ರಿಗಳ ಬೆಂಬಲವಿಲ್ಲದೆ ಎಡಿಜಿಪಿ ಹಗರಣ ಮಾಡಲು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ಮಂತ್ರಿಗಳನ್ನೂ ಸಹ ಬಂಧಿಸಬೇಕಿತ್ತು. ಜೊತೆಗೆ ಗುತ್ತಿಗೆದಾರರು ಶೇ.40 ಕಮಿಷನ್ ನೀಡಬೇಕೆಂದು ಆರೋಪಿಸಿದ್ದಾರೆ. ಇದರಿಂದಲೇ ಈಶ್ವರಪ್ಪರವರು ರಾಜೀನಾಮೆ ಕೊಡಬೇಕಾಗಿ ಬಂತು.**
> - **ಆರ್.ಧ್ರುವನಾರಾಯಣ್**, ಕೆಪಿಸಿಸಿ ಕಾರ್ಯಾಧ್ಯಕ್ಷ.

ಇಂದು ಅಪ್ಪಾಜಿ ಕ್ಯಾಂಟೀನ್ ಉದ್ಘಾಟನೆ



> **ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ತಾಲೂಕಿನಲ್ಲಿ ಪಕ್ಷ ಬಲಗೊಳಿಸುವ ನಿಟ್ಟಿನಲ್ಲಿ ಎಲ್ಲಾ ಮುಖಂಡರ ಸಹಕಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ಜೆಡಿಎಸ್ ಭದ್ರಕೋಟೆಯಾಗಿದ್ದು, ಕಾರ್ಯಕರ್ತರನ್ನು ಒಗ್ಗೂಡಿಸಿ ಪಕ್ಷ ಬಲಪಡಿಸುತ್ತೇನೆ.**
> -**ಕೆ.ಎಂ.ಕೃಷ್ಣನಾಯಕ**, ಜೆಡಿಎಸ್ ಮುಖಂಡ.

ಹೆಚ್.ಡಿ.ಕೋಟೆ, ಜು.18– ಪಟ್ಟಣದ ತಾಲೂಕು ಕಚೇರಿ ಎದುರು ನೂತನವಾಗಿ ಆರಂಭವಾಗುತ್ತಿರುವ ಅಪ್ಪಾಜಿ ಕ್ಯಾಂಟೀನ್ ಅನ್ನು ಜು.19ರಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಉದ್ಘಾಟಿಸಲಿದ್ದಾರೆ ಎಂದು ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ತಿಳಿಸಿದರು.

ಬೆಳಗ್ಗೆ 11.30ಕ್ಕೆ ಅಪ್ಪಾಜಿ ಕ್ಯಾಂಟೀನ್ ಉದ್ಘಾಟಿಸುವ ಕುಮಾರಸ್ವಾಮಿ ಅವರು, ನಂತರ ಕೋಟೆ–ಸರಗೂರು ತಾಲೂಕಿನ ಸುಮಾರು 15 ಸಾವಿರಕ್ಕೂ ಹೆಚ್ಚು ರೈತರಿಗೆ ಉಚಿತವಾಗಿ ತೆಂಗಿನ ಗಿಡ ವಿತರಿಸಲಿದ್ದಾರೆ. ತಾಲೂಕಿನ ಕೂಲಿ ಕಾರ್ಮಿಕರು, ಬಡವರು ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮಾಜಿ ಸಿಎಂ ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಅಪ್ಪಾಜಿ ಕ್ಯಾಂಟೀನ್ ಅನ್ನು ತೆರೆಯಲಾಗುತ್ತಿದ್ದು, ಈ ಉದ್ಘಾಟನಾ ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ಮುಖಂಡರುಗಳು, ಜನಪ್ರತಿನಿಧಿಗಳು, ಕಾರ್ಯಕರ್ತರು, ಪಕ್ಷಾತೀತವಾಗಿ ಕಾರ್ಯಕ್ರಮಕ್ಕೆ ಆಗಮಿಸಬೇಕು ಎಂದು ಮನವಿ ಮಾಡಿದರು.

ಮುದ್ದಪ್ಪ ನಿಧನ



ಸರಗೂರು, ಜು.18– ವೀರಶೈವ ಸಹಕಾರ ಸಂಘದ ಅಧ್ಯಕ್ಷ ಹಂಚೀಪುರ ಗಣಪತಿ ಅವರ ಸಹೋದರ ಮುದ್ದಪ್ಪ (82) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಳೆಯಿಂದ ಮೈಸೂರು ಜಿಲ್ಲೆಯಲ್ಲಿ 350 ಹೆಕ್ಟೇರ್ ಬೆಳೆ ನಾಶ, 600 ಮನೆಗೆ ಹಾನಿ



ಮೈಸೂರು,ಜು.18(ಎಂಟಿವೈ)– ಕಳೆದ ಹಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಮೈಸೂರು ಜಿಲ್ಲೆಯಲ್ಲಿ ಪ್ರಸ್ತುತ 350 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾಗೂ 600 ಮನೆಗಳಿಗೆ ಹಾನಿಯಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿಲ್ಲ. ಜಿಲ್ಲಾ ವ್ಯಾಪ್ತಿಗೆ ಒಳಪಡುವ ಕಬಿನಿ ಜಲಾಶಯಕ್ಕೆ 33 ಸಾವಿರ ಕ್ಯೂಸೆಕ್ಸ್ ನೀರು ಒಳಹರಿವಿದ್ದು, ಅಷ್ಟೇ ಪ್ರಮಾಣದಲ್ಲಿ ನದಿಗೆ ನೀರನ್ನು ಹೊರ ಬಿಡಲಾಗುತ್ತಿದೆ. ಇದರಿಂದ ಭಾರಿ ಪ್ರಮಾಣದ ಹಾನಿ ಸಂಭವಿಸಿಲ್ಲ. ಕಪಿಲಾ ನದಿಯಲ್ಲಿ ನೀರಿನ ಪ್ರಮಾಣ ಹೆಚ್ಚಾದ ಹಿನ್ನೆಲೆಯಲ್ಲಿ ನಂಜನಗೂಡು, ತಿ.ನರಸೀಪುರ ಭಾಗದ ನದಿ ಪಾತ್ರದಲ್ಲಿದ್ದ 150 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಅದರಲ್ಲಿ 98 ಹೆಕ್ಟೇರ್‌ನಲ್ಲಿ ಭತ್ತ ಬೆಳೆ, ಪಿರಿಯಾಪಟ್ಟಣದಲ್ಲಿ ವಿವಿಧ ಬೆಳೆ ಬೆಳೆದಿದ್ದ ಪ್ರದೇಶದಲ್ಲಿ ನೀರು ಆವೃತವಾಗಿ ಹಾನಿಯಾಗಿದೆ. ಈಗಾಗಲೇ ಬೆಳೆ ಹಾನಿಯ ಬಗ್ಗೆ ಮಾಹಿತಿ ಕಲೆ ಹಾಕಿದ್ದು, ನಿಯಮಾನುಸಾರ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದು ಡಿಸಿ ಸ್ಪಷ್ಟಪಡಿಸಿದರು.

ಜಿಲ್ಲೆಯಲ್ಲಿ ಮಳೆ ಹಾಗೂ ಪ್ರವಾಹದ ಪರಿಸ್ಥಿತಿಯಿಂದಾಗಿ ಸಾವು–ನೋವು ಸಂಭವಿಸಿಲ್ಲ. ಜಿಲ್ಲೆಯಲ್ಲಿ ಭಾಗಶಃ ಹಾನಿಯಾಗಿರುವ 75 ಮನೆ ಸೇರಿದಂತೆ 600 ಮನೆಗಳಿಗೆ ಹಾನಿಯಾಗಿದೆ. ಮನೆ ಕಳೆದುಕೊಂಡವರಿಗೂ ಸರ್ಕಾರದ ನಿಯಮದ ಅನುಸಾರ ಪರಿಹಾರ ನೀಡಲಾಗುತ್ತದೆ ಎಂದು ತಿಳಿಸಿದರು.

ಗಡಿಭಾಗದಲ್ಲಿ ಹೈ ಅಲರ್ಟ್

ಕೇರಳದಲ್ಲಿ ಮಂಕಿಪಾಕ್ಸ್ ಸೋಂಕು ಪತ್ತೆಯಾದ ಹಿನ್ನೆಲೆಯಲ್ಲಿ ಗಡಿಭಾಗದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ. ಈಗಾಗಲೇ ಕರ್ನಾಟಕ–ಕೇರಳ ಗಡಿ ಭಾಗವಾದ ಹೆಚ್.ಡಿ. ಕೋಟೆ ತಾಲೂಕಿನ ಬಾವಲಿ ಚೆಕ್‌ಪೋಸ್ಟ್‌ನಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಗಳು ರಾಜ್ಯಕ್ಕೆ ಬರುವವರನ್ನು ತಪಾಸಣೆ ಮಾಡುತ್ತಿದ್ದಾರೆ. ಇದರಿಂದ ಪ್ರತಿಯೊಬ್ಬರನ್ನು ಸೂಕ್ಷ್ಮವಾಗಿ ತಪಾಸಣೆ ಮಾಡುತ್ತಿರುವವರಿಗೆ ಮಂಕಿಪಾಕ್ಸ್ ಗುಣಲಕ್ಷಣ ಕಂಡು ಬಂದರೆ ತುರ್ತಾಗಿ ಕ್ರಮ ಕೈಗೊಳ್ಳಲಿದ್ದಾರೆ.

–ಡಾ.ಬಗಾದಿ ಗೌತಮ್, ಜಿಲ್ಲಾಧಿಕಾರಿ

ಚಾ.ಬೆಟ್ಟದ ಗ್ರಾಮಸ್ಥರಿಂದ ಜಯ ಚಾಮರಾಜ ಒಡೆಯರ್ ಜಯಂತಿ



ಮೈಸೂರು,ಜು.18(ಎಂಟಿವೈ)– ಮೈಸೂರು ಅರಸರಾಗಿದ್ದ ಜಯಚಾಮರಾಜ ಒಡೆಯರ್ ಅವರ 103ನೇ ಜನ್ಮದಿನವನ್ನು ಚಾಮುಂಡಿಬೆಟ್ಟದ ಗ್ರಾಮಸ್ಥರು ಸಂಭ್ರಮದಿಂದ ಆಚರಿಸಿದರು. ಚಾಮುಂಡಿಬೆಟ್ಟದ ಗ್ರಾ.ಪಂ ಕಚೇರಿ ಸಮೀಪ ಪ್ರತಿಷ್ಠಾಪಿಸಲಾಗಿರುವ ಜಯಚಾಮರಾಜ ಒಡೆಯರ್ ಪುತ್ಥಳಿಯನ್ನು ಬಣ್ಣ ಬಣ್ಣದ ಹೂವುಗಳಿಂದ ಅಲಂಕೃತಗೊಳಿಸಿ ಮಾಲಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ, ಗೌರವ ಸಮರ್ಪಿಸಿದರು. ಬಳಿಕ ಮಾತನಾಡಿದ ಅವರು, ಮೈಸೂರು ಅರಸರಲ್ಲಿ ಜಯಚಾಮರಾಜ ಒಡೆಯರ್ ಅವರು ತಮ್ಮ ಆಡಳಿತಾವಧಿಯಲ್ಲಿ ಹಲವು ಜನಪ್ರಿಯ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರು. ಗ್ರಾಮೀಣ ಜನರ ಸಮಸ್ಯೆಗೆ ಸ್ಪಂದಿಸುವ ಮೂಲಕ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸಿದ್ದರು ಎಂದರು. ಇದೇ ವೇಳೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಬೆಟ್ಟದ ಗ್ರಾಮಸ್ಥರ ಪರವಾಗಿ ಗ್ರಾ.ಪಂ. ಅಧ್ಯಕ್ಷ ಕೆ.ಭರತ್ ಕಾಳಯ್ಯ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಪೂಜಾ ಕೈಂಕರ್ಯ ನೆರವೇರಿಸಿದರು. ಈ ವೇಳೆ ಗ್ರಾ.ಪಂ ಸದಸ್ಯರು, ಗ್ರಾಮದ ಮುಖಂಡರು ಪಾಲ್ಗೊಂಡಿದ್ದರು.

ನದಿಗೆ ಬಿದ್ದ ಬಸ್; 13 ಪ್ರಯಾಣಿಕರು ಸಾವು



ಧಾರ್: ಮಧ್ಯಪ್ರದೇಶದಲ್ಲಿ ಭೀಕರ ಅಪಘಾತ ಸಂಭವಿಸಿದೆ. ಸೇತುವೆಯಿಂದ ನರ್ಮದಾ ನದಿಗೆ ಮಹಾರಾಷ್ಟ್ರದ ಬಸ್‌ವೊಂದು ಉರುಳಿ ಬಿದ್ದು, 13 ಪ್ರಯಾಣಿಕರು ಸಾವನ್ನಪ್ಪಿದ್ದಾರೆ. ಘಟನೆಯಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ. ಇಂಧೋರ್‌ನಿಂದ ಪುಣೆಗೆ ತೆರಳುತ್ತಿದ್ದ ಬಸ್ ಖಲ್ಘಾಟ್ ಸಂಜಯ್ ಸೇತುವೆಯಿಂದ ನರ್ಮದಾ ನದಿಗೆ ಉರುಳಿ ಬಿದ್ದಿದೆ. ಇದರಿಂದಾಗಿ 13 ಮಂದಿ ಸಾವನ್ನಪ್ಪಿದ್ದು, 15 ಮಂದಿಯನ್ನು ರಕ್ಷಿಸಲಾಗಿದೆ.

ಜು.21ರಂದು ಆದಿವಾಸಿಗಳ ಕುರಿತು ರಾಷ್ಟ್ರೀಯ ಕಾರ್ಯಾಗಾರ

ಮೈಸೂರು, ಜು.18–ಮೈಸೂರಿನ ಅಂತರ್ಗತ ಬೆಳವಣಿಗೆ ಮತ್ತು ಅಭಿವೃದ್ಧಿ ಕೇಂದ್ರ ಮತ್ತು ಮಹಾಜನ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಜು.21 ಮತ್ತು 22ರಂದು ಎರಡು ದಿನದ ರಾಷ್ಟ್ರೀಯ ಕಾರ್ಯಾಗಾರವನ್ನು 'ಆತ್ಮ ನಿರ್ಭರ ಭಾರತ: ಸಾಮಾಜಿಕ ಮತ್ತು ಸಂಬಂಧಿತ ಅರ್ಥಶಾಸ್ತ್ರ ಹಾಗೂ ಆದಿವಾಸಿಗಳ ಅಭಿವೃದ್ಧಿ' ಎಂಬ ವಿಚಾರವಾಗಿ ಏರ್ಪಡಿಸಿದೆ. ಕಾರ್ಯಾಗಾರ ಮಹಾಜನ ಪ್ರಥಮ ದರ್ಜೆ ಕಾಲೇಜಲ್ಲಿ ನಡೆಯಲಿದೆ. ಕೊಲ್ಕತ್ತಾದ ಭಾರತೀಯ ಮಾನವ ಶಾಸ್ತ್ರೀಯ ಸರ್ವೇಕ್ಷಣಾಲಯ ಪ್ರಾಯೋಜಿಸುತ್ತಿರುವ ಕಾರ್ಯಾಗಾರದಲ್ಲಿ ಸ್ವಯಂ ಸೇವಾ ಸಂಸ್ಥೆಗಳು, ಲ್ಯಾಂಪ್ಸ್ ಸೊಸೈಟಿಗಳು, ಸ್ವಯಂ ಸೇವಾ ಸಂಸ್ಥೆಗಳು ಇಂತಹ ಲಾಭರಹಿತ ಸಂಸ್ಥೆಗಳ ಮೂಲಕ ಆದಿವಾಸಿಗಳ ಅಭಿವೃದ್ಧಿಯನ್ನು ಹೇಗೆ ಸಾಧಿಸಬಹುದು ಎನ್ನುವುದರ ಕುರಿತು ಚರ್ಚಿಸಲಾಗುವುದು. ಕಾರ್ಯಾಗಾರದಲ್ಲಿ ರಾಜ್ಯ–ದೇಶದ ಬೇರೆ ಬೇರೆ ತಜ್ಞರು ಭಾಗವಹಿಸಲಿದ್ದಾರೆ. ಆಸಕ್ತರು ಮೊ.ಸಂ. 90082 71856 ಸಂಪರ್ಕಿಸಿ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

CHANGE OF NAME
I, Shuaib Ahmed S., residing at No. 653/1, Tammaiah Mutt Road, Devaraja Mohalla, Mysore-570 001, have changed my name as Zayn Shuaib Ahmed, on my own free will, in front of Notary C.R. Seetharam on 13.7.2022. I shall be known, called and recognised Zayn Shuaib Ahmed hereinafterwards and shall also use and sign my name as such Zayn Shuaib Ahmed in all my official and private matters in future.
Sd/- Zayn Shuaib Ahmed

